ಮೈಸೂರು ಮಿತ್ರ

ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 26 ಗುರುವಾರ 2026


46

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ-ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 334 | ಪುಟಗಳು: 12
ಸುದ್ದಿ, ಫೋಟೋಗ್: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಸಾಲಕ್ಕೆ ಸಿಎಂ ಸಮರ್ಥನೆ



▸ ಪ್ರಸಕ್ತ ಸಾಲಿನ ಬಜೆಟ್ ಮೇಲಿನ ಚರ್ಚೆಗೆ ಸುದೀರ್ಘ ಉತ್ತರ
▸ ತಾವು ಮಂಡಿಸಿದ ಬಜೆಟ್ ದೂರದೃಷ್ಟಿ ಬಜೆಟ್; ನಂ. 1 ಆರ್ಥಿಕತೆ ಆಶಯ

ಬೆಂಗಳೂರು, ಮಾ.25(ಕೆಎಂಶಿ)- ರಾಜ್ಯ ಮುಂಗಡಪತ್ರ ತುಂಬಿದ ಕೊಡವೇ ಹೊರತು ಖಾಲಿ ಚೊಂಬಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಿಧಾನ ಸಭೆಯಲ್ಲಿಂದು ಸಮರ್ಥಿಸಿಕೊಂಡರು.

2026-27ನೇ ಸಾಲಿನ ಆಯ ವ್ಯಯ ಅಂದಾಜುಗಳ ಮೇಲಿನ ಚರ್ಚೆಗೆ ಉತ್ತರಿಸಿದ ಅವರು, ಮಾವಿನ ಹಣ್ಣು ಬೇವಿನ ಹಣ್ಣಾಗಲು ಸಾಧ್ಯವಿಲ್ಲ, ಬೇವಿನ ಹಣ್ಣು ಮಾವಿನ ಹಣ್ಣಾಗಲು ಸಾಧ್ಯವಿಲ್ಲ. ಹಾಗೆ ಟೀಕೆ ಮಾಡಿದ ಮಾತ್ರಕ್ಕೆ ಬಜೆಟ್‌ನ ಗಂಭೀರತೆಯೂ ಹಾಳಾಗುವುದಿಲ್ಲ, ನಾಡಿನ ಜನರು ಬುದ್ಧಿವಂತರು, ಮಾವಿನ ಹಣ್ಣನ್ನು ಮಾವಿನ ಹಣ್ಣೆಂದೇ ಭಾವಿಸುತ್ತಾರೆ ಎಂದರು.

ಸಾಲಕ್ಕೆ ಸಮರ್ಥನೆ: ಸಾಲ ಮಾಡಿರುವುದನ್ನು ಸಮರ್ಥಿಸಿಕೊಂಡ ಮುಖ್ಯಮಂತ್ರಿ, ನಮ್ಮ ಆದಾಯಕ್ಕೆ ತಕ್ಕಂತೆ ಅಭಿವೃದ್ಧಿ ಮತ್ತು ಜನಪರ ಕಾರ್ಯಕ್ರಮಗಳಿಗಾಗಿ ಸಾಲ ಮಾಡಿದ್ದೇನೆ ಎಂದರು.

ಕೇಂದ್ರ ಶೇಕಡ 50ರಷ್ಟು ಹಣವನ್ನಾದರೂ ನಮಗೆ ನೀಡಬೇಕು, ಇದಕ್ಕೆ ಒತ್ತಾಯಿಸಲು ಇಡೀ ಸದನದ ಸದಸ್ಯರ ನಿಯೋಗವನ್ನು ದೆಹಲಿಗೆ ಕೊಂಡೊಯ್ಯುತ್ತೇನೆ. ಪ್ರತಿಪಕ್ಷದ ನಾಯಕರೇ ಇದರ ಮುಂಚೂಣಿ ವಹಿಸಲಿ ನಾವು ನಿಮ್ಮ ಹಿಂದಿರುತ್ತೇವೆ, ರಾಜ್ಯಕ್ಕೆ ನ್ಯಾಯ ದೊರಕಿಸಿಕೊಡಿ ಎಂದರು. ಇಡೀ ರಾಷ್ಟ್ರದಲ್ಲಿ ಮಹಾರಾಷ್ಟ್ರದ ನಂತರ ಅಧಿಕ ಜಿಎಸ್‌ಟಿ ಸಂಗ್ರಹ ಮಾಡಿದ ರಾಜ್ಯವಾಗಿದೆ, ಆದರೆ, ನಮಗೆ ಕೇಂದ್ರ ಸರ್ಕಾರದಿಂದ ಬರುತ್ತಿರುವುದು, ನಾವು ನೀಡಿದ ತೆರಿಗೆ ಹೂಕ್ಕೂ ಇದಕ್ಕೂ ಅಜಗಜಾಂತರ ವ್ಯತ್ಯಾಸವಿದೆ

ದೂರದೃಷ್ಟಿ ಬಜೆಟ್: ನೀರಾವರಿ, ಮೂಲಸೌಕರ್ಯಕ್ಕೆ ಒತ್ತು, ಜನಪ್ರಿಯತೆ ಮತ್ತು ವಾಸ್ತವದಿಂದ ಕೂಡಿದ ರಾಜ್ಯದ ಬೊಕ್ಕಸವನ್ನು ಸುಸ್ಥಿರವಾಗಿಡುವ ದೂರದೃಷ್ಟಿಯ ಬಜೆಟ್ ಇದಾಗಿದೆ ಎಂದರು.

ನಿರುದ್ಯೋಗ ನಿವಾರಣೆ, ಸಾಮಾಜಿಕ ಭದ್ರತೆ, ಶಿಕ್ಷಣ, ಆರೋಗ್ಯ, ಮೂಲ ಸೌಕರ್ಯ ಸೇರಿದಂತೆ ಎಲ್ಲವನ್ನೂ ಒಳಗೊಂಡಿದೆ, ಹೂಡಿಕೆಗಳಿಗೆ ಹಾಗೂ ನವೋದ್ಯಮಿಗಳಿಗೆ ನೆರವಾಗುವ ಬಜೆಟ್ ಇದಾಗಿದೆ.

■ 6ನೇ ಪುಟಕ್ಕೆ

ಮುಂಜಾನೆವರೆಗೂ ನಡೆದ ವಿಧಾನಸಭೆ ಕಲಾಪ!

ಬೆಂಗಳೂರು, ಮಾ.25(ಕೆಎಂಶಿ)- ಪ್ರಸಕ್ತ ಬಜೆಟ್ ಅಧಿವೇಶನವನ್ನು ಒಂದು ದಿನ ಮುಂಚಿತವಾಗಿ ಮುಕ್ತಾಯಗೊಳಿಸುವ ಹಿನ್ನೆಲೆಯಲ್ಲಿ ಮುಂಜಾನೆವರೆಗೂ ವಿಧಾನಸಭೆಯ ಕಾರ್ಯಕಲಾಪಗಳನ್ನು ನಡೆಸಲಾಗಿದೆ. ಮಾ.27 ರಂದು ಮುಕ್ತಾಯಗೊಳ್ಳಬೇಕಿದ್ದ ಅಧಿವೇಶನವನ್ನು ನಾಳೆಗೆ ಮುಕ್ತಾಯ ಮಾಡುವುದಾಗಿ ಈಗಾಗಲೇ ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಪ್ರಕಟಿಸಿದ್ದಾರೆ.

ರಾಜ್ಯದ ಎರಡು ವಿಧಾನಸಭಾ ಉಪ ಚುನಾವಣೆ ಹಿನ್ನೆಲೆಯಲ್ಲಿ ಅಧಿವೇಶನ ಮೊಟಕುಗೊಳಿಸಲಾಗುತ್ತಿದೆ. ಇಂದು ಮುಂಜಾನೆ 1.40 ನಿಮಿಷದವರೆಗೂ ವಿಧಾನಸಭೆ ಕಾರ್ಯಕಲಾಪಗಳನ್ನು ನಡೆಸಲಾಗಿದೆ. ಸುಮಾರು 15 ಶಾಸಕರು ಬಜೆಟ್ ಕುರಿತು ಮಾತನಾಡಿ, ಸಲಹೆ ಸೂಚನೆ ನೀಡಿ ಸಾಕಷ್ಟು ಬೆಳಕು ಚೆಲ್ಲಿದ್ದಾರೆ.

ಯುಗಾದಿ, ಶಿವರಾತ್ರಿಯಂದು ನಾನು ಮಾಂಸ ತಿಂತ್ತೇನೆ...

ದೇವರ ನಂಬ್ತೇನೆ; ಆದರೆ ಆತ ದೇವಾಲಯದಲ್ಲೇ ಇರ್ತಾನೆ ಅನ್ನೋದ ನಂಬಲ್ಲ: ಸಿದ್ದರಾಮಯ್ಯ

ಬೆಂಗಳೂರು, ಮಾ.25(ಕೆಎಂಶಿ)- ಯುಗಾದಿ, ಶಿವರಾತ್ರಿ ಹಬ್ಬದ ದಿನವೂ ನಾನು ಮಾಂಸ ತಿನ್ನುತ್ತೇನೆ ಅದರಲ್ಲಿ ತಪ್ಪೇನು, ಎಲ್ಲಾ ದಿನಗಳು ಒಂದೇ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ವಿಧಾನಸಭೆಯಲ್ಲಿ ಬಜೆಟ್ ಮೇಲೆ ನಡೆದ ಚರ್ಚೆಗೆ ಉತ್ತರ ನೀಡುವ ವೇಳೆ ಅವರು, ಕರ್ಮ ಸಿದ್ಧಾಂತವನ್ನು ತಾವು ನಂಬುವುದಿಲ್ಲ. ರಾಹುಕಾಲ, ಗುಳಿಕ ಕಾಲ, ಯಮಗಂಡ ಕಾಲ ಯಾವುದರ ಮೇಲೂ ನಂಬಿಕೆ ಇಲ್ಲ, ದೇವರನ್ನು ನಂಬುತ್ತೇನೆ. ಆದರೆ, ಮೂಢನಂಬಿಕೆಗಳಿಗೆ ಜೋತು ಬೀಳುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಬಹಳಷ್ಟು ಜನ ತಮ್ಮ ಈಗಿನ ಸ್ಥಿತಿ ಅಥವಾ ದುಃಸ್ಥಿತಿಗೆ ಹಿಂದಿನ ಜನ್ಮದ ಕರ್ಮ ಎಂದು ನಂಬುತ್ತಾರೆ. ನಾನು ಅದನ್ನು ನಂಬುವುದಿಲ್ಲ. ಮೂಢ ನಂಬಿಕೆಗಳಿಂದ ದೂರ ಇದ್ದೇನೆ ಎಂದರು.

ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಮಾತನಾಡಿ, ಹೇಳುವುದು ಒಂದು, ಮಾಡುವುದು ಇನ್ನೊಂದು. ರಾಹುಕಾಲ ಕಳೆದ ಬಳಿಕ ಈ ಬಾರಿಯ ಬಜೆಟ್ ಮಂಡಿಸಿದ್ದೀರಾ. ಅಂಬೇಡ್ಕರ್, ಬಸವಣ್ಣ ಸೇರಿದಂತೆ ಹಲವರ ಸಿದ್ಧಾಂತಗಳನ್ನು ಹೇಳುತ್ತೀರಾ. ಆದರೆ, ನಿಮ್ಮ ಸಿದ್ಧಾಂತ ಯಾವುದು ಎಂದರು. ರಾಜಕೀಯ ಅಧಿಕಾರಕ್ಕಾಗಿ ನಾವೆಲ್ಲ ಕಾಯುತ್ತಿದ್ದೇವೆ. ಆದರೆ, ನಿಮಗೆ ಎಲ್ಲಾ ಕಡೆ ಬಾಗಿಲು ತೆರೆದುಕೊಂಡು ಅವಕಾಶಗಳು ಸಿಕ್ಕವು. ಜನತಾದಳದಲ್ಲಿ ಉಪಮುಖ್ಯಮಂತ್ರಿಯಾಗಿದ್ದೀರಿ, ಕಾಂಗ್ರೆಸ್‌ಗೆ ಬಂದು ಮುಖ್ಯಮಂತ್ರಿಯಾಗಿದ್ದೀರಾ, ನೀವು ಎಲ್ಲಿಗೆ ಹೋದರೂ ಅವಕಾಶ ಒದಗಿ ಬರುತ್ತಿದೆ. ಡಿ.ಕೆ.ಶಿವಕುಮಾರ್ ಅವರನ್ನು ನೋಡಿ, ಪಾಪ ದೇವಸ್ಥಾನ ಸುತ್ತುತ್ತಿದ್ದಾರೆ, ಕಾಮಾಕ್ಯದಲ್ಲಿ ಪೂಜೆ ಮಾಡಿಸಿದ್ದಾರೆ ಎನ್ನುತ್ತಿದ್ದಂತೆ ಶಿವಕುಮಾರ್ ಸದನಕ್ಕೆ ಆಗಮಿಸಿದರು.

ಇದಕ್ಕೆ ಉತ್ತರ ನೀಡಿದ ಮುಖ್ಯಮಂತ್ರಿ ಅವರು, ನಾನು ಹಿಂದೆ ರಾಹುಕಾಲದಲ್ಲೂ ಬಜೆಟ್ ಮಂಡಿಸಿದ್ದೇನೆ. ಈ ಬಾರಿ ರಾಹುಕಾಲ ಕಳೆದ ಬಳಿಕ ಬಜೆಟ್ ಮಂಡಿಸಿದ್ದು ನಿಜ.

■ 6ನೇ ಪುಟಕ್ಕೆ

ತಮ್ಮ ಬಗ್ಗೆ ಲಂಕೇಶ್, ಇತರರ ಟೀಕೆಯನ್ನು ಸವಾಲಾಗಿ ಸ್ವೀಕರಿಸಿದ್ದೆ ನನ್ನ ಉನ್ನತಿಗೆ ಕಾರಣವಾಯ್ತು!

ಬೆಂಗಳೂರು, ಮಾ.25(ಕೆಎಂಶಿ)-ಇಸ್ಪೀಟ್ ಗುಲಾಮ, ನೂರು ಕುರಿ ಎಣಿಸಲು ಬಾರದವನು, ಅರ್ಥ ಸಚಿವ ಎಂಬುದಾಗಿ ದಿವಂಗತ ಲಂಕೇಶ್ ಬರವಣಿಗೆ ಹಾಗೂ ನಂತರವೂ ಇತರರು ಆಡಿದ ಮಾತನ್ನು ಸವಾಲಾಗಿ ಸ್ವೀಕರಿಸಿದ್ದೇ ಈ ಮಟ್ಟಕ್ಕೆ ನಾನು ಬೆಳೆಯಲು ಕಾರಣವಾಯಿತು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಿಧಾನಸಭೆಯಲ್ಲಿಂದು ಬಣ್ಣಿಸಿಕೊಂಡರು.

ಬಜೆಟ್ ಮೇಲಿನ ಚರ್ಚೆಗೆ ಉತ್ತರ ನೀಡುವ ಸಂದರ್ಭದಲ್ಲಿ ಪ್ರತಿಪಕ್ಷ ಸದಸ್ಯರ ಪ್ರಸ್ತಾವಕ್ಕೆ, ತಮ್ಮ ಹಿಂದಿನ ರಾಜಕೀಯ ಹೆಜ್ಜೆಗಳನ್ನು ಮೆಲುಕು ಹಾಕಿದ ಸಿದ್ದರಾಮಯ್ಯ, ಪತ್ರಕರ್ತ ಲಂಕೇಶ್ 1984ರಲ್ಲಿ ಮೈಸೂರು ಲೋಕಸಭಾ ಕ್ಷೇತ್ರದಿಂದ ಮೈಸೂರು ಮಹಾರಾಜರ ವಿರುದ್ಧ

■ 6ನೇ ಪುಟಕ್ಕೆ

ಮುಖ್ಯಮಂತ್ರಿ ಸಿದ್ದರಾಮಯ್ಯರ ಸಿಎಂ ಲಿಸ್ಟ್‌ನಲ್ಲಿ ಡಿ.ಕೆ.ಶಿವಕುಮಾರ್ ಇಲ್ಲ...!?

ಬೆಂಗಳೂರು, ಮಾ.25(ಕೆಎಂಶಿ)- ವಿರೋಧ ಪಕ್ಷದ ಒತ್ತಡಕ್ಕೂ ಮಣಿಯದ ಮುಖ್ಯಮಂತ್ರಿ ಸಿದ್ದರಾಮಯ್ಯ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆಗಲಿ ಎಂದು ಕೊನೆಗೂ ಆಶಿಸಲೇ ಇಲ್ಲ. ವಿಧಾನಸಭೆಯಲ್ಲಿಂದು ಬಜೆಟ್ ಮೇಲಿನ ಚರ್ಚೆಗೆ ಉತ್ತರಿಸುತ್ತಿದ್ದ ವೇಳೆ, ಪ್ರತಿಪಕ್ಷದ ನಾಯಕ ಆರ್.ಅಶೋಕ್ ಮತ್ತಿತರ ಬಿಜೆಪಿ ಸದಸ್ಯರು, ನಾಯಕತ್ವ ವಿಚಾರದಲ್ಲಿ ಮುಖ್ಯಮಂತ್ರಿ ಅವರ ಕಾಲು ಎಷ್ಟೇ ಎಳೆದರೂ ಬಾಯಿ ಬಿಡಲಿಲ್ಲ. ಪಕ್ಷದ ವರಿಷ್ಠರು ಎಲ್ಲಿಯವರೆಗೆ ನನ್ನನ್ನು ಅಧಿಕಾರದಲ್ಲಿ ಮುಂದುವರೆಯಲು ಇಚ್ಛಿಸುತ್ತಾರೋ, ಅಲ್ಲಿಯವರೆಗೆ ನಾನೇ ಮುಖ್ಯಮಂತ್ರಿ. ಸದನದ 224 ಮಂದಿಗೂ ಸಚಿವರಾಗುವ,



ಡಿ.ಕೆ.ಶಿವಕುಮಾರ್

■ 6ನೇ ಪುಟಕ್ಕೆ

ಕದನ ವಿರಾಮಕ್ಕೆ 15 ಅಂಶಗಳ ಶಾಂತಿ ಸೂತ್ರ ಮುಂದಿಟ್ಟ ಅಮೆರಿಕ

ಅಣಕಿಸಿದ ಇರಾನ್

ದುಬೈ, ಮಾ.25- ಡೊನಾಲ್ಡ್ ಟ್ರಂಪ್ ನೇತೃತ್ವದ ಅಮೆರಿಕ ಇರಾನ್‌ಗೆ 15 ಅಂಶಗಳ ಯುದ್ಧ ವಿರಾಮ ಯೋಜನೆ ಯನ್ನು ಸಲ್ಲಿಸಿದೆ ಎಂದು ಮೂಲಗಳು ತಿಳಿಸಿವೆ. ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಯುದ್ಧವನ್ನು ಅಂತ್ಯಗೊಳಿಸಲು ಅಮೆರಿಕವು ಇರಾನ್‌ಗೆ 15 ಅಂಶಗಳ ಯುದ್ಧ ವಿರಾಮ ಮತ್ತು ಶಾಂತಿ ಯೋಜನೆಯನ್ನು ಕಳುಹಿಸಿದೆ ಎಂದು ಅಂತರರಾಷ್ಟ್ರೀಯ ಮಾಧ್ಯಮಗಳು ವರದಿ ಮಾಡಿವೆ. ಈ ಯೋಜನೆ ಇರಾನ್‌ನ ಕ್ಷಿಪಣಿ ಹಾಗೂ ಅಣು ಕಾರ್ಯಕ್ರಮಗಳು ಮತ್ತು ಸಮುದ್ರ ಮಾರ್ಗಗಳ ವಿಚಾರವನ್ನು ಒಳ ಗೊಂಡಿದೆ. ಆದರೆ ಪ್ರಸ್ತಾವನೆ ಯಾರಿಗೆ ಕಳುಹಿಸಲಾಗಿದೆ ಎಂಬ ವಿವರಗಳು ಮಾತ್ರ ಬಹಿರಂಗವಾಗಿಲ್ಲ.

ಪೆಟ್ರೋಲ್, ಡೀಸೆಲ್ ಕೊರತೆ ಇಲ್ಲ

ಬೆಂಗಳೂರು, ಮಾ.25- ರಾಜ್ಯದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಕೊರತೆಯಾಗಿದೆ ಎಂಬ ಸುಳ್ಳು ವದಂತಿಗಳು ಸಾಮಾಜಿಕ ಜಾಲತಾಣಗಳು ಹಾಗೂ ಮಾಧ್ಯಮಗಳಲ್ಲಿ ಹರಿದಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಈ ವದಂತಿಗಳಿಂದ ಸಾರ್ವಜನಿಕರು ಆತಂಕಕ್ಕೊಳಗಾಗಿ ಪೆಟ್ರೋಲ್ ಬಂಕ್‌ಗಳಲ್ಲಿ ಬಾಟಲಿ ಹಾಗೂ ಕ್ಯಾನ್‌ಗಳೊಂದಿಗೆ ಸರತಿ ಸಾಲಿನಲ್ಲಿ ನಿಂತು ಇಂಧನ ಸಂಗ್ರಹಿಸುತ್ತಿರುವುದು ಕಂಡುಬಂದಿದೆ. ಈ ಕುರಿತು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯು ಸ್ಪಷ್ಟೀಕರಣ ನೀಡಿದೆ. ಕೇಂದ್ರ ಸರ್ಕಾರದಿಂದ ಚಿಲ್ಲರೆ ಮಾರಾಟ ಮಳಿಗೆಗಳಿಗೆ ಪೆಟ್ರೋಲ್ ಮತ್ತು ಡೀಸೆಲ್ ಪೂರೈಕೆ ಸುಗಮವಾಗಿ ನಡೆಯುತ್ತಿದೆ ಯಾವುದೇ ರೀತಿಯ ಕೊರತೆ ಉಂಟಾಗಿಲ್ಲ.

ಮುಖ್ಯಮಂತ್ರಿ ಸಿದ್ದರಾಮಯ್ಯ ತವರು ಮೈಸೂರಲ್ಲಿ ಸಾವಿರಾರು ಕೋಟಿ ಮೌಲ್ಯದ ಸರ್ಕಾರಿ ಭೂಮಿ ಕಬಳಿಕೆ ಯತ್ನ; ಇದರಲ್ಲಿ ಶಾಮೀಲಾದ ಅಧಿಕಾರಿಗಳ ವಿರುದ್ಧ ಏನೂ ಕ್ರಮವಿಲ್ಲ....!

ಮೈಸೂರು, ಮಾ. 25- ಮೈಸೂರಲ್ಲಿ ಇತ್ತೀಚೆಗೆ ಬೆಳಕಿಗೆ ಬಂದಿರುವ ಸರ್ಕಾರಿ ಭೂಮಿ ಕಬಳಿಕೆ ಪ್ರಕರಣಗಳಲ್ಲಿ ಶಾಮೀಲಾಗಿರುವಂತಹ ಅಧಿಕಾರಿಗಳ ವಿರುದ್ಧ ಇದುವರೆಗೆ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಮೈಸೂರು ಕೃಷ್ಣರಾಜ ಕ್ಷೇತ್ರದ ಶಾಸಕ ಶ್ರೀವತ್ಸ ಇಂದು ಮುಂಜಾನೆ ವಿಧಾನಸಭೆ ಯಲ್ಲಿ ಸರ್ಕಾರದ ಗಮನ ಸೆಳೆದು, ಕ್ರಮಕ್ಕೆ ಆಗ್ರಹಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ತವರು ಜಿಲ್ಲೆ ಮೈಸೂರಲ್ಲಿ ಅಧಿಕಾರಿಗಳು ಸರಣಿ ಸರ್ಕಾರಿ ಭೂಮಿ ಕಬಳಿಕೆ ಪ್ರಕರಣಗಳಲ್ಲಿ ಭಾಗಿಯಾಗಿರುವುದು ರುಜುವಾತಾಗಿದ್ದರೂ ಇದುವರೆಗೆ ಯಾವುದೇ ಕ್ರಮ ಕೈಗೊಳ್ಳದಿರುವ ಬಗ್ಗೆ ಅಚ್ಚರಿ ವ್ಯಕ್ತಪಡಿಸಿದರು.

ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನ ಹಾರ್ಸ್ ಪಾರ್ಕ್ ಬಳಿಯ ಮಹಾರಾಣಾ ಪ್ರತಾಪ್ ಸಿಂಹ ಜೀ ರಸ್ತೆಯಲ್ಲಿನ 24.10 ಎಕರೆ ಸರ್ಕಾರಿ ಭೂಮಿಯನ್ನು ಬೆಳಗಾವಿ, ಬಾಂಬೆಯವರೆನ್ನಲಾದ 12 ಮಂದಿಗೆ 40 ಕೋಟಿಗೆ ಮಾರಾಟ ಕರಾರು ಮಾಡಿಕೊಟ್ಟಿದ್ದು, ಇದು ವಾಸ್ತವವಾಗಿ ಸರ್ಕಾರಿ ಜಾಗ ಎಂಬುದು ಆರ್‌ಟಿಸಿ ಕಾಲಂನಲ್ಲೇ ನಮೂದಾಗಿದೆ. ಇದನ್ನು ಕಣ್ಣು ಮುಚ್ಚಿಕೊಂಡು ಸಬ್‌ರಿಜಿಸ್ಟ್ರಾರ್ ಮಾರಾಟ ಕರಾರು ನೋಂದಣಿ ಮಾಡಿದ್ದಾರೆ. ಇದರ ಮಾರುಕಟ್ಟೆ ದರ ಸುಮಾರು 900 ಕೋಟಿ ಆಗುತ್ತದೆ.

ಈ ಮಹಾ ಕಬಳಿಕೆಯನ್ನು ತಾವು ಬಯಲಿಗೆಳೆಯುತ್ತಿದ್ದಂತೆ ಮಾರನೇ ದಿನವೇ ಜಿಲ್ಲಾಧಿಕಾರಿಗಳ ಸೂಚನೆಯಂತೆ ಸಬ್‌ರಿಜಿಸ್ಟ್ರಾರ್ ಮಾರಾಟ ಕ್ರಯಪತ್ರವನ್ನು ರದ್ದುಪಡಿಸಿದ್ದಾರೆ. ಅಚ್ಚರಿ ಸಂಗತಿ ಎಂದರೆ ಮಾರಾಟ ಕರಾರಿನಲ್ಲಿ 12 ಜನ ಸಹಿ ಮಾಡಿದ್ದರೆ, ಅದನ್ನು ರದ್ದುಪಡಿಸುವಾಗ ಬರೀ ಇಬ್ಬರಷ್ಟೇ ಸಹಿ ಮಾಡಿದ್ದಾರೆ. ಅಲ್ಲದೇ, 4.75 ಕೋಟಿ ಮುಂಗಡ ಹಣವನ್ನು ನಗದಾಗಿ ಮರು ಪಾವತಿಸಿರುವುದಾಗಿ ಅದರಲ್ಲಿ ಸ್ಪಷ್ಟವಾಗಿ ತಿಳಿಸಲಾಗಿದೆ. ಅಚ್ಚರಿಯ ಸಂಗತಿಯೆಂದರೆ 2 ಲಕ್ಷ ರೂ.ಗಳಿಗಿಂತ ಹೆಚ್ಚಿನ ನಗದು ಹಣವನ್ನು ವಹಿವಾಟು ಮಾಡುವಂತಿಲ್ಲ. ಆದರೆ, ಇಲ್ಲಿ ನಗದು ವ್ಯವಹಾರವನ್ನು ಉಲ್ಲೇಖಿಸಲಾಗಿದೆ. ಇದೆಲ್ಲವೂ ಅಧಿಕಾರಿಗಳ ಸಮಕ್ಷಮದಲ್ಲಿ ನಡೆದಿದ್ದರೂ ಅವರ ವಿರುದ್ಧ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ವಿಧಾನಸಭೆಯ ಗಮನ ಸೆಳೆದರು.

ಕಳೆದ ತಿಂಗಳಷ್ಟೇ, ಕೆ.ಸಿ.ನಗರದ 6.10 ಎಕರೆ ಕೆರೆ ಜಾಗವನ್ನು ಅತಿಕ್ರಮಿಸಿ, ಕಾಂಪೌಂಡ್ ನಿರ್ಮಾಣ ಮಾಡಲಾಗಿತ್ತು. ಇದರ ಬಗ್ಗೆಯೂ ತಾವು ಸ್ಥಳ ಪರಿಶೀಲನೆ ನಡೆಸಿ, 48 ಗಂಟೆಯೊಳಗೆ ಕಾಂಪೌಂಡ್ ತೆರವುಗೊಳಿಸಬೇಕು. ಇಲ್ಲದಿದ್ದಲ್ಲಿ ತಾವೇ ಅದನ್ನು ತೆರವುಗೊಳಿಸುವುದಾಗಿ ಎಚ್ಚರಿಕೆ ನೀಡಿದ್ದೆ. ಆದರೆ, 24 ಗಂಟೆಯೊಳಗಾಗಿ ಯಾರು ಕೆರೆ ಅತಿಕ್ರಮಿಸಿ ಕಾಂಪೌಂಡ್ ನಿರ್ಮಾಣ ಮಾಡಿದ್ದರೋ ಅವರೇ ಅದನ್ನು ತೆರವುಗೊಳಿಸಿದರು. ಈ ಆಸ್ತಿ ಮೌಲ್ಯ 100 ಕೋಟಿಗೂ ಅಧಿಕ. ಈ ಪ್ರಕರಣದಲ್ಲೂ ಯಾವುದೇ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗಿಲ್ಲ.

ಇನ್ನು ನಂಜನಗೂಡು ರಸ್ತೆ, ಗಣಪತಿ ಸಚ್ಚಿದಾನಂದ ಆಶ್ರಮದ ಪಕ್ಕದ ಸಮಾಜ ಕಲ್ಯಾಣ ಇಲಾಖೆಗೆ ಸೇರಿದ 38 ಗುಂಟೆ ಜಾಗದಲ್ಲಿ ಯಾರೋ ಖಾಸಗಿ ವ್ಯಕ್ತಿಯೊಬ್ಬ ವರ್ಷಗಳಿಂದ ಸೈಕಲ್ ಸ್ಟ್ಯಾಂಡ್ ಮಾಡಿಕೊಂಡು ಹಣ ವಸೂಲಿ ಮಾಡುತ್ತಿದ್ದ. ಕೊನೆಗೆ ಅಧಿಕಾರಿಗಳು ಕಾರ್ಯಾಚರಣೆ ನಡೆಸಿ ಅದನ್ನು ತೆರವುಗೊಳಿಸಿ ತಮ್ಮ ವಶಕ್ಕೆ ಪಡೆದಿದ್ದಾರೆ. ಇದರ ಮೌಲ್ಯವೂ ಸುಮಾರು ನೂರು ಕೋಟಿ. ಈ ಪ್ರಕರಣದಲ್ಲೂ ಆ ವ್ಯಕ್ತಿಯ ವಿರುದ್ಧ ಯಾವುದೇ ಕ್ರಮ ಕೈಗೊಂಡಿಲ್ಲ. ಇಲ್ಲಿಯೂ ಅಧಿಕಾರಿಗಳ ವೈಫಲ್ಯ ಹಾಗೂ ಬೇಜವಾಬ್ದಾರಿ ಎದ್ದು ಕಾಣುತ್ತಿದೆ.

■ 6ನೇ ಪುಟಕ್ಕೆ

ವಿಧಾನಸಭೆಯಲ್ಲಿ ಶಾಸಕ ಶ್ರೀವತ್ಸ ಪ್ರಸ್ತಾಪ



ಮೈಸೂರು ಮಹಾನಗರ ಪಾಲಿಕೆಯಲ್ಲಿ 10 ಕೋಟಿ ಉಳಿತಾಯ ಬಜೆಟ್

ನಿರೀಕ್ಷಿತ ಆಯ 1,311 ಕೋಟಿ; ವ್ಯಯ 1,300 ಕೋಟಿ

■ ಆಡಳಿತಾಧಿಕಾರಿ ನಿತೇಶ್ ಪಾಟೀಲ್‌ರಿಂದ ಆಯ-ವ್ಯಯ ಮಂಡನೆ ■ ಈ ಬಾರಿ ಅಧಿಕ ಆಸ್ತಿ ತೆರಿಗೆ ಸಂಗ್ರಹಿಸುವ ಗುರಿ ■ ಕಾಂಪ್ಲೆಕ್ಸ್, ಮಾರುಕಟ್ಟೆಯ ಬಾಡಿಗೆ ಆದಾಯ ಏರಿಕೆ ■ ಕೇಂದ್ರ, ರಾಜ್ಯ ಸರ್ಕಾರದಿಂದ ಹೆಚ್ಚು ಅನುದಾನ ನಿರೀಕ್ಷೆ ■ ಜನಪ್ರತಿನಿಧಿಗಳಿಲ್ಲದ ಎರಡನೇ ಬಜೆಟ್ ಮಂಡನೆ

ಮೈಸೂರು, ಮಾ.25(ಬಿಎಲ್‌ಯು)- ಮೈಸೂರು ನಗರ ಪಾಲಿಕೆಯ ಆಡಳಿತಾಧಿಕಾರಿಗಳೂ ಆದ ಪ್ರಾದೇಶಿಕ ಆಯುಕ್ತ ನಿತೇಶ್ ಪಾಟೀಲ್ ಅವರು ಇಂದು 2026-27 ನೇ ಆರ್ಥಿಕ ವರ್ಷದ ನಗರ ಪಾಲಿಕೆಯ ಬಜೆಟ್ ಮಂಡಿಸಿದರು. ನಗರ ಪಾಲಿಕೆ ನಿರೀಕ್ಷಿತ ಆದಾಯದಲ್ಲಿ ಖರ್ಚು ಕಳೆದು 10.20 ಕೋಟಿಗಳ ಉಳಿತಾಯ ಆಯವ್ಯಯವನ್ನು ನಿತೇಶ್ ಪಾಟೀಲ್ ಮಂಡಿಸಿದರು.

ನಗರ ಪಾಲಿಕೆಯ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಸಭಾಂಗಣದಲ್ಲಿ ಇಂದು ನಿತೇಶ್ ಪಾಟೀಲ್ ಅವರು ಹಲವು ಹೊಸ ಯೋಜನೆಗಳನ್ನು ಬಜೆಟ್‌ನಲ್ಲಿ ಘೋಷಿಸಿ, ನಗರ ಪಾಲಿಕೆಯ ಆದಾಯ, ಖರ್ಚು ಹಾಗೂ ಉಳಿತಾಯದ ಬಗ್ಗೆ ಸಮಗ್ರ ವಿವರ ನೀಡಿದರು. ಪ್ರಾರಂಭಿಕ ಶಿಲ್ಕು 234.64 ಕೋಟಿಗಳಾಗಿದ್ದು, ಪ್ರಸಕ್ತ ಆರ್ಥಿಕ ವರ್ಷದಲ್ಲಿ ವಿವಿಧ ಮೂಲಗಳಿಂದ 1076 ಕೋಟಿ ಆದಾಯ ನಿರೀಕ್ಷಿಸಲಾಗಿದೆ. ಈ ಮೂಲಕ ಒಟ್ಟು 1311 ಕೋಟಿ ಕ್ರೋಢೀಕರಣವಾಗಲಿದ್ದು, ಇದರಲ್ಲಿ 1,300 ಕೋಟಿಯ ವಿವಿಧ ರೀತಿಯ ಖರ್ಚು, ವೆಚ್ಚಗಳನ್ನು ಕಳೆದರೆ ಮೈಸೂರು ನಗರ ಪಾಲಿಕೆಗೆ 2026-27 ನೇ ಸಾಲಿನಲ್ಲಿ 10.20 ಕೋಟಿ ಉಳಿತಾಯವಾಗಲಿದೆ ಎಂದು ತಿಳಿಸಿದರು.

ಆಸ್ತಿ ತೆರಿಗೆ: ಕಳೆದ ವರ್ಷ 227 ಕೋಟಿ ಆಸ್ತಿ ತೆರಿಗೆ ಸಂಗ್ರಹವಾಗಿತ್ತು. ಈ ವರ್ಷ 286 ಕೋಟಿ ಆಸ್ತಿ

■ 6ನೇ ಪುಟಕ್ಕೆ

ಇನ್ನು ಮುಂದೆ ಬೀದಿ ಬದಿ ವ್ಯಾಪಾರಿಗಳಿಗೂ ಮಾಸಿಕ ಬಾಡಿಗೆ ನಿಗದಿ

ಇದೂವರೆಗೆ ಬೀದಿ ಬದಿ ವ್ಯಾಪಾರಿಗಳಿಗೆ ಯಾವುದೇ ಬಾಡಿಗೆ, ತೆರಿಗೆ ಗೋಜು ಇರಲಿಲ್ಲ. ಆದರೆ ಈಗ ಬೀದಿ ಬದಿ ವ್ಯಾಪಾರಿಗಳಿಗೂ ಸಹ ನೆಲ ಬಾಡಿಗೆ ನಿಗದಿ ಮಾಡಲು ನಿರ್ಧರಿಸಲಾಗಿದೆ.


ನಗರದಲ್ಲಿ ವ್ಯಾಪಾರ ಮಾಡುತ್ತಿರುವ ಬೀದಿ ಬದಿ ವ್ಯಾಪಾರಿಗಳನ್ನು ಜಿಯೋ ಟ್ಯಾಪಿಂಗ್ ಮೂಲಕ ಸಮೀಕ್ಷೆ ನಡೆಸಿ, ಅವರಿಗೆ ಗುರುತಿನ ಚೀಟಿ ಹಾಗೂ ವ್ಯಾಪಾರ ಪ್ರಮಾಣ ಪತ್ರ ನೀಡಲಾಗುವುದು. ತರುವಾಯ ಬೀದಿ ಬದಿ ವ್ಯಾಪಾರಿಗಳಿಗೆ ಮಾಸಿಕ ನೆಲ ಬಾಡಿಗೆ ಸಂಗ್ರಹಿಸಲು ಉದ್ದೇಶಿಸಲಾಗಿದೆ. ಬೀದಿ ಬದಿ ವ್ಯಾಪಾರಿಗಳಿಗೆ ಪಿಎಂ ಸ್ವನಿಧಿ ಯೋಜನೆಯಲ್ಲಿ ಸ್ಟ್ರೀಟ್ ಫುಡ್ ಹಬ್ ನಿರ್ಮಿಸಿ, ಎಲ್ಲಾ ರೀತಿಯ ಮೂಲಭೂತ ಸೌಕರ್ಯ ಕಲ್ಪಿಸಲು ನಿರ್ಧರಿಸಲಾಗಿದೆ.



ಮೈಸೂರು ನಗರ ಪಾಲಿಕೆಯ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಸಭಾಂಗಣದಲ್ಲಿ ಬುಧವಾರ ಪ್ರಾದೇಶಿಕ ಆಯುಕ್ತರೂ ಆದ ನಗರ ಪಾಲಿಕೆ ಆಡಳಿತಾಧಿಕಾರಿ ನಿತೇಶ್ ಪಾಟೀಲ್ ಅವರು 2026- 27 ನೇ ಸಾಲಿನ ಬಜೆಟ್ ಮಂಡಿಸಿದರು. ನಗರ ಪಾಲಿಕೆ ಆಯುಕ್ತ ಷೇಕ್ ತನ್ವೀರ್ ಆಸೀಫ್ ಅವರನ್ನು ಚಿತ್ರದಲ್ಲಿ ಕಾಣಬಹುದು.

2026-27ನೇ ಸಾಲಿನ ಆಯ

▸ ವಿಶೇಷ ಅನುದಾನದಿಂದ 204 ಕೋಟಿ ▸ ಅನುದಾನದಿಂದ 16.33 ಕೋಟಿ ▸ ನಗರ ಪಾಲಿಕೆಯ ಸ್ವಂತ ಮೂಲದಿಂದ 466 ಕೋಟಿ ▸ ಕೇಂದ್ರ ಸರ್ಕಾರದ ಅನುದಾನದಿಂದ 132 ಕೋಟಿ ▸ ರಾಜ್ಯ ಹಣಕಾಸು ಆಯೋಗದ ಅನುದಾನದಿಂದ 223 ಕೋಟಿ



ಕಾಮಗಾರಿ ಗುಣಮಟ್ಟ ಪರೀಕ್ಷೆಗೆ ಪ್ರಯೋಗಾಲಯ, ವೇಸ್ಟ್ ಟು ವಂಡರ್ ಪಾರ್ಕ್ ಸ್ಥಾಪನೆ, ಕಟ್ಟಡಗಳಿಗೆ ಗ್ರೀನ್ ಪ್ರಾಪರ್ಟಿ ಟ್ಯಾಗ್!

ಮೈಸೂರು ನಗರ ಪಾಲಿಕೆ ಬಜೆಟ್‌ನ ಮುಖ್ಯಾಂಶಗಳು

ಮೈಸೂರು, ಮಾ.25(ಬಿಎಲ್‌ಯು)- ಕಾಮಗಾರಿ ಗುಣಮಟ್ಟ ಪರೀಕ್ಷೆಗೆ ಆಧುನಿಕ ತಂತ್ರಜ್ಞಾನದ ಪ್ರಯೋಗಾಲಯ, ಈಜುಕೊಳ ನಿರ್ಮಾಣ, ಜನಸ್ನೇಹಿ ಪಾದಚಾರಿ ಮಾರ್ಗಗಳ ಅಭಿವೃದ್ಧಿ, ಪಾರಂಪರಿಕ ಶೌಚಾಲಯ ಹಾಗೂ ಮಾರುಕಟ್ಟೆಗಳ ನಿರ್ಮಾಣ, ಮಿಯಾವಾಕಿ ಮಾದರಿಯ ಕಿರು ಅರಣ್ಯ ಅಭಿವೃದ್ಧಿ, ಪಾರ್ಕ್‌ಗಳ ಸಂರಕ್ಷಣೆಗೆ ಒತ್ತು, ಕಟ್ಟಡಗಳಿಗೆ ಗ್ರೀನ್ ಪ್ರಾಪರ್ಟಿ ಟ್ಯಾಗ್, ವೇಸ್ಟ್ ಟು ವಂಡರ್ ಪಾರ್ಕ್ ಅಭಿವೃದ್ಧಿ...

ಮೈಸೂರು ನಗರ ಪಾಲಿಕೆಯ 2026-27ನೇ ಆರ್ಥಿಕ ವರ್ಷದ ಆಯವ್ಯಯ ಮಂಡಿಸಿದ ಆಡಳಿತಾಧಿಕಾರಿ ನಿತೇಶ್ ಪಾಟೀಲ್ ಅವರು ಮೈಸೂರಿನ ಸಮಗ್ರ ಅಭಿವೃದ್ಧಿಗೆ ಹಲವು ವಿಶಿಷ್ಟ ಯೋಜನೆಗಳನ್ನು ಘೋಷಣೆ ಮಾಡಿದರು.

ಅತ್ಯಾಧುನಿಕ ಪ್ರಯೋಗಾಲಯ: ನಗರ ಪಾಲಿಕೆಯಿಂದ ನಿರ್ಮಿಸುವ ರಸ್ತೆ, ಕಟ್ಟಡ, ಸೇತುವೆ ಸೇರಿದಂತೆ ಇತರೆ ಕಾಮಗಾರಿಗಳಲ್ಲಿ ಬಳಸುವ ಸಿಮೆಂಟ್, ಮರಳು, ಕಾಂಕ್ರೀಟ್ ಹಾಗೂ ಡಾಂಬರೀಕರಣವನ್ನು ಮಾನದಂಡಗಳ ಪ್ರಕಾರ ಗುಣಮಟ್ಟ ಖಚಿತಪಡಿಸಿಕೊಳ್ಳಲು 1 ಕೋಟಿ ವೆಚ್ಚದಲ್ಲಿ ಅತ್ಯಾಧುನಿಕ ಪರೀಕ್ಷಾ ಉಪ ವಿಭಾಗ ಮತ್ತು ಪ್ರಯೋಗಾಲಯ ಸ್ಥಾಪಿಸುವ ಯೋಜನೆ ರೂಪಿಸಲಾಗಿದೆ.

ಈಜುಕೊಳ: ನಗರದ ಕೃಷ್ಣರಾಜ, ಚಾಮರಾಜ ಹಾಗೂ ನರಸಿಂಹರಾಜ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ತಲಾ ಒಂದರಂತೆ ಮೂರು ಈಜುಕೊಳವನ್ನು PPP/HYBRID ಮಾದರಿಯಲ್ಲಿ ನಿರ್ಮಿಸಲು ಉದ್ದೇಶಿಸಲಾಗಿದೆ

ಜನಸ್ನೇಹಿ ಪಾದಚಾರಿ ಮಾರ್ಗ: ಹೆಚ್ಚುತ್ತಿರುವ ವಾಹನ ದಟ್ಟಣೆಯ ಕಾರಣ ಪಾದಚಾರಿಗಳ ಸುರಕ್ಷತೆ ಮತ್ತು ಅನುಕೂಲಕ್ಕಾಗಿ ಜನಸ್ನೇಹಿ ಪಾದಚಾರಿ ಮಾರ್ಗ ನಿರ್ಮಿಸುವ ಯೋಜನೆ ರೂಪಿಸಲಾಗಿದ್ದು, ಇದಕ್ಕಾಗಿ 10 ಕೋಟಿ ಮೀಸಲಿಡಲಾಗಿದೆ

ಕ್ರೀಡಾಂಗಣ ಅಭಿವೃದ್ಧಿ: ಜೆ.ಪಿ.ನಗರದಲ್ಲಿರುವ ಪುಟ್ಟರಾಜ ಗವಾಯಿ ಕ್ರೀಡಾಂಗಣದ ಒಳಾಂಗಣದಲ್ಲಿ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲು 1.10 ಕೋಟಿ ಕಾಯ್ದಿರಿಸಲಾಗಿದೆ. ಹಾಗೆಯೇ ಕುಂಬಾರಕೊಪ್ಪಲಿನ ಕ್ರೀಡಾಂಗಣಕ್ಕೆ ಆಧುನಿಕ ಮೂಲಭೂತ ಸೌಕರ್ಯ ಕಲ್ಪಿಸಲು 5 ಕೋಟಿ ತೆಗೆದಿಡಲಾಗಿದೆ.

ಟೌನ್ ಹಾಲ್ ಅಭಿವೃದ್ಧಿ: ಮೈಸೂರು ನಗರದ ಪ್ರಮುಖ ಸಾಂಸ್ಕೃತಿಕ ಕೇಂದ್ರವಾದ ಪುರಭವನವನ್ನು ಸಮಗ್ರವಾಗಿ ಅಭಿವೃದ್ಧಿ ಮಾಡಲು 3 ಕೋಟಿ ಕಾಯ್ದಿರಿಸಲಾಗಿದೆ.

ವೃತ್ತಗಳ ಅಭಿವೃದ್ಧಿ: ನಗರದ ಕೃಷ್ಣರಾಜ, ಚಾಮರಾಜ ಹಾಗೂ ನರಸಿಂಹರಾಜ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿರುವ ವೃತ್ತಗಳನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದ್ದು, ಇದಕ್ಕಾಗಿ 5 ಕೋಟಿ ಅನುದಾನ ನೀಡಲಾಗುವುದು.

ರಸ್ತೆ, ಚರಂಡಿ ಅಭಿವೃದ್ಧಿ: ಮೈಸೂರಿನ ಪ್ರಮುಖ ರಸ್ತೆ ಹಾಗೂ ಚರಂಡಿಗಳನ್ನು ಅಭಿವೃದ್ಧಿ ಮಾಡಲು

■ 6ನೇ ಪುಟಕ್ಕೆ


ಏಪ್ರಿಲ್ 1ರಿಂದ ಇ-ಆಫೀಸ್ ಅನುಷ್ಠಾನ, ಲಿಡಾರ್, ಡ್ರೋನ್ ಸರ್ವೇ

ಮೈಸೂರು: ಮೈಸೂರು ನಗರ ಪಾಲಿಕೆಯ ಪ್ರಧಾನ ಕಚೇರಿಯಲ್ಲಿ ಇ-ಆಫೀಸ್ ಅನುಷ್ಠಾನಗೊಳಿಸಲಾಗಿದೆ. ವಲಯ ಕಚೇರಿ 1 ರಿಂದ 9 ರವರೆಗೆ ಹಾಗೂ ವಾಣಿವಿಲಾಸ ನೀರು ಸರಬರಾಜು ವಿಭಾಗ, ಮಾರುಕಟ್ಟೆ ವಿಭಾಗ, ಆಸ್ತಿ ವಿಭಾಗ ಹಾಗೂ ಆಶ್ರಯ ವಿಭಾಗದಲ್ಲಿ ಏಪ್ರಿಲ್ 1, 2026ರಿಂದ ಇ-ಆಫೀಸ್ ಅನುಷ್ಠಾನಗೊಳಿಸಲಾಗುವುದು. ನಗರ ಪಾಲಿಕೆಯ ಕೇಂದ್ರ ಕಚೇರಿಯ ಅಭಿಲೇಖಾಲಯದ ಎ,ಬಿ,ಸಿ ವರ್ಗದ ಕಡತಗಳನ್ನು

■ 6ನೇ ಪುಟಕ್ಕೆ

2026-27ನೇ ವ್ಯಯಗಳು

▸ ಸಿಬ್ಬಂದಿ ವೆಚ್ಚಗಳು 114.86 ಕೋಟಿ
▸ ಆಡಳಿತಾತ್ಮಕ ವೆಚ್ಚಗಳು 420 ಕೋಟಿ
▸ ಅನುದಾನ ವೆಚ್ಚಗಳು 445 ಕೋಟಿ
▸ ಬಂಡವಾಳ ವೆಚ್ಚಗಳು 304.28 ಕೋಟಿ
▸ ದುರಸ್ತಿ ಮತ್ತು ನಿರ್ವಹಣೆ 172.16 ಕೋಟಿ
▸ ಕಾರ್ಯಕ್ರಮ ಮತ್ತು ಉಪಕರಣ ವೆಚ್ಚಗಳು 86.17 ಕೋಟಿ
▸ ಕಲ್ಯಾಣ ಕಾರ್ಯಕ್ರಮಗಳು 103 ಕೋಟಿ



ಸಮಪಾಲು ಸಮ ಬಾಳಿಗಾಗಿ ಸರ್ಕಾರ ಒಳ ಮೀಸಲಾತಿ ಕಲ್ಪಿಸಲಿ

ಆದಿಜಾಂಬವ ಸಂಘ ಆಗ್ರಹ

ಮೈಸೂರು, ಮಾ.25(ಜಿಎ)–ಸಮಪಾಲು ಸಮಬಾಳಿಗಾಗಿ ಒಳ ಮೀಸಲಾತಿ ಸರ್ಕಾರ ಕಲ್ಪಿಸಬೇಕು ಎಂದು ರಾಜ್ಯ ಆದಿ ಜಾಂಬವ ಸಂಘದ ಮೈಸೂರು ವಿಭಾಗೀಯ ಸಮಿತಿ ಅಧ್ಯಕ್ಷ ಎಂ.ಎಡತೊರೆ ನಿಂಗರಾಜು ಆಗ್ರಹಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನ್ಯಾ.ಹಾವನೂರು ಆಯೋಗ, ಸದಾಶಿವ ಆಯೋಗ, ನಾಗಮೋಹನ್ ದಾಸ್ ಹಾಗೂ ಕಾಂತರಾಜ್ ಆಯೋಗಗಳೆಲ್ಲವೂ ಸಮೀಕ್ಷೆ ವೇಳೆ ಪರಿಶಿಷ್ಟರ ಪೈಕಿ ಮಾದಿಗರೇ ಹೆಚ್ಚಿನ ಸಂಖ್ಯೆಯಲ್ಲಿರುವುದನ್ನು ದತ್ತಾಂಶದ ಮೂಲಕ ತಿಳಿಸಿವೆ. ಪರಿಶಿಷ್ಟ ಜಾತಿಗಳ ಪೈಕಿ ಮಾದಿಗರಂತೆ ಇತರೆ ಪರಿಶಿಷ್ಟರೂ ಸಹ ಜನಸಂಖ್ಯೆಗನುಗುಣವಾಗಿ ಅವರವರ ಪಾಲು ಪಡೆಯಲು ಅರ್ಹರು. ಆದರೆ ಇದುವರೆಗೆ ಹೆಚ್ಚಿನ ಪಾಲು ಪಡೆದವರೇ ಇದನ್ನು ವಿರೋಧಿಸುವುದು ಸಂವಿಧಾನ ವಿರೋಧಿ ಕೃತ್ಯವಾಗಿದೆ ಆದ್ದರಿಂದ ಸರ್ಕಾರ ಈಗ 56,432 ಹುದ್ದೆಗಳನ್ನು ತುಂಬಲು ಹೊರಟಾಗ ಮಾದಿಗರಿಗೆ ಒಳ ಮೀಸಲಾತಿ ಕಲ್ಪಿಸಬೇಕು ಎಂದು ಒತ್ತಾಯಿಸಿದರು.

ತಮ್ಮ ತಮ್ಮ ಪಾಲಿನ ಸವಲತ್ತು ಪ್ರತ್ಯೇಕವಾಗಿ ಪ್ರತಿ ಜಾತಿಗೂ ಹಂಚಿಕೆಯಾದರೆ ಪರಿಶಿಷ್ಟ ಜಾತಿಗಳ ಪೈಕಿ ಅನಾವಶ್ಯಕ ಪೈಪೋಟಿ ಮತ್ತು ಅಹಿತಕರ ಹೋರಾಟ ತಪ್ಪುತ್ತದೆ. ಆದ್ದರಿಂದ ಮಾದಿಗರ ಸರ್ವಾಂಗೀಣ ಸಾಮಾಜಿಕ ಅಭಿವೃದ್ಧಿಗೆ ಒಳ ಮೀಸಲಾತಿ ಜಾರಿಗೆ ತರಬೇಕೆಂದು ಸರ್ಕಾರಕ್ಕೆ ಮನವಿ ಮಾಡಿದರು.

ಮೀಸಲಾತಿ ಪರಿಕಲ್ಪನೆ ಪರಿಶಿಷ್ಟ ಜಾತಿಯ ಜನತೆ ಶಿಕ್ಷಣ, ಉದ್ಯೋಗ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ನ್ಯಾಯಬದ್ಧ ಪಾಲನ್ನು ಪಡೆಯುವ ಒಂದು ವಿಧಾನವಾಗಿದೆ. ಮೀಸಲಾತಿಯಿಂದಲೇ ಪರಿಶಿಷ್ಟ ಜಾತಿಗಳ ವಿಮೋಚನೆ ಸಾಧ್ಯವಿಲ್ಲ. ಆದರೆ ಮೀಸಲಾತಿಯು ಪರಿಶಿಷ್ಟ ಜಾತಿಗಳು ಮೇಲೆ ಬರಲು ಹಂತಗಳನ್ನು ನಿರ್ಮಿಸುತ್ತದೆ. ರಾಜ್ಯದಲ್ಲಿ ಒಳ ಮೀಸಲಾತಿ ಹೋರಾಟವನ್ನು ಮಾದಿಗ ಸಮುದಾಯ ಆರಂಭಿಸಿತು. ಆದರೆ ಮೀಸಲಾತಿಯ ಸವಲತ್ತುಗಳನ್ನು ಈವರೆಗೆ ಅನುಭವಿಸಿ ಭದ್ರವಾಗಿ ತಳವೂರಿರುವರು ಒಳ ಮೀಸಲಾತಿ ಜಾರಿಗೆ ಬರುವುದನ್ನು ವಿರೋಧಿಸುತ್ತಿದ್ದಾರೆ. ಇದು ಸರಿಯಲ್ಲ ಎಂದರು.

ಸುದ್ದಿಗೋಷ್ಠಿಯಲ್ಲಿ ರಾಜ್ಯ ಸಂಘಟನಾ ಸಂಚಾಲಕ ನಂಜಪ್ಪ ಬಸವನಗುಡಿ, ಡಿ.ಕುಮಾರ್, ಎಂ.ಲೋಕೇಶ್, ಸ್ವಾಮಿ, ಕುಮಾರ್ ಕುಂಬ್ರಳ್ಳಿ ಮಠ, ಶೇಖರ್ ಮಾರ್ಬಳ್ಳಿ ಹುಂಡಿ, ಕೆಂಪರಾಜು ಜಯಪುರ ಉಪಸ್ಥಿತರಿದ್ದರು.

ಮೈಸೂರಿನ ಪಾರಂಪರಿಕ ಕಟ್ಟಡಗಳ ಸಂರಕ್ಷಣೆ ಸರ್ಕಾರದ ಕರ್ತವ್ಯವಲ್ಲವೇ?




ಸಂದೇಶ್‌ಸ್ವಾಮಿ

ಮೈಸೂರು, ಮಾ.25– ಸುಪ್ರಿಂ ಕೋರ್ಟ್‌ನಲ್ಲಿ ಪ್ರಕರಣ ಇತ್ಯರ್ಥವಾಗುವವರೆಗೆ ಮೈಸೂರಿನ ಪಾರಂಪರಿಕ ಕಟ್ಟಡಗಳ ನವೀಕರಣ ಇಲ್ಲ ಎಂದು ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ವಿಧಾನಸಭೆಯಲ್ಲಿ ಹೇಳಿಕೆ ನೀಡಿರುವುದು ಅತ್ಯಂತ ಬೇಸರದ ಸಂಗತಿ ಎಂದು ಮಾಜಿ ಮೇಯರ್ ಸಂದೇಶ್‌ಸ್ವಾಮಿ ತಿಳಿಸಿದ್ದಾರೆ.

ನವೀಕರಣದಿಂದ ಪಾರಂಪರಿಕ ಕಟ್ಟಡಗಳಿಗೆ ಧಕ್ಕೆಯಾಗಲಿದೆ ಎಂದು ಕೆಲವರು ನ್ಯಾಯಾಲಯದ ಮೆಟ್ಟಿಲೇರಿದ್ದಾರೆ ಎಂದು ಸಚಿವರೇ ಹೇಳಿದ್ದಾರೆ. ಸರ್ಕಾರಕ್ಕೆ ಇಚ್ಛಾಶಕ್ತಿ ಇದ್ದಿದ್ದರೆ ನ್ಯಾಯಾಲಯದ ಮೆಟ್ಟಿಲೇರಿದವರ ಮನವೊಲಿಸಿ, ಅವರಿಂದಲೇ ಪಾರಂಪರಿಕ ಕಟ್ಟಡಗಳನ್ನು ರಕ್ಷಿಸಬೇಕಾದರೆ ಏನು ಮಾಡಬೇಕು ಎಂದು ಸಲಹೆ ನೀಡುವಂತೆ ಕೇಳಿ ಇದಕ್ಕೆ ಇತಿಶ್ರೀ ಹಾಡಬಹುದಿತ್ತು ಆ ಕೆಲಸ ಮಾಡದೆ ಸಚಿವರು ಈ ರೀತಿ ಉತ್ತರ ನೀಡಿರುವುದು ಸರಿಯಲ್ಲ ಎಂದು ಬೇಸರಿಸಿದ್ದಾರೆ.

ಬಿದ್ದು ಹೋಗಿರುವ ಪಾರಂಪರಿಕ ಕಟ್ಟಡಗಳನ್ನು ದುರಸ್ತಿಯೋ, ನವೀಕರಣವೋ ಮಾಡದೆ ಸಂರಕ್ಷಣೆ ಮಾಡುವುದಾದರೂ ಹೇಗೆ? ಮೈಸೂರು ಅರಮನೆ ಕಟ್ಟಡಗಳ ಕೆಲ ಭಾಗದಲ್ಲಿ ಅರಳಿಮರದ ಸಸಿಗಳು ಬೆಳೆದಿವೆ. ಕೆಲವು ಭಾಗದಲ್ಲಿ ವಸ್ತಿಯಾಗಿದೆ. ಹಾಗಾದರೆ ಭವ್ಯವಾದ ಅರಮನೆಯನ್ನು ನ್ಯಾಯಾಲಯದಲ್ಲಿ ಪ್ರಕರಣ ಇದೆಯೆಂದು ನವೀಕರಣ ಮಾಡದೆ ಹಾಗೆ ಬಿಟ್ಟರೆ ಮುಂದಿನ ಗತಿಯೇನು? ಎಂಬುದನ್ನು ಸರ್ಕಾರ ಚಿಂತಿಸಬೇಕು. ಅಮೂಲ್ಯ ಹಾಗೂ ಅಪರೂಪದ ಸೌಧಗಳ ರಕ್ಷಣೆಗೆ ಸರ್ಕಾರ ಕೂಡಲೇ ಕ್ರಮ ವಹಿಸಬೇಕು ಎಂದು ಆಗ್ರಹಿಸಿದ್ದಾರೆ.

ರಾಷ್ಟ್ರ ಪ್ರಶಸ್ತಿ ಪಡೆದ ವಿದ್ಯಾರ್ಥಿಗಳಿಗೆ ಗೌರವ...



ಭಾರತದ ಕೇಂದ್ರೀಯ ಸಂಸ್ಕೃತ ವಿಶ್ವವಿದ್ಯಾನಿಲಯವು ಕಾಂಚಿಪುರಂನ ಶ್ರೀ ಚಂದ್ರಶೇಖರೇಂದ್ರ ಸರಸ್ವತಿ ವಿಶ್ವಮಹಾವಿದ್ಯಾಲಯದಲ್ಲಿ ಆಯೋಜಿಸಿದ್ದ ಅಖಿಲ ಭಾರತೀಯ ಶಾಸ್ತ್ರೋತ್ರದಲ್ಲಿ ಭಾಗವಹಿಸಿ ಚಿನ್ನ ಮತ್ತು ಕಂಚಿನ ಪದಕ ಹಾಗೂ ನಗದು ಬಹುಮಾನ ಪಡೆದ ಮೈಸೂರಿನ ಶ್ರೀ ಸೋಸಲೆ ವ್ಯಾಸರಾಜರ ಮಠದ ಶ್ರೀ ವ್ಯಾಸತೀರ್ಥ ವಿದ್ಯಾಪೀಠದ ವಿದ್ಯಾರ್ಥಿಗಳಾದ ಡಿ.ಪ್ರಣವಾಚಾರ್ಯ, ತ್ರಿವಿಕ್ರಮ ರಾಮಭಾರಿ ಮತ್ತು ಮಹೀಧರ ಅವರಿಗೆ ಸೋಸಲೆ ಶ್ರೀ ವ್ಯಾಸರಾಜ ಮಠದ ಶ್ರೀ ವಿದ್ಯಾಶ್ರೀಶ ತೀರ್ಥಶ್ರೀಪಾದಂಗಳವರ ಸಮ್ಮುಖದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ರಾಜ್ಯ ಸಂಘಟನಾ ಕಾರ್ಯದರ್ಶಿ ನಂ.ಶ್ರೀಕಂಠಕುಮಾರ್, ಮೈಸೂರು ಜಿಲ್ಲಾ ಪ್ರತಿನಿಧಿ ಡಾ.ಕೆ.ವಿ.ಲಕ್ಷ್ಮಿದೇವಿ ಗೌರವಿಸಿದರು. ಈ ವೇಳೆ ಕೇಂದ್ರ ಕಾರ್ಯಕಾರಿ ಸಮಿತಿ ಸದಸ್ಯರಾದ ಎಂ.ಆರ್.ಬಾಲಕೃಷ್ಣ, ಕಲ್ಕೆರೆ ನಾಗರಾಜ್, ಟಿ.ಎಸ್.ಅರುಣ್, ಎನ್.ಶ್ರೀನಿವಾಸ್‌ಪ್ರಸಾದ್, ಚಂಚಲಾಕ್ಷಿ, ವನಜಾ ಇನ್ನಿತರರು ಉಪಸ್ಥಿತರಿದ್ದರು.

ಹೃದಯ ಬಡಿತದ ಏರುಪೇರು ಚಿಕಿತ್ಸೆಗೆ ಮೈಸೂರಲ್ಲಿ 3ಡಿ ಅಬ್ಲೇಷನ್ ವಿಧಾನ ಲಭ್ಯ

ಮೈಸೂರು, ಮಾ.25(ಜಿಎ)–ಹೃದಯ ಬಡಿತದ ಏರುಪೇರಿಗೆ ಪರಿಣಾಮಕಾರಿ ಚಿಕಿತ್ಸೆ ಒದಗಿಸುವ 3ಡಿ ಅಬ್ಲೇಷನ್ ವಿಧಾನವನ್ನು ನಾರಾಯಣ ಹೆಲ್ತ್ ಆಸ್ಪತ್ರೆಯಲ್ಲಿ ಆರಂಭಿಸಲಾಗಿದೆ ಎಂದು ನಾರಾಯಣ ಹೆಲ್ತ್ ಆಸ್ಪತ್ರೆಯ ಹೃದ್ರೋಗ ಚಿಕಿತ್ಸಾ ನಿರ್ದೇಶಕ ಡಾ.ವಿ.ಕೇಶವಮೂರ್ತಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಚಿಕಿತ್ಸೆಗಾಗಿ ದೂರದ ದೊಡ್ಡ ಪಟ್ಟಣಗಳಿಗೆ ರೋಗಿಗಳು ಹೋಗಬೇಕಾಗಿತ್ತು. ಈಗ ನಗರದಲ್ಲಿನ ಆಸ್ಪತ್ರೆಯಲ್ಲಿ ಈ ವಿಧಾನವನ್ನು ಬಳಸುತ್ತಿರುವ ಕಾರಣ ಅನಗತ್ಯ ಹಣಕಾಸು ವೆಚ್ಚ, ಚಿಕಿತ್ಸಾ ಸಮಯಗಳ ಉಳಿತಾಯವಾಗಲಿದೆ ಎಂದರು.

ಸಾಮಾನ್ಯವಾಗಿ ಅನಿಯಮಿತ ಹೃದಯ ಬಡಿತ, ಉಸಿರಾಟದ ತೊಂದರೆ ಮತ್ತು ಸುಸ್ತುಗಳು ಹೃದಯದ ಲಯದ ಸಮಸ್ಯೆಯಲ್ಲಿನ ಲಕ್ಷಣಗಳಾಗಿವೆ. ಇಂತಹವರು ಈ ಪರಿಣಾಮಕಾರಿ ಚಿಕಿತ್ಸೆ ಪಡೆಯಬಹುದಾಗಿದೆ ಎಂದರು.

ಡಾ.ಅಭಿನವ್ ಭೈರವನಾಥ್ ಪಾಂಡೆ ಆನಂದ್ ಮಾತನಾಡಿ, ಸಕಾಲದಲ್ಲಿ ನೀಡಬಹುದಾದ ಸುಧಾರಿತ ಚಿಕಿತ್ಸೆ ಇದಾಗಿದೆ. ಆರಂಭಿಕ ಹಂತದಲ್ಲೇ ರೋಗ ಪತ್ತೆ ಮಾಡಿ, ನಿರಂತರ ವೈದ್ಯಕೀಯ ತಪಾಸಣೆ ನಡೆಸಲು ಸಹ ಇದು ನೆರವಾಗುತ್ತದೆ. ಇದು ರೋಗಿಗಳು ಹಾಗೂ ಅವರ ಕುಟುಂಬದವರಲ್ಲಿ ಆತ್ಮವಿಶ್ವಾಸ ಹೆಚ್ಚಿಸುತ್ತದೆ ಎಂದರು. ಗೋಷ್ಠಿಯಲ್ಲಿ ಡಾ.ಅಶೋಕ್ ಉಪಸ್ಥಿತರಿದ್ದರು.

ಬಾಲಕಿ ರಕ್ಷಣೆ



ಮೈಸೂರು, ಮಾ.25– ಮೈಸೂರು ರೈಲು ನಿಲ್ದಾಣದಲ್ಲಿ ಪತ್ತೆಯಾದ ಭವಾನಿ ಎಂಬ 5 ವರ್ಷದ ಹೆಣ್ಣು ಮಗುವನ್ನು ರೈಲ್ವೆ ಮಕ್ಕಳ ಸಹಾಯವಾಣಿ ಸಿಬ್ಬಂದಿ ರಕ್ಷಿಸಿ, ಸರ್ಕಾರಿ ಬಾಲಕಿಯರ ಬಾಲಮಂದಿರಕ್ಕೆ ದಾಖಲಿಸಿದ್ದಾರೆ.

ವಯಸ್ಸು ಸುಮಾರು 5 ವರ್ಷ, 3.3 ಅಡಿ ಎತ್ತರ, ಕೋಲು ಮುಖ, ಸಾಧಾರಣ ಶರೀರ, ಗುಂಡಾದ ಮೂಗು, ತಲೆಯಲ್ಲಿ 1 ಇಂಚು ಉದ್ದದ ಕಪ್ಪು ಕೂದಲು, ಗೋಧಿ ಮೈಬಣ್ಣ, ಎಡಗೈನ ತೋಳಿನಲ್ಲಿ ಕಪ್ಪು ಮಚ್ಚೆ ಇದ್ದು, ಕನ್ನಡ ಭಾಷೆಯನ್ನು ಮಾತನಾಡುತ್ತಾಳೆ. ಮಗುವಿನ ಪೋಷಕರ ಬಗ್ಗೆ ಸುಳಿವು ದೊರೆತಲ್ಲಿ, ಪೋಷಕರು ಕಂಡುಬಂದಲ್ಲಿ ಮೈಸೂರು ರೈಲ್ವೆ ಪೊಲೀಸ್ ಠಾಣೆ ದೂ.ಸಂಖ್ಯೆ: 0821–2516579 ಅಥವಾ ರೈಲ್ವೆ ಪೊಲೀಸ್ ಕಂಟ್ರೋಲ್ ರೂಂ ದೂ.ಸಂಖ್ಯೆ: 080–22871291 ನ್ನು ಸಂಪರ್ಕಿಸಬಹುದಾಗಿದೆ ಅಥವಾ ಮೈಸೂರು ರೈಲ್ವೆ ಪೊಲೀಸ್ ಠಾಣೆ ಪಿಎಸ್‌ಐ ಅಥವಾ ಪೊಲೀಸ್ ಅಧೀಕ್ಷಕರು ರೈಲ್ವೇಸ್ ಬೆಂಗಳೂರು ಇವರಿಗೆ ಮಾಹಿತಿ ತಿಳಿಸಬೇಕೆಂದು ಮೈಸೂರು ರೈಲ್ವೆ ಪೊಲೀಸ್ ಠಾಣೆಯ ಆರಕ್ಷಕ ಉಪನಿರೀಕ್ಷರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕುತೂಹಲ ಮೂಡಿಸಿರುವ ಫೋಟೋ ಶೂಟ್...



ಬುಧವಾರ ವಿಧಾನಸಭಾ ಸದಸ್ಯರು ಹಾಗೂ ಸಚಿವರೊಟ್ಟಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಫೋಟೋ ಶೂಟ್ ತೀವ್ರ ಚರ್ಚೆಗೆ ಗ್ರಾಸವಾಗಿದೆ. ಸಾಮಾನ್ಯವಾಗಿ 5 ವರ್ಷಗಳ ಅಧಿಕಾರಾವಧಿ ಅಂತ್ಯಗೊಂಡ ಸಂದರ್ಭದಲ್ಲಿ ಈ ರೀತಿ ಫೋಟೋ ಶೂಟ್ ನಡೆಯುವುದು ಸರ್ವೇ ಸಾಮಾನ್ಯ. ಆದರೆ, ಸರ್ಕಾರಕ್ಕೆ ಇನ್ನೂ ಎರಡು ವರ್ಷಕ್ಕೂ ಅಧಿಕ ಕಾಲ ಅಧಿಕಾರಾವಧಿ ಬಾಕಿ ಇರುವಾಗ ಇಂತಹ ಫೋಟೋ ಶೂಟ್ ಔಚಿತ್ಯ ವೇನಿತ್ತು ಎಂದು ಕೆಲ ಶಾಸಕರಲ್ಲೇ ಪ್ರಶ್ನೆ ಮೂಡಿದರೂ ಅದಕ್ಕೆ ಉತ್ತರ ಕಂಡುಕೊಳ್ಳುವ ಪ್ರಯತ್ನಕ್ಕೆ ಕೈ ಹಾಕಿಲ್ಲ. ಕೆಲವರು ಅಧಿಕಾರ ಹಂಚಿಕೆ ವಿಷಯದಲ್ಲಿ ಏನೋ ಬೆಳವಣಿಗೆ ಆಗಿರಬೇಕು ಎಂದು ಪರಿಭಾವಿಸಿದರೆ, ಮತ್ತೆ ಕೆಲವರು ಮುಖ್ಯಮಂತ್ರಿಗಳ ಬದಲಾವಣೆ ಸಾಧ್ಯತೆ ಇರಬಹುದೇ ಎಂದು ಭಾವಿಸಿದಂತಿದೆ. ಇನ್ನೂ ಕೆಲವರು ಸ್ಪೀಕರ್ ಸಂಪುಟ ಸೇರುವ ಸಾಧ್ಯತೆಗಳಿರಬಹುದೇ ಎಂದು ಲೆಕ್ಕಾಚಾರ ಹಾಕಿದ್ದಾರೆ. ಇಂದಿನ ಫೋಟೋ ಶೂಟ್‌ನಲ್ಲಿ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ, ಸ್ಪೀಕರ್ ಒಟ್ಟಿಗೆ ಎಲ್ಲಾ ಪಕ್ಷಗಳ ಸದಸ್ಯರು ಪೋಸ್ ನೀಡಿದರು.

ಜಯನಗರ ರಾಮಮಂದಿರದಲ್ಲಿ ರಾಮೋತ್ಸವ ಆರಂಭ



ಜಯನಗರದಲ್ಲಿರುವ ಶ್ರೀರಾಮಮಂದಿರದ ಆಡಳಿತ ಮಂಡಳಿ ವತಿಯಿಂದ ನಡೆದ 60ನೇ ವರ್ಷದ ರಾಮೋತ್ಸವದಲ್ಲಿ ಪಾಲ್ಗೊಂಡಿದ್ದ ಭಕ್ತರು.

ಮೈಸೂರು, ಮಾ.25–ಮೈಸೂರಿನ ಜಯನಗರದಲ್ಲಿರುವ ಶ್ರೀರಾಮಮಂದಿರದ ಆಡಳಿತ ಮಂಡಳಿ ವತಿಯಿಂದ 60ನೇ ವರ್ಷದ ರಾಮೋತ್ಸವದ ಅಂಗವಾಗಿ ಶ್ರೀ ರಾಮಚಂದ್ರಸ್ವಾಮಿ ಸೀತಾ ಕಲ್ಯಾಣ, ಪಟ್ಟಾಭಿಷೇಕ, ಶ್ರೀ ಆದಿತ್ಯಾದಿ ನವಗ್ರಹ ವಾರ್ಷಿಕೋತ್ಸವ, ಹನುಮಂತೋತ್ಸವ ಮತ್ತು ವಸಂತೋತ್ಸವ ಕಾರ್ಯಕ್ರಮ ಬುಧವಾರದಿಂದ ಆರಂಭವಾಯಿತು.

ಬುಧವಾರ ಬೆಳಗ್ಗೆ ಗಣಪತಿ ಹೋಮ ನಡೆಯಿತು. ಸಂಜೆ 6.30ರಿಂದ ಕಾರ್ಯಕ್ರಮವನ್ನು ಶ್ರೀ ರಾಮಕೃಷ್ಣ ಆಶ್ರಮದ ಯತಿಗಳಾದ ಶ್ರೀ ಸರ್ವದರ್ಶನಾನದ ಮಹಾರಾಜ್ ಉದ್ಘಾಟಿಸಿದರು.

ಮಾ.26ರಂದು ಸಂಜೆ 6.30ಕ್ಕೆ ತ್ಯಾಗರಾಜ ಚಾರಿಟಬಲ್ ಟ್ರಸ್ಟ್ ವತಿಯಿಂದ ವಿದ್ವಾನ್ ಸುದರ್ಶನ್ ಆರ್.ಅಯ್ಯಂಗಾರ್ ಕರ್ನಾಟಕ ಸಂಗೀತ ಕಾರ್ಯಕ್ರಮ ನಡೆಯಲಿದೆ. ಮಾ.27ರಂದು ಶ್ರೀ ರಾಮನವಮಿ ಹಿನ್ನೆಲೆ ಬೆಳಗ್ಗೆ 10ರಿಂದ 1ರವರೆಗೆ ವಿದುಷಿ



ಡಾ.ಮಾಲಿನಿ ಹರಿಕಥೆ ನಡೆಸಲಿದ್ದಾರೆ. ಸಂಜೆ 6ಗಂಟೆಯವರೆಗೆ ಶ್ರೀ ಸೀತಾರಾಮ ಭಜನಾ ಮಂಡಳಿಯವರಿಂದ ಭಜನೆ, ರಾತ್ರಿ 8.45ರಿಂದ ಶ್ರೀ ವಿಷ್ಣು ಸಹಸ್ರನಾಮ ಪಾರಾಯಣ ನಡೆಯಲಿದೆ.

ಮಾ.28ರಂದು ಸಂಜೆ 6.30ರಿಂದ ಡಾ.ವೀಣಾ ರವಿಕುಮಾರ್ ಅವರಿಂದ ವೀಣಾವಾದನ, ವಿದುಷಿ ಶ್ರೀಮತಿ ಡಾ.ವಾಣಿ ಸೇತು ಮಾಧವನ್ ಅವರಿಂದ ವೇಣುವಾದನ, ಡಾ.ಎಂ.ಜಿ.ನರಹರಿ ಅವರಿಂದ ವಯೋಲಿನ್ ವಾದನ ಮತ್ತು ವೃಂದದವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ. ಮಾ.29 ಸಂಜೆ 6.30ರಿಂದ ವಿದ್ವಾನ್ ಡಾ.ರಾ.ಸ.ನಂದಕುಮಾರ್ ಕರ್ನಾಟಕ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ, ಮಾ.30ರಂದುಸಂಜೆ 6.30ರಿಂದ ಸರಿಗಮಪ ಖ್ಯಾತಿಯ ಯೋಗಶ್ರೀ ತಂಡದಿಂದ ದಾಸವಾಣಿ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ. ಮಾ.31ರಂದು ಸಂಜೆ 6 ಗಂಟೆಯಿಂದ ವಿದ್ವಾನ್ ಕೇಶವ್ ಮೋಹನ್ ಅವರಿಂದ ಪಿಟೀಲು ವಾದನ ಇರಲಿದೆ.

ಏ.1ರಂದು ಸಂಜೆ 6.30ರಿಂದ ಡಾ.ತಾಂಡವಮೂರ್ತಿ ಅವರ ತಂಡದಿಂದ ಪಂಚ ಪಿಟೀಲು ವಾದನ, 8.15ಕ್ಕೆ ಸೀತಾರಾಮರ ಶಯನೋತ್ಸವ ಕಾರ್ಯಕ್ರಮ ನಡೆಯಲಿದೆ.

ಏ.2ರಂದು ಸಂಜೆ 6.30ರಿಂದ ವಿದ್ವಾನ್ ಹರೀಶ್ ಪಾಂಡವ್ ಅವರಿಂದ ಸ್ಯಾಕ್ಸಾಫೋನ್ ವಾದನ. ಏ.3 ರಂದು ಸಂಜೆ 6.30ರಿಂದ ವಿದೂಷಿಯರಾದ ಕಲಾಂಬಿಕ ಸಹೋದರಿಯರಿಂದ ಕರ್ನಾಟಕ ಶಾಸ್ತ್ರೀಯ ದ್ವಂದ್ವಗಾಯನ. ಏ.4ರಂದು ಸಂಜೆ 6.30ರಿಂದ ವಿದ್ವಾನ್ ಎಂ.ತ್ಯಾಗರಾಜ್ ಮತ್ತು ತಂಡದಿಂದ ಸಂತೂರ್ ವಾದನ ಕರ್ನಾಟಕ ಶೈಲಿಯಲ್ಲಿ ಏ.5.ರಂದು ಬೆಳಗ್ಗೆ 10.30 ರಿಂದ ಸಭಾ ನಡೆಯಲಿದ್ದು, ಶ್ರೀ ಭಾಗವತೀಯ ಜಗದ್ಗುರು ಶ್ರೀ ಶಂಕ ರಾಚರ್ಯ ಶ್ರೀ ಗೋವಿಂದಾನಂದ ಸರಸ್ವತಿ ಸ್ವಾಮೀಜಿ ಅನುಗ್ರಹ ಭಾಷಣ ಮಾಡಿ ಫಲ ಮಂತ್ರಾಕ್ಷತೆ ಕೊಡಲಿದ್ದಾರೆ ಎಂದು ಆಡಳಿತ ಮಂಡಳಿ ಪ್ರಕಟಣೆ ತಿಳಿಸಿದೆ.

ಬಿಎಸ್‌ಎಸ್ ವಿದ್ಯೋದಯ ಶಾಲೆಯಲ್ಲಿ ರಸಮಂಜರಿ ಕಾರ್ಯಕ್ರಮ



ಬಿಎಸ್‌ಎಸ್ ವಿದ್ಯೋದಯ ಶಾಲೆಯಲ್ಲಿ ಮಾ.28ರಂದು ಏರ್ಪಡಿಸಿರುವ ರಸಮಂಜರಿ ಕಾರ್ಯಕ್ರಮದ ಪೋಸ್ಟರ್ ಬಿಡುಗಡೆಗೊಳಿಸಲಾಯಿತು.

ಮೈಸೂರು, ಮಾ.25(ಜಿಎ)–ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಶ್ರೀ ಭಗವತಿ ಚಿತ್ಪಾವನ ಮಹಿಳಾ ಟ್ರಸ್ಟ್ ವತಿಯಿಂದ ಮಾ.28ರಂದು ಸಂಜೆ 5 ಗಂಟೆಯಿಂದ 8 ಗಂಟೆವರೆಗೆ ಕೃಷ್ಣಮೂರ್ತಿಪುರಂನಲ್ಲಿರುವ ಬಿಎಸ್‌ಎಸ್ ವಿದ್ಯೋದಯ ಶಾಲೆಯಲ್ಲಿ ರಸಮಂಜರಿ ಕಾರ್ಯಕ್ರಮ ಏರ್ಪಡಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಟ್ರಸ್ಟ್ ಅಧ್ಯಕ್ಷ ವೀಣಾ ಡೊಂಗ್ರೆ ಈ ವಿಷಯ ತಿಳಿಸಿ, ಕಾರ್ಯಕ್ರಮದಲ್ಲಿ ಜೀ ಕನ್ನಡ ವಾಹಿನಿಯ ಸರಿಗಮಪ 20ನೇ ಸೀಜನ್‌ನಲ್ಲಿ ಸೆಮಿ ಫೈನಲ್ ಸ್ಪರ್ಧಿಯಾಗಿದ್ದ ಪ್ರಜ್ಞಾ ಮರಾಠೆ ಸುಗಮ ಸಂಗೀತ ಹಾಗೂ ಚಿತ್ರಗೀತೆಗಳನ್ನು ಹಾಡುವರು. ಅವರೊಂದಿಗೆ ಅನ್ವಿತ್ ರಾಜ್ ಸಾಥ್ ನೀಡಲಿದ್ದಾರೆ ಎಂದರು.

ಉದ್ಘಾಟನಾ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಸಮರ್ಪಣ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಡಾ.ಸುಧಾ ಫಣೀಶ್ ಮತ್ತು ವಿಜಯ ವಿಠಲ ವಿದ್ಯಾಶಾಲಾ ಪ್ರಾಂಶುಪಾಲರಾದ ಎಸ್.ಎ.ವೀಣಾ ಭಾಗವಹಿಸುವರು. ಮಹಿಳೆಯರಿಂದ ಮಹಿಳೆಯರಿಗಾಗಿ ಭಗವದ್ಗೀತೆ ಚಿತ್ಪಾವನ ಮಹಿಳಾ ಟ್ರಸ್ಟ್ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಿದೆ. ಪ್ರಜ್ಞಾ ಮರಾಠೆಯವರದು 4ನೆಯ ಕಾರ್ಯಕ್ರಮ ಎಂದರು. ಸುದ್ದಿಗೋಷ್ಠಿಯಲ್ಲಿ ಕಾರ್ಯದರ್ಶಿ ಸುಜಲಾ ಗೋರೆ, ಕೋಶಾಧಿಕಾರಿ ದೀಪಾ ಹೆಬ್ಬಾರ, ಸದಸ್ಯೆ ಮಧುರಾ ತಾಮ್ಹನ್‌ಕರ್ ಉಪಸ್ಥಿತರಿದ್ದರು.

ಲೋಕಾರ್ಪಣೆ



ಮೈಸೂರಿನ ಕೆ.ಆರ್. ಮೊಹಲ್ಲಾ ಸೀತಾರಾಮ್ ರಾವ್ ರಸ್ತೆಯಲ್ಲಿರುವ ಶ್ರೀ ಕಟ್ಟೆ ನರಸಿಂಹಯ್ಯನವರ ಶ್ರೀರಾಮಮಂದಿರವನ್ನು ಟ್ರಸ್ಟ್ ವತಿಯಿಂದ ನವೀಕರಣಗೊಳಿಸಿ ಲೋಕಾರ್ಪಣೆಗೊಳಿಸಲಾಯಿತು. ಈ ವೇಳೆ ದೇವತಾ ಕಾರ್ಯ ಮತ್ತು ಮಧ್ಯಾಹ್ನ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು.

ಡಾ.ಅಂಬೇಡ್ಕರ್ ಜನ್ಮ ದಿನಾಚರಣೆ ಪ್ರಯುಕ್ತ ನಾಳೆ ಪೂರ್ವಭಾವಿ ಸಭೆ



ಮೈಸೂರು, ಮಾ.25– ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಏ.5ರಂದು ಡಾ.ಬಾಬು ಜಗಜೀವನ್‌ರಾಂ ಅವರ 119ನೇ ಜನ್ಮ ದಿನಾಚರಣೆ ಹಾಗೂ ಏ.14 ರಂದು ಡಾ.ಬಿ.ಆರ್.ಅಂಬೇಡ್ಕರ್ 135ನೇ ಜನ್ಮದಿನಾಚರಣೆ ಆಚರಿಸುವ ಕುರಿತು ಪೂರ್ವಭಾವಿ ಸಭೆಯನ್ನು ಮಾ.27ರಂದು ಬೆಳಿಗ್ಗೆ 11 ಗಂಟೆಗೆ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕರು ತಿಳಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

26.3.2026 ಗುರುವಾರ, ಮಳೆ ನಕ್ಷತ್ರ: ಉತ್ತರಭಾದ್ರ 18.03.2026 ರಿಂದ 30.03.2026 ಪರಾಭವ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ, ತಿಥಿ: ಅಷ್ಟಮಿ, ನಕ್ಷತ್ರ: ಆರ್ದ್ರಾ, ರಾಹುಕಾಲ: ಮಧ್ಯಾಹ್ನ 1.30ರಿಂದ 3 ಗಂಟೆವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30 ರಿಂದ ದೇಹ– ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9 ರಿಂದ ಪಿಸಿಓಡಿ ತೊಂದರೆ, ಬೊಜ್ಜು ನಿವಾರಣೆ, ಪಾರ್ಕಿನ್‌ಸನ್ಸ್ ಕಾಯಿಲೆ, ವಸಂತ ವಮನ ದೇಹಶುದ್ಧಿ, ಮೈಗ್ರೇನ್, ತಲೆನೋವು, ಕಿಡ್ನಿ ತಪಾಸಣೆ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.

■ **ಮಹಾರಾಜ ಕಾಲೇಜು, ಮೈಸೂರು ವಿವಿ ,ಪಠ್ಯೇತರ ಚಟುವಟಿಕೆಗಳ ಸಮಿತಿ:** ಡಾ.ರಾಜ್‌ಕುಮಾರ್ ಸ್ಮಾರಕ ಅಂತರ ಕಾಲೇಜು ಗೀತಗಾಯನ ಸ್ಪರ್ಧೆ, ಸ್ಥಳ: ಶತಮಾನೋತ್ಸವ ಭವನ, ಮಹಾರಾಜ ಕಾಲೇಜು ಮೈಸೂರು, ಬೆಳಗ್ಗೆ 10 ಗಂಟೆಗೆ.

■ **ಅನ್ನಪೂರ್ಣ ಐ ಹಾಸ್ಪಿಟಲ್:** ಯುಗಾದಿ ಹಾಗೂ ಅಂತರರಾಷ್ಟ್ರೀಯ ಮಹಿಳಾ ದಿನದ ಅಂಗವಾಗಿ ಉಚಿತ ಕಣ್ಣಿನ ತಪಾಸಣೆ ಶಿಬಿರ, ಸ್ಥಳ: ಅನ್ನಪೂರ್ಣ ಕಣ್ಣಿನ ಆಸ್ಪತ್ರೆ, #199 ಸಾಯಿಪಾದಂ, ನ್ಯೂ ಕಾಂತರಾಜ್ ಅರಸ್ ರಸ್ತೆ, ಶಾರದಾದೇವಿ ನಗರ, ಬೆಳಗ್ಗೆ 10 ರಿಂದ.

■ **ಜೆಎಸ್‌ಎಸ್ ಆಸ್ಪತ್ರೆ:** ವಿಶ್ವಮೂತ್ರಪಿಂಡ ದಿನಾಚರಣೆ, ಅಧ್ಯಕ್ಷತೆ: ಡಾ.ಸಿ.ಪಿ ಮಧು, ಮುಖ್ಯ ಅತಿಥಿಗಳು: ಜಾವಗಲ್ ಶ್ರೀನಾಥ್, (ಮಾಜಿ ಕ್ರಿಕೆಟಿಗರು, ಐಸಿಸಿ ಮ್ಯಾಚ್ ರೆಫರಿ) ಸ್ಥಳ: ಜೆಎಸ್‌ಎಸ್ ಆಸ್ಪತ್ರೆ ಒಳ ಆವರಣ, ಮೊದಲನೆ ಮಹಡಿ, ಎಂಜಿ ರಸ್ತೆ, ಮೈಸೂರು, ಮಧ್ಯಾಹ್ನ 12 ರಿಂದ

■ **ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಮೈಸೂರು:** ದತ್ತಿ ಕಾರ್ಯಕ್ರಮ, ಉಪನ್ಯಾಸ: ಡಾ.ಎನ್.ಮಹೇಶ್ವರಿ, ವಿಶ್ರಾಂತ ಪ್ರಾಧ್ಯಾಪಕರು, ವಿಷಯ: ವಚನಕಾರ್ತಿಯರಲ್ಲಿ ವೈಚಾರಿಕ ಪ್ರಜ್ಞೆ, ಅಧ್ಯಕ್ಷತೆ: ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ.ಜಯಪ್ಪ ಹೊನ್ನಾಳಿ, ಸ್ಥಳ: ಜ್ಯೋತಿರ್ಗಮಯ ಸೇವಾ ಟ್ರಸ್ಟ್, ಹೆಣ್ಣು ಮಕ್ಕಳ ಉಚಿತ ವಿದ್ಯಾರ್ಥಿ ನಿಲಯ, ರಾಮಾನುಜ ರಸ್ತೆ, 15 ನೇ ಕ್ರಾಸ್, ಸಂಜೆ 5 ರಿಂದ,

■ **ಗೌತಮ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸೇವಾಟ್ರಸ್ಟ್ ಮೈಸೂರು:** ರಂಗಭೂಮಿ ಮತ್ತು ಜನಪದ ಕಲಾಪ್ರಕಾರಗಳ ಉಚಿತ ತರಬೇತಿ ಶಿಬಿರ–2026 ಸಮಾರೋಪ ಸಮಾರಂಭ, ಉದ್ಘಾಟನೆ: ಅಹಿಂದ ಜವರಪ್ಪ, ಅಧ್ಯಕ್ಷತೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಸ್ಥಳ: ಕಿರುರಂಗ ಮಂದಿರ, ಕಲಾಮಂದಿರದ ಆವರಣ, ಸಂಜೆ 5.30 ರಿಂದ

■ **ತ್ಯಾಗರಾಜ ಸಂಗೀತ ಸಭಾ ಚಾರಿಟಬಲ್ ಟ್ರಸ್ಟ್ :** ಶ್ರೀ ರಾಮನವಮಿ ಸಂಗೀತೋತ್ಸವದ ಪ್ರಯುಕ್ತ ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿ, ಸ್ಥಳ: ಶ್ರೀರಾಮ ಮಂದಿರ, ಜಯನಗರ, ಸಂಜೆ 6.30 ರಿಂದ

■ **ಮೈಸೂರು ವಿಶ್ವವಿದ್ಯಾನಿಲಯ, ತತ್ವಶಾಸ್ತ್ರ ಅಧ್ಯಯನ ವಿಭಾಗ, ಹಿಂದೂ ಜ್ಞಾನಪೀಠ:** ರಾಷ್ಟ್ರೀಯ ವಿಚಾರ ಸಂಕಿರಣ, ಜಾಗತಿಕ ಚಿಂತನೆಯಲ್ಲಿ ಹಿಂದೂ ತತ್ವಜ್ಞಾನದ ಸ್ಥಾನ ಸಮಾರೋಪ ಸಮಾರಂಭ, ಅಧ್ಯಕ್ಷತೆ: ಮೈಸೂರು ವಿವಿ ವಿಶ್ರಾಂತ ಪ್ರಾಧ್ಯಾಪಕರಾದ ಪ್ರೊ.ವಿ.ಎನ್.ಶೇಷಗಿರಿರಾವ್, ಸ್ಥಳ: ಶೈಕ್ಷಣಿಕ ಬಹುಮಾಧ್ಯಮ ಸಂಶೋಧನಾ ಕೇಂದ್ರ ಸಭಾಂಗಣ (ಇಎಂಆರ್‌ಸಿ), ಮಾನಸಗಂಗೋತ್ರಿ, ಸಂಜೆ, 4 ರಿಂದ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ದೈಹಿಕ ದೀಕ್ಷೆ ಅರಿವಿನಿಂದ ಆರೋಗ್ಯದತ್ತ ಬಾನುಲಿ ಸರಣಿ ಕಾರ್ಯಕ್ರಮ, ಪ್ರಸ್ತುತಿ ಡಾ.ಕುಲದೀಪ್.ಎನ್, 6.40 ಅರಿವಿನ ಶಿಖರ, ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಎಂ.ಆರ್.ಸುಧಾ ಹಾಗೂ ಹಂಸಿನಿ ಎಸ್.ಕುಮಾರ್. ವ್ಯಾಖ್ಯಾನ–ಡಾ.ಪ್ರದೀಪ್‌ಕುಮಾರ್ ಹೆಬ್ರಿ, 6.50 ರೈತರಿಗೆ ಸಲಹೆ, 7.15 ಹಸಿರು ಹೊನ್ನು–ಪ್ರಾಯೋಜಿತ ಕಾರ್ಯಕ್ರಮ, 8.30 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ–ವಿದ್ವಾನ್ ಅಭಿಷೇಕ್ ರಘುರಾಮ್–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ –ಮಿಶ್ರಮಾಧುರ್ಯ, **ಮಧ್ಯಾಹ್ನ** 12.05 ವನಿತಾ ವಿಹಾರ, 12.35 ದೇವರನಾಮ. 12.45 ಚಿತ್ರಗೀತೆಗಳು, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ಕನ್ನಡ ಚಿತ್ರಗೀತೆಗಳು, 4.00 ಜನಪದ ಸಂಗೀತ, 4.30 ಕನ್ನಡ ಭಾರತಿ, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ–ಕಿಸಾನ್‌ವಾಣಿ –ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ಹಣ್ಣು ಹೊನ್ನು ತೋಟಗಾರಿಕಾ ಬೆಳೆಗಳ ಸಮಗ್ರ ಬೇಸಾಯ ವಿಧಾನ ಕುರಿತ ಬಾನುಲಿ ಸರಣಿ, ತೋಟಗಾರಿಕಾ ಬೆಳೆಗಳಲ್ಲಿ ಜೈವಿಕ ಗೊಬ್ಬರಗಳು ಹಾಗೂ ಜೈವಿಕ ಪೀಡೆನಾಶಕಗಳ ಬಳಕೆ ಈ ಕುರಿತು ಮೈಸೂರು ತಾಲೂಕು ಎಲಚನಹಳ್ಳಿಯ ತೋಟಗಾರಿಕಾ ಮಹಾವಿದ್ಯಾಲಯದ ಸಹಪ್ರಾಧ್ಯಾಪಕರಾದ ಡಾ.ಜಿ.ಮಂಜುನಾಥ್ ಅವರೊಂದಿಗೆ ಸಂದರ್ಶನ. ಸಂದರ್ಶನ– ಎನ್.ಕೇಶವಮೂರ್ತಿ, 7.45 ವಿಧಾನಮಂಡಲದಲ್ಲಿ ಇಂದು, 8.00 ಸಂಸತ್ ಸಮೀಕ್ಷಾ, 8.15 ಯುವವಾಣಿ–ಚರ್ಚೆ–ವಿಷಯ: ಶೂನ್ಯ ತ್ಯಾಜ್ಯ ನಿರ್ವಹಣೆ, ನಡೆಸಿಕೊಡುತ್ತಾರೆ–ಪಾಂಡವಪುರ ತಾಲೂಕು ಚಿನಕುರಳಿಯ ಎಸ್‌ಟಿಜಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳಾದ ಶ್ರಾವಣಿ ಗಿರೀಶ್, ಸಂಜನಾ ಜೆ, ರಕ್ಷಿತಾ ಸಿ.ಎಂ. ಹಾಗೂ ಹೇಮಂತ್ ಹೆಚ್.ಕೆ., 9.30–ಕರ್ನಾಟಕ ಶಾಸ್ತ್ರೀಯ ಸಂಗೀತ, ವಿದುಷಿ ಡಿ.ಕೆ.ಪಟ್ಟಮ್ಮಾಳ್–ಹಾಡುಗಾರಿಕೆ, 10.00 ಸಂಸತ್ತಿನ ಪ್ರಶ್ನೋತ್ತರ ಅವಧಿಯ ಕಲಾಪಗಳ ಧ್ವನಿಮುದ್ರಣದ ಪ್ರಸಾರ.

■ **ಸದ್ವಿದ್ಯಾ ಶಿಕ್ಷಣ ಸಂಸ್ಥೆಗಳು, ಮೈಸೂರು:** ರಾಮೋತ್ಸವದ ಸಾಂಸ್ಕೃತಿಕ ಕಾರ್ಯಕ್ರಮಗಳು, ಸಂಗೀತ ಸಂಜೆ, ವಿದುಷಿ ಡಾ.ಸಹನಾ ಅವರಿಂದ ವೀಣಾವಾದನ, ವಿದ್ವಾನ್ ಅರ್ಜುನ್‌ಕುಮಾರ್‌ರಿಂದ ಮೃದಂಗ ಸಹಕಾರ, ಸ್ಥಳ: ಸದ್ವಿದ್ಯಾ ಶಿಕ್ಷಣ ಸಂಸ್ಥೆ ಆವರಣ, ನಂ.7, ನಾರಾಯಣಶಾಸ್ತ್ರಿ ರಸ್ತೆ, ಸಂಜೆ 6 ರಿಂದ.

■ **ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವ ವಿದ್ಯಾನಿಲಯ, ದಿ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್, ಮೈಸೂರು ಲೋಕಲ್ ಸೆಂಟರ್, ಜೆಎಸ್‌ಎಸ್ ಎನ್ವಿರಾನ್ಮೆಂಟ್ ಇಂಜಿನಿಯರಿಂಗ್ ಡಿಪಾರ್ಟ್‌ಮೆಂಟ್:** ವಿಶ್ವ ಜಲ ದಿನಾಚರಣೆ–2026, ಮುಖ್ಯ ಅತಿಥಿ: ಐಐಎಸ್‌ಸಿ ಬೆಂಗಳೂರಿನ ನಿವೃತ್ತ ಪ್ರಾಧ್ಯಾಪಕ ಪ್ರೊ ಹೆಚ್.ಎನ್.ಚಾಣಾಕ್ಯ, ಅಧ್ಯಕ್ಷತೆ: ಐಇಐ ಛೇರ್ಮನ್ ಹೆಚ್.ಎಸ್.ಸುರೇಶ್ ಬಾಬು, ಸ್ಥಳ: ಎಸ್.ಪಿ ಭಟ್ ಹಾಲ್, ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣ, ಜೆಎಲ್‌ಬಿ ರಸ್ತೆ, ಸಂಜೆ 5.30 ರಿಂದ

■ **ಶ್ರೀ ರಾಮಸೇವಾ ಮಂಡಳಿ ಚಾರಿಟಬಲ್ ಟ್ರಸ್ಟ್ ಮೈಸೂರು:** 32ನೇ ಶ್ರೀರಾಮನವಮಿ ಸಂಗೀತೋತ್ಸವ–2026, ವಿದ್ವಾನ್ ಸುನೀಲ್ ಗಾರ್ಗ್ಯನ್ ತಂಡದಿಂದ ಗಾಯನ ಕಾರ್ಯಕ್ರಮ, ಸ್ಥಳ: ಶ್ರೀ ಪ್ರಸನ್ನ ಪಾರ್ವತಿ ಕಲ್ಯಾಣ ಮಂಟಪ, ವಿವಿ ಮೊಹಲ್ಲಾ ಮೈಸೂರು, ಸಂಜೆ 6.15 ರಿಂದ,

■ **ಶ್ರೀ ಗಣಪತಿ ಸೇವಾ ಮಂಡಳಿ ಟ್ರಸ್ಟ್:** 7ನೇ ರಾಮೋತ್ಸವ, ಸಂಜೆ 6.30ರಿಂದ ದೇವರನಾಮಗಳು, ಹರಿದಾಸ ಕೈಂಕರ್ಯ ತಂಡದಿಂದ 'ಕನಕ ಜಾನಕಿ' ಏಕವ್ಯಕ್ತಿ ತಾಳ ಮದ್ದಲೆ ಪ್ರಸಂಗ, ಸ್ಥಳ: ರಜತ್ ಸಭಾ ಮಂಟಪ, ಗಣಪತಿ ದೇವಸ್ಥಾನ, ಐ ಬ್ಲಾಕ್ ರಾಮಕೃಷ್ಣ ನಗರ, ಸಂಜೆ 7 ರಿಂದ.

■ **ಶ್ರೀ ರಾಮಕೃಷ್ಣ ಆಶ್ರಮ, ಯಾದವಗಿರಿ, ಮೈಸೂರು:** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀಮದ್ಭಗವದ್ಗೀತಾ ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಸಂಜೆ 6ರಿಂದ

■ **ವಿದ್ಯಾವರ್ಧಕ ಸಂಘದ ಶಿಕ್ಷಣ ಸಂಸ್ಥೆ:** ಅಭಿನಂದನಾ ಸಮಾರಂಭ, ದಿವ್ಯ ಸಾನಿಧ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ, ಸುತ್ತೂರು ಮಠ, ಅಧ್ಯಕ್ಷತೆ: ವಿದ್ಯಾವರ್ಧಕ ಸಂಘದ ಗೌರವ ಅಧ್ಯಕ್ಷ ಗುಂಡಪ್ಪಗೌಡ, ಮುಖ್ಯ ಅತಿಥಿ: ಮಾಜಿ ಸಚಿವರಾದ ಡಾ.ಪಿಜಿಆರ್. ಸಿಂಧ್ಯಾ, ಸ್ಥಳ: ಸಾಹುಕಾರ್ ಚೆನ್ನಯ್ಯ ಸಭಾಂಗಣ, ವಿವಿಸಿಇ ಆವರಣ, ಗೋಕುಲಂ 3ನೇ ಹಂತ, ಮಧ್ಯಾಹ್ನ 3.30ರಿಂದ.

ಪಂಡಿತ್ ದೀನದಯಾಳ್ ಉಪಾಧ್ಯಾಯರ 'ಏಕಾತ್ಮ ಮಾನವ ದರ್ಶನ' ತತ್ವ ಭಾರತೀಯ ಸಂಸ್ಕೃತಿಯ ಜೀವನ ದರ್ಶನ

- ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಬಣ್ಣನೆ
- 3 ದಿನಗಳ ಅಂತಾರಾಷ್ಟ್ರೀಯ ಶೈಕ್ಷಣಿಕ ಸಮ್ಮೇಳನ ಉದ್ಘಾಟನೆ

ಮೈಸೂರು, ಮಾ.25(ಪಿಎಂ)– ಪಂಡಿತ್ ದೀನದಯಾಳ್ ಉಪಾಧ್ಯಾಯರ 'ಏಕಾತ್ಮ ಮಾನವ ದರ್ಶನ' ತತ್ವ-ಸಿದ್ಧಾಂತವು ಭಾರತೀಯ ಸಂಸ್ಕೃತಿಯ ಜೀವನ ದರ್ಶನವಾಗಿದೆ ಎಂದು ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ಹೇಳಿದರು.

ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭವನದಲ್ಲಿ ಪ್ರಜ್ಞಾ ಪ್ರವಾಹ ಕರ್ನಾಟಕ ಹಾಗೂ ಡಾ.ಶ್ಯಾಮ ಪ್ರಸಾದ್ ಮುಖರ್ಜಿ ರಿಸರ್ಚ್ ಫೌಂಡೇಷನ್ ಜಂಟಿ ಆಶ್ರಯದಲ್ಲಿ ಹಮ್ಮಿಕೊಂಡಿರುವ 'ಏಕಾತ್ಮ ಮಾನವ ದರ್ಶನ-ಭಾರತದ ವಿಶ್ವದೃಷ್ಟಿ' ಶೀರ್ಷಿಕೆಯ ಮೂರು ದಿನಗಳ ಅಂತಾರಾಷ್ಟ್ರೀಯ ಶೈಕ್ಷಣಿಕ ಸಮ್ಮೇಳನವನ್ನು ಬುಧವಾರ ಉದ್ಘಾಟಿಸಿ ಅವರು ಮಾತನಾಡಿದರು.

ಎಲ್ಲರಿಗೂ ನಮಸ್ಕಾರ, ನಿಮ್ಮೆಲ್ಲರನ್ನು ಹಾರ್ದಿಕವಾಗಿ ಸ್ವಾಗತಿಸುತ್ತೇನೆಂದು ಕನ್ನಡದಲ್ಲಿ ಭಾಷಣ ಆರಂಭಿಸಿದ ಅವರು, ನಂತರ ಹಿಂದಿ ಭಾಷೆಯಲ್ಲಿ ತಮ್ಮ ಉದ್ಘಾಟನಾ ಭಾಷಣ ಮಾಡಿದರು. ದೀನದಯಾಳ್ ಉಪಾಧ್ಯಾಯರ ಈ ತತ್ವವು ಭಾರತದ ಆತ್ಮ, ಸಂಸ್ಕೃತಿ, ಯೋಚನೆ ಮತ್ತು ಜೀವನ ಪದ್ಧತಿಯ ಮೂಲಾಧಾರವಾಗಿದೆ. ಕುಶಲ ಸಂಘಟಕ, ದಾರ್ಶನಿಕ, ಪ್ರಖರ ವಾಗ್ಮಿ, ಆರ್ಥಿಕ ತಜ್ಞ ಪಂಡಿತ ದೀನ ದಯಾಳ್ ಉಪಾಧ್ಯಾಯರು ತಮ್ಮ ಐತಿಹಾಸಿಕ ವ್ಯಾಖ್ಯಾನ ಮಾಲೆಯಲ್ಲಿ ಏಕಾತ್ಮ ಮಾನವ ದರ್ಶನ ವೆಂಬ ಸಮಗ್ರ ದರ್ಶನದ ದೃಷ್ಟಿಕೋನವನ್ನು 60 ವರ್ಷಗಳ ಹಿಂದೆ ನೀಡಿದ್ದರು. ಅದು ವ್ಯಕ್ತಿ, ಸಮಾಜ ಮತ್ತು ಪ್ರಕೃತಿಯ ನಡುವಿನ ಸಮನ್ವಯದ ಮಹತ್ವ ಸಾರುವ ಅದ್ಭುತ ದರ್ಶನವಾಗಿದೆ ಎಂದರು.

ಈ ದರ್ಶನದ ಮೂಲಕ ಅವರು ವ್ಯಕ್ತಿ, ಸಮಾಜ, ರಾಷ್ಟ್ರ ಮತ್ತು ವಿಶ್ವದ ವಿಕಾಸ ಮತ್ತು ವಿಶ್ವ ಕಲ್ಯಾಣದ ಭಾವವನ್ನು ಮೂಡಿಸಿದ್ದಾರೆ. ಈ ದರ್ಶನದ ಅನುಸಾರ ಸಮಾಜವು ಒಂದು ಜೀವಂತ ಘಟಕ. ಶರೀರದ ಎಲ್ಲಾ ಅಂಗಗಳು ಸೇರಿ ಹೇಗೆ ಕಾರ್ಯ ನಿರ್ವಹಿಸುತ್ತವೆಯೋ, ಹಾಗೆಯೇ ಸಮಾಜದ ವಿಭಿನ್ನ ವರ್ಗಗಳು ಜೊತೆಯಾಗಿ ಒಂದು ಸಮಗ್ರ ವ್ಯವಸ್ಥೆಯನ್ನು ಮಾಡುತ್ತವೆ. ಆದ್ದರಿಂದ ಸಮಾಜದ ವಿಕಾಸಕ್ಕೆ ಎಲ್ಲಾ ವರ್ಗಗಳ ಸಾಮರಸ್ಯ ಮತ್ತು ಸಹಯೋಗ ಅವಶ್ಯಕವಾದದ್ದು ಎಂದು ವಿಶ್ಲೇಷಿಸಿದರು.

ಸಾನ್ನಿಧ್ಯ ವಹಿಸಿದ್ದ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶೀಕೇಂದ್ರ ಸ್ವಾಮೀಜಿ ಮಾತನಾಡಿ, ಪಂಡಿತ್ ದೀನದಯಾಳ್ ಉಪಾಧ್ಯಾಯರ ಏಕಾತ್ಮ ಮಾನವ ದರ್ಶನ ಉಪನ್ಯಾಸಗಳ ಸಂದೇಶಗಳನ್ನು ಶೈಕ್ಷಣಿಕ ಮತ್ತು ಸಾಮಾಜಿಕವಾಗಿ ಅನುಷ್ಠಾನಗೊಳಿಸಲು ದೇಶದೆಲ್ಲೆಡೆ ಇಂತಹ ಸಮ್ಮೇಳನ ನಡೆಸುತ್ತಿದ್ದು, ಅದರ ಭಾಗವಾಗಿ ಮೈಸೂರಲ್ಲೂ ಸಮ್ಮೇಳನ ಆಯೋಜಿಸಿರುವುದು ಅತ್ಯಂತ ಸಂತಸ. ದೀನ ದಯಾಳ್ ಉಪಾಧ್ಯಾಯರು ಚಿಕ್ಕ ವಯಸ್ಸಿನಲ್ಲಿ ತಂದೆ-ತಾಯಿ ಕಳೆದುಕೊಂಡರು. ಆದರೆ ಜೀವನದಲ್ಲಿ ಉತ್ಸಾಹ ಕಳೆದುಕೊಳ್ಳದೇ ಮುನ್ನಡೆದರು. ನೋವು-ದುಃಖದ ನಡುವೆ ಅವರಲ್ಲಿ ದೇಶಾಭಿಮಾನದ ಪ್ರಜ್ಞೆ ಜಾಗೃತಗೊಂಡಿತು. ಹಾಗಾಗಿ ಅವರು ಎಂದೆಂದಿಗೂ ಸ್ಮರಣೀಯರು ಎಂದು ಸ್ಮರಿಸಿದರು.



ರಾಜ್ಯಪಾಲರು, ಪಂಡಿತ್ ದೀನದಯಾಳ್ ಉಪಾಧ್ಯಾಯರ ಭಾವಚಿತ್ರ ಹಾಗೂ ಸರಸ್ವತಿ ಫೋಟೋಗೆ ಪುಷ್ಪ ನಮನ ಸಲ್ಲಿಸುವ ಮೂಲಕ ಸಮ್ಮೇಳನ ಉದ್ಘಾಟಿಸಿದರು.

ಚರ್ಚೆಗೆ ಗ್ರಾಸವಾದ ಸಮ್ಮೇಳನ...

ಈ ಸಮ್ಮೇಳನದ ಕಾರಣಕ್ಕೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ ಸಂಘರ್ಷ ಏರ್ಪಡಲು ಮುಕ್ತ ವಿವಿ ವೇದಿಕೆಯಾಗುತ್ತಿದೆಯೇ ಎಂಬ ಚರ್ಚೆ ಸಾರ್ವಜನಿಕ ವಲಯದಲ್ಲಿ ನಡೆಯುತ್ತಿದೆ. ಸದರಿ ಸಮ್ಮೇಳನಕ್ಕೆ ಮುಕ್ತ ವಿವಿಯಿಂದ ವಿವಿಧ ರೀತಿಯ ಸಹಭಾಗಿತ್ವ ನೀಡಿದ್ದ ಕಾರಣಕ್ಕೆ ವಿಧಾನ ಪರಿಷತ್‌ನಲ್ಲಿ ಚರ್ಚೆಯಾಗಿ ಕುಲಪತಿ ವಿರುದ್ಧ ಅಸಮಾಧಾನ ವ್ಯಕ್ತವಾಗಿತ್ತು. ಅಲ್ಲದೆ, ಶಿಷ್ಟಾಚಾರ ಉಲ್ಲಂಘಿಸಿ ಖಾಸಗಿ ಕಾರ್ಯಕ್ರಮಕ್ಕೆ ಅನುಮತಿ ನೀಡಿರುವುದನ್ನು ಒಪ್ಪಲು ಸಾಧ್ಯವಿಲ್ಲವೆಂದು ಸಮ್ಮೇಳನ ರದ್ದುಗೊಳಿಸಲು ಉನ್ನತ ಶಿಕ್ಷಣ ಇಲಾಖೆಯು ಮಂಗಳವಾರ ಆದೇಶ ಹೊರಡಿಸಿತ್ತು. ಆದರೂ, ಬುಧವಾರ ನಿಗದಿಯಂತೆ ಸಮ್ಮೇಳನಕ್ಕೆ ಚಾಲನೆ ನೀಡಲಾಗಿದೆ. ಈ ನಡುವೆ ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿ ಸಚಿನ್ ಶಂಕರ್ ಮಗ್ದುಮ್ ಅವರು, ಇಂದು ರಾಜ್ಯ ಸರ್ಕಾರದ ಆದೇಶಕ್ಕೆ ತಡೆ ನೀಡಿದ್ದು, ಏಕಾತ್ಮ ಮಾನವ ದರ್ಶನ ಸಮ್ಮೇಳನದಲ್ಲಿ ಹಸ್ತಕ್ಷೇಪ ಮಾಡದಂತೆ ನಿರ್ದೇಶನ ನೀಡಿದೆ ಎಂಬ ಸುದ್ದಿ ಹೊರಬಿದ್ದಿದೆ.

ಕಾಲೇಜು ದಿನಗಳಲ್ಲಿ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಹೆಡ್ಗೆವಾರ್ ಅವರ ಸಂಪರ್ಕಕ್ಕೆ ಬಂದು ಅವರು ದೇಶಭಕ್ತನಾಗಿ ಪರಿವರ್ತನೆಯಾದರು. ಅಲ್ಲಿಂದ ಅವರು ಸ್ವಯಂ ಸೇವಕ ಸಂಘದ ಕಾರ್ಯ ಚಟುವಟಿಕೆಗಳನ್ನು ಪ್ರಾರಂಭಿಸಿದರು. ಏಕಾತ್ಮ ಮಾನವ ದರ್ಶನ ವಾದವನ್ನು ಪ್ರಬಲವಾಗಿ ಪ್ರತಿಪಾದಿಸಿದ ಅವರು, ಅನೇಕ ಕೃತಿಗಳನ್ನು ಇದಕ್ಕೆ ಪೂರಕವಾಗಿ ರಚಿಸಿದ್ದಾರೆ. ಇಂದು ಕೊಲ್ಲಿ ರಾಷ್ಟ್ರಗಳಲ್ಲಿ ಯುದ್ಧ ನಡೆಯುತ್ತಿದ್ದು, ಅಲ್ಲಿ ಇವರ ಚಿಂತನೆಗಳ ಬಗ್ಗೆ ಅರಿವಿದ್ದರೆ ಯುದ್ಧದ ಸನ್ನಿವೇಶ ನಿರ್ಮಾಣವಾಗುತ್ತಿರಲಿಲ್ಲ ಎಂದರು.

ಪ್ರಗತಿ ಜೊತೆಗೆ ಸಮಾನತೆ, ಸಹಕಾರ, ಪ್ರಕೃತಿಯೊಂದಿಗೆ ಸಾಮರಸ್ಯ ಇರಬೇಕೆಂಬುದು ಏಕಾತ್ಮ ಮಾನವ ದರ್ಶನದ ಮುಖ್ಯವಾದ ಅಂಶ. ಭೌತಿಕ ಪ್ರಗತಿ ಜೊತೆಗೆ ಆಧ್ಯಾತ್ಮ ಮೌಲ್ಯಗಳನ್ನು ಮೇಳೈಸುವುದು ನಿರಂತರವಾಗಿ ಆಗಬೇಕೆಂದು ಅವರ ಚಿಂತನೆಯಾಗಿತ್ತು. ಮೌಲ್ಯಾಧಾರಿತ ರಾಜಕೀಯ ಪ್ರಜ್ಞೆ ಮೂಡಿಸಿದ ಅವರು, ಭಾರತೀಯ ಪರಂಪರೆಯ ಸಂಕೇತವಾಗಿ ಜೀವನ ನಡೆಸಿದವರು ಎಂದು ಸ್ಮರಿಸಿದರು.

ಇದಕ್ಕೂ ಮುನ್ನ ಆನ್‌ಲೈನ್ ಮೂಲಕ ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಔಪಚಾರಿಕವಾಗಿ ಸಮ್ಮೇಳನ ಉದ್ಘಾಟಿಸಿ ಮಾತನಾಡಿ, 2047ರ ವಿಕಸಿತ ಭಾರತ ಕಲ್ಪನೆಯು ದೀನದಯಾಳ್ ಉಪಾಧ್ಯಾಯರ ಏಕಾತ್ಮ ಮಾನವ ದರ್ಶನದ ಆಶಯವನ್ನು ಹೊಂದಿದೆ. ಅದು ಕೇವಲ ಆರ್ಥಿಕ ಮತ್ತು ತಂತ್ರಜ್ಞಾನದ ಬೆಳವಣಿಗೆಯಾಗಿರದೇ ಸರ್ವಾಂಗೀಣ ವಿಕಾಸವಾಗಿದೆ ಎಂದು ಹೇಳಿದರು.

ಪ್ರಜ್ಞಾ ಪ್ರವಾಹ ಕರ್ನಾಟಕ ದಕ್ಷಿಣದ ಸಂಚಾಲಕ ಡಾ.ಪ್ರದೀಪ ಭಾರದ್ವಾಜ ಮಾತನಾಡಿ, ಈ ಶೈಕ್ಷಣಿಕ ಸಮ್ಮೇಳನದಲ್ಲಿ ಪಾಲ್ಗೊಳ್ಳಲು ದೇಶದ ವಿವಿಧ ಭಾಗಗಳಿಂದ ನೋಂದಣಿ ಮಾಡಿಕೊಂಡಿದ್ದ 640 ಮಂದಿ ಪೈಕಿ 423 ಮಂದಿ ಪಾಲ್ಗೊಂಡಿದ್ದಾರೆ. ಅಲ್ಲದೆ, 118 ಮಂದಿ ತಜ್ಞರು ಪ್ರಬಂಧ ಮಂಡಿಸಲಿದ್ದಾರೆ ಎಂದು ತಿಳಿಸಿದರು. ಇದಕ್ಕೂ ಮುನ್ನ ರಾಜ್ಯಪಾಲರು, ಪಂಡಿತ್ ದೀನದಯಾಳ್ ಉಪಾಧ್ಯಾಯರ ಭಾವಚಿತ್ರ ಹಾಗೂ ಸರಸ್ವತಿ ಫೋಟೋಗೆ ಪುಷ್ಪ ನಮನ ಸಲ್ಲಿಸುವ ಮೂಲಕ ಸಮ್ಮೇಳನ ಉದ್ಘಾಟಿಸಿದರು. ಮುಕ್ತ ವಿವಿ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಅತಿಥಿಗಳನ್ನು ಸ್ವಾಗತಿಸಿದರಲ್ಲದೆ, ಪ್ರಾಸ್ತಾವಿಕ ಭಾಷಣ ಮಾಡಿದರು.

ಸಮ್ಮೇಳನದ 'ಭಾರತ ದರ್ಶನ' ಪ್ರದರ್ಶನಿ ಉದ್ಘಾಟಿಸಿದ ಖ್ಯಾತ ಶಿಲ್ಪಿ ಅರುಣ್ ಯೋಗಿರಾಜ್



ಮೈಸೂರು: ನಗರದ ಮುಕ್ತ ವಿವಿ ಘಟಿಕೋತ್ಸವ ಭವನದಲ್ಲಿ ನಡೆಯುತ್ತಿರುವ ಏಕಾತ್ಮ ಮಾನವ ದರ್ಶನ ಸಮ್ಮೇಳನದ ಪ್ರಯುಕ್ತ ಇದೇ ಆವರಣದಲ್ಲಿ ಆಯೋಜಿಸಿರುವ 'ಭಾರತ ದರ್ಶನ' ಪ್ರದರ್ಶನಿ ಉದ್ಘಾಟನೆಯನ್ನು ಖ್ಯಾತ ಶಿಲ್ಪಿ ಅರುಣ್ ಯೋಗಿರಾಜ್ ನೆರವೇರಿಸಿದರು. ಈ ವೇಳೆ ಮಾತನಾಡಿದ ಅವರು, ಜಗತ್ತು ಯುದ್ಧದ ಕಾರ್ಮೋಡ ಕವಿದು ತತ್ತರಿಸಿರುವ ಈ ಕಾಲದಲ್ಲಿ ನಾವು ಆನಂದವಾಗಿರಲು ಕಾರಣ ಇಲ್ಲಿನ ಪರಂಪರೆ. ಏಕಾತ್ಮ ಮಾನವ ದರ್ಶನ ಮೈಸೂರು ನಗರದಲ್ಲಿ ನಡೆಯುತ್ತಿರುವುದು ಯೋಗಾಯೋಗ. ಮಾನವ-ಪ್ರಕೃತಿ ನಡುವಿನ ಸಮನ್ವಯದ ಸಿದ್ಧಾಂತ ಇಂದು ಜಗತ್ತಿಗೆ ಅಗತ್ಯವಾಗಿದೆ. ಈ ಮೂಲಕ ಶ್ರೇಷ್ಠ ಚಿಂತನೆಯನ್ನು ನೀಡಲು ಶ್ರಮಿಸುತ್ತಿರುವ ಆಯೋಜಕರಿಗೆ ಅಭಿನಂದನೆಗಳು ಎಂದರು.

ಮುಕ್ತ ವಿವಿ ಖಾತೆಗಳ ಸ್ಥಗಿತಕ್ಕೆ ಬ್ಯಾಂಕ್‌ಗಳಿಗೆ ಸೂಚನೆ

ಮೈಸೂರು, ಮಾ.25(ಪಿಎಂ)– ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಬ್ಯಾಂಕ್ ಖಾತೆಗಳನ್ನು ಸ್ಥಗಿತಗೊಳಿಸುವಂತೆ ವಿವಿಧ ಬ್ಯಾಂಕ್ ವ್ಯವಸ್ಥಾಪಕರಿಗೆ ರಾಜ್ಯ ಸರ್ಕಾರ ಸೂಚನೆ ನೀಡಿದೆ.

ಉನ್ನತ ಶಿಕ್ಷಣ ಸಚಿವರು ಹಾಗೂ ಸರ್ಕಾರದ ಪರವಾಗಿ ಎಸ್‌ಬಿಐ ಮೈಸೂರಿನ ಪ್ರಧಾನ ವ್ಯವಸ್ಥಾಪಕರು, ಆಕ್ಸಿಸ್ ಬ್ಯಾಂಕ್, ಹೆಚ್‌ಡಿಎಫ್‌ಸಿ ಬ್ಯಾಂಕ್ ವ್ಯವಸ್ಥಾಪಕರಿಗೆ ಮಾ.24ರಂದು ಉನ್ನತ ಶಿಕ್ಷಣ ಇಲಾಖೆಯ ಕಾರ್ಯದರ್ಶಿಗಳು ಸೂಚನೆ ನೀಡಿದ್ದಾರೆ. ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಹಣಕಾಸಿನ ಅಕ್ರಮಗಳು ನಡೆದಿವೆ. ಈ ಸಂಬಂಧ ವಿಚಾರಣೆ ನಡೆಯುತ್ತಿದ್ದು, ಸಾರ್ವಜನಿಕ ಹಣವನ್ನು ರಕ್ಷಿಸಲು ಮತ್ತು ವಿಚಾರಣೆ ಸೂಕ್ತವಾಗಿ ನಡೆಯಲು ಮುಂದಿನ ಆದೇಶದವರೆಗೆ ಮುಕ್ತ ವಿಶ್ವವಿದ್ಯಾನಿಲಯದ ಎಲ್ಲಾ ಬ್ಯಾಂಕ್ ಖಾತೆಗಳನ್ನು ಸ್ಥಗಿತಗೊಳಿಸಲು (ಡೆಬಿಟ್ ಫ್ರೀಜ್) ಸೂಚನೆ ನೀಡಲಾಗಿದೆ. ಕ್ರೆಡಿಟ್‌ಗಳನ್ನು ಅನುಮತಿಸಲು ಅವಕಾಶ ಕಲ್ಪಿಸಿದ್ದು, ಈ ಸಂಬಂಧ ಕೈಗೊಂಡ ಕ್ರಮವನ್ನು ಕೂಡಲೇ ದೃಢೀಕರಿಸುವಂತೆಯೂ ಸೂಚನೆಯಲ್ಲಿ ಹೇಳಲಾಗಿದೆ.

ಮೈಸೂರಲ್ಲಿ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್



ಮೈಸೂರು, ಮಾ.25(ವಿವಿಹೆಚ್)– ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ಬುಧವಾರ ದಿಂದ 2 ದಿನಗಳ ಮೈಸೂರು ಪ್ರವಾಸ ಕೈಗೊಂಡಿದ್ದಾರೆ.

ಬುಧವಾರ 5 ಗಂಟೆಗೆ ನವದೆಹಲಿಯ ಐಜಿಐ ವಿಮಾನ ನಿಲ್ದಾಣದಿಂದ ಹೊರಟು ಸಂಜೆ 7.55ಕ್ಕೆ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದು ಅಲ್ಲಿಂದ ರಾತ್ರಿ 8.10 ಗಂಟೆಗೆ ರಸ್ತೆ ಮೂಲಕ ಹೊರಟು 11 ಗಂಟೆಗೆ ಮೈಸೂರು ಸಿಐಐಎಲ್ (ಭಾರತೀಯ ಭಾಷಾ ಸಂಸ್ಥಾನ)ನಲ್ಲಿ ವಾಸ್ತವ್ಯ ಹೂಡಿದ್ದಾರೆ. ಗುರುವಾರ(ಮಾ.26) ಬೆಳಿಗ್ಗೆ 10.30 ಗಂಟೆಗೆ ಸಿಐಐಎಲ್‌ನಲ್ಲಿ ನಡೆಯಲಿರುವ ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ ಭಾಷಾಶಾಸ್ತ್ರದ ಪರಿಶೀಲನಾ ಸಭೆಯಲ್ಲಿ ಭಾಗವಹಿಸಲಿದ್ದಾರೆ. ನಂತರ ಮಧ್ಯಾಹ್ನ 12.30ಕ್ಕೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ (ಕೆಎಸ್‌ಒಯು)ನಲ್ಲಿ ನಡೆಯಲಿರುವ 'ಏಕಾತ್ಮ ಮಾನವ ದರ್ಶನ – ಭಾರತದ ವಿಶ್ವದೃಷ್ಟಿಕೋನ' ಕುರಿತ ಅಂತರಾಷ್ಟ್ರೀಯ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಪಾಲ್ಗೊಳ್ಳಲಿದ್ದಾರೆ. ಮಧ್ಯಾಹ್ನ 4 ಗಂಟೆಗೆ ಕೆಎಸ್‌ಒಯು ನಿಂದ ರಸ್ತೆ ಮೂಲಕ ಹೊರಟು ಸಂಜೆ 7 ಗಂಟೆಗೆ ಬೆಂಗಳೂರು ವಿಮಾನ ನಿಲ್ದಾಣ ತಲುಪಿ, ಅಲ್ಲಿಂದ ರಾತ್ರಿ 10 ಗಂಟೆಗೆ ಹೊರಟು ಮಾ.27ರ ಬೆಳಗ್ಗೆ 1 ಗಂಟೆಗೆ ಮೂಲ ಸ್ಥಾನಕ್ಕೆ ಹಿಂದಿರುಗಲಿದ್ದಾರೆ.

ಅಮೂಲ್ಯ ಜೀವ ಹಾನಿ ತಪ್ಪಿಸಲು ಮೇಲ್ಸೇತುವೆ ಅನಿವಾರ್ಯ; ಮರ ಹನನ ಬಿಟ್ಟು ಪರ್ಯಾಯ ಪರಿಹಾರ ಕಲ್ಪಿಸಿ

ಹೊಸಹುಂಡಿ-ದೇವಲಾಪುರ ರಸ್ತೆಗೆ ರಿಂಗ್ ರಸ್ತೆಯಲ್ಲಿ ಮೇಲ್ಸೇತುವೆ ನಿರ್ಮಾಣ ಪ್ರಸ್ತಾಪ; ಅದಕ್ಕೆ 48 ಮರ ಹನನ ಸಂಬಂಧ ಸಭೆಯಲ್ಲಿ ಗೊಂದಲ, ಮಾತಿನ ಚಕಮಕಿ; ಸಭೆ ಸ್ಥಗಿತ





ದೇವಲಾಪುರ ಜಂಕ್ಷನ್‌ನಲ್ಲಿ ರಿಂಗ್ ರಸ್ತೆಯಲ್ಲಿ ಮೇಲ್ಸೇತುವೆ ಬೇಕೆಂದು ಸ್ಥಳೀಯರು ಆಗ್ರಹಿಸಿದರು. ಬಲಚಿತ್ರದಲ್ಲಿ ಮೇಲ್ಸೇತುವೆ ನಿರ್ಮಾಣ ವಿರೋಧಿಸಿ 'ಪರಿಸರಕ್ಕಾಗಿ ನಾವು' ಸಂಘಟನೆ ಸದಸ್ಯರು ಹಾಗೂ ಪರಿಸರವಾದಿಗಳು ಒತ್ತಾಯಿಸಿದರು.

ಮೈಸೂರು, ಮಾ.25(ಎಂಟಿವೈ)– ಮೈಸೂರು ರಿಂಗ್ ರಸ್ತೆಯಲ್ಲಿ, ಹೊಸಹುಂಡಿ-ದೇವಲಾಪುರ ರಸ್ತೆಗೆ ಮೇಲ್ಸೇತುವೆ (ಗ್ರೇಡ್ ಸಪರೇಟ್) ನಿರ್ಮಿಸಲು ಉದ್ದೇಶಿಸಿರುವ ಸ್ಥಳದಲ್ಲಿ ಗುರುತಿಸಲ್ಪಟ್ಟಿರುವ 48 ಬೇವಿನ ಮರ ಕಡಿಯುವ ಪ್ರಸ್ತಾಪ ಸಂಬಂಧ ಆಯೋಜಿಸಿದ್ದ ಸಾರ್ವಜನಿಕ ಅಹವಾಲು ಸಭೆಯಲ್ಲಿ ಪರ ಮತ್ತು ವಿರುದ್ಧ ಕಾವೇರಿದ ಚರ್ಚೆ, ಗೊಂದಲ ಸೃಷ್ಟಿಯಾದ ಹಿನ್ನೆಲೆಯಲ್ಲಿ ಸಭೆಯನ್ನು ಮೊಟಕುಗೊಳಿಸಲಾಯಿತು. ಅಲ್ಲದೆ ವಾರದಲ್ಲಿ ಪರ ಮತ್ತು ವಿರೋಧದ ಅಭಿಪ್ರಾಯ ವ್ಯಕ್ತಪಡಿಸುವವರು ಲಿಖಿತ ವಿಳಾಸ ಹಾಗೂ ಆಧಾರ್ ಕಾರ್ಡ್ ಪ್ರತಿಯೊಂದಿಗೆ ಸಲ್ಲಿಸುವಂತೆ ಸೂಚಿಸಲಾಯಿತು.

ಮೈಸೂರು ತಾಲೂಕಿನ ಹೊಸಹುಂಡಿ ಬಳಿ ರಿಂಗ್‌ರಸ್ತೆಯ ದೇವಲಾಪುರ ರಸ್ತೆ ಜಂಕ್ಷನ್‌ನಲ್ಲಿ ಅರಣ್ಯ ಇಲಾಖೆ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಹಾಗೂ ವಿವಿಧ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ 'ಸಾರ್ವಜನಿಕ ಅಹವಾಲು' ಸಭೆಯಲ್ಲಿ ವಿವಿಧ ಗ್ರಾಮಸ್ಥರು, ಸ್ಥಳೀಯರು ಹಾಗೂ ಪರಿಸರವಾದಿಗಳು ಪಾಲ್ಗೊಂಡು ಉದ್ದೇಶಿತ ಫ್ಲೈಓವರ್ ನಿರ್ಮಾಣದ ಪರ ಹಾಗೂ ವಿರೋಧದ ನಿಲುವು ಮಂಡಿಸಿದರು.

ಆದರೆ, ಆರಂಭದಿಂದಲೇ ಫ್ಲೈಓವರ್ ನಿರ್ಮಾಣ ವಿರೋಧಿಸಿ, ಮರಗಳನ್ನು ಕಡಿಯದಂತೆ ವ್ಯಕ್ತವಾಗುತ್ತಿದ್ದ ಅಭಿಪ್ರಾಯಕ್ಕೆ ಕೆಲವರು ಆಕ್ಷೇಪ ವ್ಯಕ್ತಪಡಿಸುತ್ತಾ ರಸ್ತೆ ಅಪಘಾತದಿಂದ ಜನ ಸಾಯುತ್ತಿದ್ದಾರೆ. ಮುಂದೆ ಆಗುವ ಸಾವು-ನೋವು ತಡೆಗಾಗಿ ಫ್ಲೈಓವರ್ ನಿರ್ಮಿಸಲೇಬೇಕು ಎಂದು ಒತ್ತಾಯಿಸುತ್ತಿದ್ದ ಹಿನ್ನೆಲೆಯಲ್ಲಿ ಸಭೆಯಲ್ಲಿ ಪದೇ ಪದೆ ಗೊಂದಲ ಹಾಗೂ ಮಾತಿನ ಚಕಮಕಿ ನಡೆಯುತ್ತಲೇ ಇತ್ತು. ಇದರಿಂದ ಸಭೆ ಅರ್ಧಕ್ಕೆ ನಿಲ್ಲಿಸಬೇಕಾಯಿತು.

ಈ ಸ್ಥಳ ಬ್ಲಾಕ್ ಸ್ಪಾಟ್: ಸಭೆ ಆರಂಭದಲ್ಲಿ ಕೇಂದ್ರದ ಮಿನಿಸ್ಟ್ರೀ ಆಫ್ ರೋಡ್ ಸೇಫ್ಟಿ ಇಲಾಖೆಯ ಮುಖ್ಯ ಇಂಜಿನಿಯರ್ ಶ್ರೀಧರ್ ಮಾತನಾಡಿ, ರಾಷ್ಟ್ರೀಯ ಹೆದ್ದಾರಿ 275ರ ರಿಂಗ್ ರಸ್ತೆಯ ದೇವಲಾಪುರ ರಸ್ತೆ ಜಂಕ್ಷನ್ ಅನ್ನು ಈಗಾಗಲೇ ಕೇಂದ್ರ ಸರ್ಕಾರ ಬ್ಲಾಕ್ ಸ್ಪಾಟ್ ಎಂದು ಗುರುತಿಸಿದೆ. ಯಾವುದೇ ಒಂದು ಸ್ಥಳದಲ್ಲಿ ಕಳೆದ 3 ವರ್ಷದಲ್ಲಿ 10ರಿಂದ 12 ಅಪಘಾತವಾಗಿ ಅದರಲ್ಲಿ ಐವರು ಮೃತಪಟ್ಟು, 10 ಮಂದಿ ಗಾಯಗೊಂಡರೆ ಆ ಸ್ಥಳವನ್ನು ಬ್ಲಾಕ್‌ಸ್ಪಾಟ್ ಎಂದು ಗುರುತಿಸಿ, ಆ ಸ್ಥಳದಲ್ಲಿ ಅಪಘಾತ ತಡೆಗೆ, ಸಾವು-ನೋವಿನ ಪ್ರಕರಣ ಮರುಕಳಿಸದಂತೆ ಕಟ್ಟೆಚ್ಚರ ವಹಿಸುವಂತೆ ಕಾರ್ಯಕ್ರಮ ರೂಪಿಸುತ್ತದೆ. ದೇಶದಲ್ಲಿ ಅಪಘಾತದಿಂದ ದಿನಕ್ಕೆ 380 ಮಂದಿಗೂ ಹೆಚ್ಚು ಜನ ಸಾವನ್ನಪ್ಪುತ್ತಿದ್ದಾರೆ. ದೇವಲಾಪುರ ಜಂಕ್ಷನ್ ಸೇರಿದಂತೆ ದೇಶದಲ್ಲಿ 5 ಸಾವಿರಕ್ಕೂ ಹೆಚ್ಚು ಬ್ಲಾಕ್‌ಸ್ಪಾಟ್ ಗುರುತಿಸಲಾಗಿದೆ ಎಂದರು.



ರಿಂಗ್ ರಸ್ತೆಯ ದೇವಲಾಪುರ ರಸ್ತೆ ಜಂಕ್ಷನ್‌ನಲ್ಲಿ ಗ್ರೇಡ್ ಸಪರೇಟರ್ ನಿರ್ಮಾಣಕ್ಕೆ ತೆರವುಗೊಳಿಸಲು ಗುರುತಿಸಿರುವ ಬೇವಿನ ಮರಗಳು.

ವೇಗ, ಅಜಾಗರೂಕ ಚಾಲನೆ: ಪರಿಸರಕ್ಕಾಗಿ ನಾವು ಸಂಘಟನೆಯ ಕೆ.ಪರಶುರಾಮೇಗೌಡರು ಮಾತನಾಡಿ, ಅಪಘಾತದಲ್ಲಿ ಮೃತಪಟ್ಟವರ ಕುಟುಂಬಕ್ಕೆ ನೋವು ಭರಿಸುವ ಶಕ್ತಿ ನೀಡಲೆಂದು ಕೋರುತ್ತೇವೆ. ರಸ್ತೆ ಅಪಘಾತದಲ್ಲಿ ಯಾರೂ ಸಾವನ್ನಪ್ಪಬಾರದು ಎಂಬುದು ನಮ್ಮ ಆಶಯವಾಗಿದೆ. ರಸ್ತೆ ಅಪಘಾತಗಳನ್ನು ಗಮನಿಸಿದರೆ ಬಹುತೇಕ ಅಪಘಾತಗಳು ಅತಿಯಾದ ವೇಗ, ಚಾಲಕರ ನಿರ್ಲಕ್ಷ್ಯತನ ಹಾಗೂ ಕುಡಿದು ವಾಹನ ಚಾಲನೆ ಮಾಡಿರುವ ಕಾರಣದಿಂದಲೇ ಸಂಭವಿಸಿವೆ. ಈ ಹಿನ್ನೆಲೆಯಲ್ಲಿ ದೇವಲಾಪುರ ರಸ್ತೆ ಜಂಕ್ಷನ್‌ನಲ್ಲಿ ಮೇಲ್ಸೇತುವೆ ನಿರ್ಮಾಣಕ್ಕಾಗಿ ರಿಂಗ್ ರಸ್ತೆಯ ರಸ್ತೆ ವಿಭಜಕದ ನಡುವೆ ಬೆಳೆದಿರುವ 48 ಬೇವಿನ ಮರ ತೆರವು ಮಾಡುವುದು ಸರಿಯಲ್ಲ. ಪರ್ಯಾಯ ಪರಿಹಾರ ಮಾರ್ಗ ಹುಡುಕಬೇಕು ಎಂದರು.

ರಿಂಗ್ ರಸ್ತೆ ಅದ್ವಾನಕ್ಕೆ ಅಧಿಕಾರಿಗಳೇ ಕಾರಣ: ಗುತ್ತಿಗೆದಾರ ಹೊಸಹುಂಡಿ ನಾಗರಾಜ್ ಮಾತನಾಡಿ, ರಿಂಗ್ ರಸ್ತೆಯ ಇಂದಿನ ದುಸ್ಥಿತಿಗೆ ಅಧಿಕಾರಿಗಳೇ ಕಾರಣ. ರಿಂಗ್ ರಸ್ತೆ ನಿರ್ಮಾಣಕ್ಕೆ ಗುರುತಿಸಿದ ಸ್ಥಳವನ್ನು ರಾಜಕೀಯ ನಾಯಕರ ಒತ್ತಡಕ್ಕೆ ಮಣಿದು ಐದಾರು ಬಾರಿ ಬದಲಿಸಲಾಗಿದೆ. ಹೊಸಹುಂಡಿ, ಎಪಿಎಂಸಿ ಬಳಿ ಕಡಿದಾದ ತಿರುವಿನಲ್ಲಿ ರಿಂಗ್ ರಸ್ತೆ ನಿರ್ಮಿಸಲಾಗಿದೆ. ಉತ್ತನಹಳ್ಳಿ ದೇವಾಲಯದ ಜಂಕ್ಷನ್ ಬಳಿಯಿಂದ ಹೊಸಹುಂಡಿವರೆಗೂ ಹಳ್ಳ ಮಾಡುವಂತೆ ಒತ್ತಾಯಿಸಲಾಗಿತ್ತು. ಆದರೆ, ದೊಡ್ಡ ದೊಡ್ಡ ಕಲ್ಲು ಸಿಕ್ಕಿದ ಕಾರಣಕ್ಕೆ ಅದರ ಮೇಲೆ ರಿಂಗ್ ರಸ್ತೆ ನಿರ್ಮಿಸಲಾಗಿದೆ. ಇದರಿಂದ ದೇವಲಾಪುರದಿಂದ ಬರುವ ವಾಹನ ಸವಾರರಿಗೆ ರಿಂಗ್‌ರಸ್ತೆಯಲ್ಲಿ ಬರುವ ವಾಹನಗಳು ಕಾಣಿಸದೇ ಅಪಘಾತಗಳಾಗುತ್ತಿವೆ. ಈ ಹಿನ್ನೆಲೆಯಲ್ಲಿ ಈ ರಸ್ತೆಯಲ್ಲಿ ಮೇಲ್ಸೇತುವೆ ಬೇಡ. ಫ್ಲೈಓವರ್ ನಿರ್ಮಾಣದ ಅವಶ್ಯಕತೆ ಇದ್ದರೆ ಬೆಂಗಳೂರು ಮಾದರಿಯಲ್ಲಿ ಪಿಲ್ಲರ್ ಬಳಸಿ ಫ್ಲೈಓವರ್ ನಿರ್ಮಿಸಿ. ಇಲ್ಲದಿದ್ದರೆ ಯಥಾಸ್ಥಿತಿ ಕಾಯ್ದುಕೊಳ್ಳಬೇಕು ಎಂದರು.

ಎನ್.ಹೆಚ್ ಹೆಸರು ತೆಗೆದುಹಾಕಿ: ಪರಿಸರಕ್ಕಾಗಿ ನಾವು ಸಂಘಟನೆಯ ರವಿ ಬಳೆ ಮಾತನಾಡಿ, ಮರ ಕಡಿಯುವುದು ಬೇಡ. ರಿಂಗ್ ರಸ್ತೆಗೆ ಎನ್‌ಹೆಚ್ ಹೆಸರು ತೆಗೆದು ಹಾಕಿದರೆ, ಜಂಕ್ಷನ್‌ಗಳಲ್ಲಿ ಹಂಪ್ಸ್ ಹಾಗೂ ಸಿಗ್ನಲ್ ನಿರ್ಮಿಸಲು ಸಾಧ್ಯ. ಈಗ ಎನ್‌ಹೆಚ್ ಅಂತ ಕರೆಸಿಕೊಳ್ಳುತ್ತಿರುವುದು ಹಂಪ್ಸ್ ಹಾಕಲು ಆಗುವುದಿಲ್ಲ ಎನ್ನುತ್ತೀರಿ. ರಾಷ್ಟ್ರೀಯ ಹೆದ್ದಾರಿ ಪದ ತೆಗೆದು ಹಾಕಿದರೆ ಸಮಸ್ಯೆ ಇತ್ಯರ್ಥ ಮಾಡಿಕೊಳ್ಳಬಹುದು ಎಂದು ತಿಳಿಸಿದರು.

ಕ್ಯಾನ್ಸರ್ ರೋಗಿಗಳ ಸಂಖ್ಯೆ ಹೆಚ್ಚಾಗಿದೆ: ಭಾರತ್ ಕ್ಯಾನ್ಸರ್ ಆಸ್ಪತ್ರೆಯ ಆಡಳಿತಾಧಿಕಾರಿ ಎಂ.ಜಯರಾಮ್ ಮಾತನಾಡಿ, ಮೈಸೂರಿನ ರಿಂಗ್ ರಸ್ತೆ ನಿರ್ಮಾಣದ ಬಳಿಕ ಕ್ಯಾನ್ಸರ್ ರೋಗಿಗಳ ಸಂಖ್ಯೆ ಶೇ.11ರಷ್ಟು ಹೆಚ್ಚಾಗಿದೆ. ಮರಗಳನ್ನು ಹನನ ಮಾಡುತ್ತಾ ಹೋದರೆ ಪರಿಸ್ಥಿತಿ ಬಿಗಡಾಯಿಸುತ್ತದೆ ಈ ನಿಟ್ಟಿನಲ್ಲಿ ಎಲ್ಲರೂ ಯೋಚಿಸಬೇಕು ಎಂದು ಸಲಹೆ ನೀಡಿದರು.

ಸ್ಥಳೀಯರಿಗೆ ಬೇಕಾಗಿದೆ: ಉತ್ತನಹಳ್ಳಿ ಶಿವಣ್ಣ ಮಾತನಾಡಿ, ರಿಂಗ್ ರಸ್ತೆಗೆ ಮೇಲ್ಸೇತುವೆ ನಿರ್ಮಾಣ ಸ್ಥಳೀಯರಿಗೆ ಅನಿವಾರ್ಯವಾಗಿದೆ. ಪ್ರತಿದಿನ ಸಾವಿರಾರು ವಾಹನ ದೇವಲಾಪುರ ರಸ್ತೆಯಿಂದ ಬರುತ್ತವೆ. ಸವಾರರಿಗೆ ಭದ್ರತೆಯೇ ಇಲ್ಲದಂತಾಗಿದೆ. ಆ ಕಾರಣದಿಂದ ಮೇಲ್ಸೇತುವೆ ಆದರೆ, ಗ್ರಾಮಸ್ಥರು ಸರಾಗವಾಗಿ ಸಂಚರಿಸಬಹುದಾಗಿದೆ. ಇಂದು ಮೇಲ್ಸೇತುವೆಗೆ ವಿರೋಧಿಸುತ್ತಿರುವವರ ಮಾತು ನಂಬಬೇಡಿ. ಶೇ.99ರಷ್ಟು ಜನ ಮೇಲ್ಸೇತುವೆ ಪರ ಇದ್ದಾರೆ ಎಂದರು.

ಮೇಲ್ಸೇತುವೆ ಬೇಕೇ ಬೇಕು: ಹಾಪ್‌ಕಾಮ್ಸ್ ನಿರ್ದೇಶಕ, ಕುಂಬರಹಳ್ಳಿ ಮಠದ ಮಹದೇವು, ಈ ಭಾಗದ ಜನ ರಿಂಗ್ ರಸ್ತೆ ದಾಟಲು ಪರ ದಾಡುವ ಸ್ಥಿತಿ ನಿರ್ಮಾಣ ವಾಗಿದೆ. ಅಪಘಾತದಿಂದ ಅಮಾಯಕರ ಸಾವಾಗುತ್ತಿದೆ. ಆ ಕಾರಣದಿಂದ ಫ್ಲೈಓವರ್ ನಿರ್ಮಾಣ ಮಾಡಲೇಬೇಕು ಎಂದು ಆಗ್ರಹಿಸಿದರು.

ವಿಳಾಸ ಪರಿಶೀಲಿಸಿ: ಗುಡಮಾದನಹಳ್ಳಿ ಕೆ.ಬಿ.ಕುಮಾರ್ ಮಾತನಾಡಿ, ದೇವಲಾಪುರ ಜಂಕ್ಷನ್‌ಗೆ ಅಡ್ಡಲಾಗಿ ರಿಂಗ್ ರಸ್ತೆಗೆ ಮೇಲ್ಸೇತುವೆ ನಿರ್ಮಾಣ ಮಾಡುತ್ತಿರುವುದು ಈ ಭಾಗದ ಹಲವು ಗ್ರಾಮಸ್ಥರಿಗೆ ವರದಾನವಾಗಿದೆ. ಸಾಕಷ್ಟು ಅಪಘಾತಗಳಾಗಿದ್ದು, ಹಲವರು ಪ್ರಾಣ ಕಳೆದುಕೊಂಡಿದ್ದಾರೆ. ರಿಂಗ್ ರಸ್ತೆಯಲ್ಲಿ ವೇಗವಾಗಿ ಬರುವ ವಾಹನಗಳಿಂದ ಈ ಭಾಗದ ಜನರು ರಸ್ತೆ ದಾಟಲು ಸಾಧ್ಯವಾಗದಂತಹ ಸ್ಥಿತಿ ನಿರ್ಮಾಣವಾಗಿದೆ. ಈ ಹಿನ್ನೆಲೆಯಲ್ಲಿ ಎಲ್ಲರಿಗೂ ಫ್ಲೈಓವರ್ ನಿರ್ಮಾಣ ಅಗತ್ಯವಾಗಿದೆ.

ಮಾತಿನ ಚಕಮಕಿ, ಸಭೆ ಮೊಟಕು: ಮೇಲ್ಸೇತುವೆ ನಿರ್ಮಾಣ ಪರ ಮತ್ತು ವಿರೋಧದ ಅಭಿಪ್ರಾಯ ವ್ಯಕ್ತವಾಗುತ್ತಿದ್ದ ವೇಳೆ ಎರಡೂ ಬದಿಯಲ್ಲೂ ಫ್ಲೈಓವರ್ ಬೇಕು ಎಂದು ಒಂದು ಗುಂಪು, ಫ್ಲೈಓವರ್ ಬೇಡ ಎಂದು ಮತ್ತೊಂದು ಗುಂಪು ಘೋಷಣೆ ಕೂಗಲಾರಂಭಿಸಿತು. ಇದರಿಂದ ಗೊಂದಲ ಉಂಟಾಯಿತು. ಅಂತಿಮವಾಗಿ ಅಧಿಕಾರಿಗಳು ಒಂದು ವಾರದೊಳಗೆ ಮೈಸೂರಿನ ಅರಣ್ಯ ಭವನದಲ್ಲಿ ಫ್ಲೈಓವರ್ ನಿರ್ಮಾಣ ಸಂಬಂಧ ವಿಳಾಸ, ಆಧಾರ್ ಕಾರ್ಡ್ ಪ್ರತಿಯೊಂದಿಗೆ ಲಿಖಿತವಾಗಿ ಅಭಿಪ್ರಾಯ ಸಲ್ಲಿಸುವಂತೆ ಹೇಳಿ ಸಭೆ ಮೊಟಕುಗೊಳಿಸಿದರು.

ಸಭೆಯಲ್ಲಿ ಎಸಿಎಫ್ ರವೀಂದ್ರ ಆರ್‌ಎಫ್‌ಓ ಸಂತೋಷ್ ಹೂಗಾರ್, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಎಇಇ ರೂಪ, ಮಹೇಶ್, ಗ್ರಾಮಾಂತರ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಸುರೇಂದ್ರ, ಮುಖಂಡರಾದ ರಾಯನಹುಂಡಿ ರವಿ, ತಾ.ಪಂ. ಮಾಜಿ ಅಧ್ಯಕ್ಷೆ ಮಂಜುಳಾ ಮಂಜುನಾಥ್, ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ದೇವಲಾಪುರ ಎಲ್.ಮಹೇಶ್, ಪರಿಸರಕ್ಕಾಗಿ ನಾವು ಸಂಘಟನೆಯ ಎಂ.ಗಂಟಯ್ಯ(ಕೃಷ್ಣಪ್ಪ), ಬಂಗಾರನಾಯ್ಕ, ಸುಶೀಲ, ಸುಗುಣ, ಮಧುಶ್ರೀ, ವಿಜಯ್ ಕುಮಾರ್, ಅಕ್ಬರ್, ಬಾನುಪ್ರಶಾಂತ್, ಭಾನು ಮೋಹನ್, ದೇವಲಾಪುರ ಶಿವಸ್ವಾಮಿ, ಹೊಸಹುಂಡಿ ಗ್ರಾಮದ ಕೃಷ್ಣ, ರವಿ, ಸಿದ್ದರಾಜು, ಭರತ್, ಬಸವರಾಜು, ಸೋಮಣ್ಣ, ನಾಗಮ್ಮ, ಕೋಕಿಲ, ಶಿವರಾಮು, ಯಶವಂತ್, ಶ್ರೀನಿವಾಸ್, ಮಂಜುನಾಥ್, ಮಂಜುಳ, ರಮೇಶ್, ಕೋಳಿ ಕುಮಾರ್ ಹಲವು ಮಂದಿ ಪಾಲ್ಗೊಂಡಿದ್ದರು.

ನಕ್ಕರೆ ಅದೇ ಸ್ವರ್ಗ

ಭಿಕ್ಷುಕ : ಸ್ವಾಮಿ ನನಗೆ ಕಣ್ಣು ಕಾಣಲ್ಲ. ಏನಾದರೂ ದಾನ ಮಾಡಿ

ಗುಂಡ : ನೀನು ಕುರುಡ ಅಂತ ಹೇಗೆ ನಂಬೋದು?

ಭಿಕ್ಷುಕ : ಅಗೋ, ಅಲ್ಲಿ ದೂರದಲ್ಲಿ ಒಂದು ತೆಂಗಿನಮರ ಕಾಣ್ತಿದೆಯಲ್ಲ. ಅದರ ಹತ್ತಿರ ಕಾಗೆಗಳು ಹಾರಾಡ್ತಿದವಲ್ಲ, ಅಲ್ಲೆ ಗಿಡದ ತುದಿಯಲ್ಲಿ ಒಂದು ಪಕ್ಷಿ ಕೂತಿದೆಯಲ್ಲ. ನಿಮಗೆ ಕಾಣಿಸ್ತಾ ಇದೆಯಾ?

ಗುಂಡ : ಹೌದು.. ಕಾಣಿಸ್ತಿದೆ

ಭಿಕ್ಷುಕ : ಆದರೆ, ಅವು ನನಗೆ ಕಾಣ್ತಿಲ್ಲ ಸ್ವಾಮಿ

ಮೈಸೂರು ಮಿತ್ರ

ಗುರುವಾರ, ಮಾರ್ಚ್ 26, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

ನಾಲಿಗೆಗೆ ಕಲ್ಲಿನಷ್ಟು ಶಕ್ತಿಯಿಲ್ಲ, ಆದರೆ, ಅದು ತನ್ನ ಮಾತುಗಳಿಂದ ಒಳ್ಳೊಳ್ಳೆಯ ಮನೆಗಳನ್ನು ಒಡೆಯುತ್ತದೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಆಕಳು ಕಪ್ಪಾದರೆ ಹಾಲು ಕಪ್ಪೆ?

ನಿಮ್ಮ ಪತ್ರಗಳು

ಮನುಷ್ಯನಿಗೆ ರೋಗ-ರುಜಿನಗಳು ಹೇಗೋ... ಅದೇ ರೀತಿ ಜಗತ್ತಿಗೂ ಸಂಕಷ್ಟಗಳು ಸಹಜ

ಮಾನ್ಯರೆ,

ಮನುಷ್ಯನಿಗೆ ರೋಗ-ರುಜಿನಗಳು ಬರುವ ಹಾಗೆ ಜಗತ್ತು, ದೇಶ, ರಾಜ್ಯಕ್ಕೆ ಆಪತ್ತು, ಕಷ್ಟ-ಸಂಕಷ್ಟಗಳು ಬರುವುದು ಸಹಜ. ಕುಟುಂಬದ ವ್ಯಕ್ತಿಯಲ್ಲಿ ಯಾರಿಗಾದರೂ ಆರೋಗ್ಯ ಸರಿ ಇಲ್ಲ ಎಂದಾಗ ಕುಟುಂಬಸ್ಥರಲ್ಲಿ ಆತಂಕ ಶುರುವಾಗುತ್ತದೆ. ಅದೇ ರೀತಿ ಜಗತ್ತು, ದೇಶ, ರಾಜ್ಯಕ್ಕೆ ಆಪತ್ತು, ಕಷ್ಟ-ಸಂಕಷ್ಟಗಳು ಬಂದಾಗ ಪ್ರಜೆಗಳಲ್ಲಿ ಆತಂಕ ಶುರುವಾಗುತ್ತದೆ. ಸಾಮಾನ್ಯವಾಗಿ ಜಗತ್ತಿನಲ್ಲಿ ಪಾಪ ಕರ್ಮಗಳು 90% ಮತ್ತು ಪ್ರೀತಿ ಪ್ರೇಮಗಳು 90% ನಡೆಯುವುದು ಕಂಡು ಬರುತ್ತದೆ. ಜನರ ಬಾಯಲ್ಲಿ ಕಲಿಯುಗ ಎಂದರೆ ಆಡುಭಾಷೆಯಲ್ಲಿ ಹೊಡಿ-ಬಡಿ, ಮೋಸ, ವಂಚನೆ, ಕೊಲೆ, ದರೋಡೆ, ಅಧರ್ಮ, ಸುಳ್ಳು ಹೆಚ್ಚಾಗಿ ನಡೆಯುತ್ತಿದೆ ಎಂದು ಜನ ಹೀಗೂ ಆಡಿಕೊಳ್ಳುತ್ತಾರೆ. ಇದೇ ರೀತಿ ಮುಂದುವರಿದರೆ ಜಗತ್ತಿನ ಆಯಸ್ಸು ಕೇವಲ 5 ಸಾವಿರ ವರ್ಷಕ್ಕೆ ಸೀಮಿತವೆ ಎನ್ನುವಂತಾಗಿದೆ.

ವ್ಯಕ್ತಿಯಲ್ಲಿ ಶ್ರೀಮಂತ, ಮಧ್ಯಮ ವರ್ಗದವ, ಬಡವ ಎಂದು ಗುರುತಿಸಲಾಗುತ್ತದೆ. ಶ್ರೀಮಂತರು ಬದುಕಬೇಕಾದರೂ ಬಡವರು ಬೇಕು. ನನ್ನ ಬಳಿ ಹಣವಿದೆ. ಜಗತ್ತಿನಲ್ಲಿ ನನ್ನದೆ ಆಟ ಎಂದರೆ ಅದು ನಡೆಯುವುದಿಲ್ಲ. ಜನರೇ ಇಲ್ಲದೆ ಜಗತ್ತು ಸೃಷ್ಟಿಸಲು ಹೋದರೆ ಪ್ರತಿಂಯೊಬ್ಬರಿಗೂ ಅಪಾಯ ಕಟ್ಟಿಟ್ಟ ಬುತ್ತಿ.

ಜಗತ್ತಿಗೆ ಪ್ರತಿಯೊಬ್ಬ ವ್ಯಕ್ತಿಯೂ ಬಹಳ ಮುಖ್ಯವಾಗಿದೆ. ಒಟ್ಟಿನಲ್ಲಿ ಒಂದಲ್ಲಾ ಒಂದು ದಿನ ಆರಂಭದಂತೆ ಅಂತ್ಯವೂ ಆಗಲಿದೆ ಅದಕ್ಕಾಗಿ ನಿರ್ದಿಷ್ಟ ದಿನಾಂಕ ವಿಲ್ಲ, ಸಮಯವಿಲ್ಲ. ಪ್ರಕೃತಿ ತನ್ನನ್ನು ತಾನು ರಕ್ಷಿಸಿಕೊಳ್ಳಲು ಕರೋನದಂತಹ ಮಾರಕ ರೋಗ ಜಗತ್ತಿಗೆ ಹರಡಿದಾಗ ಪ್ರಕೃತಿ ತನ್ನ ಸೌಂದರ್ಯವನ್ನು ಸ್ವಚ್ಛಗೊಳಿಸಿಕೊಂಡಿತು. ಹಾಗಾಗಿ ವರ್ತಮಾನದ ವಿಚಾರಗಳನ್ನು ಭವಿಷ್ಯದ ಕಾಲಕ್ಕೆ ತಿರುಗಿಸುವುದು ಅಪಾಯಕಾರಿ. ಜಗತ್ತಿನ ಆಯಸ್ಸು 5 ಸಾವಿರ ವರ್ಷವೇ ಎಂಬುದರ ಬಗ್ಗೆ ಸ್ಪಷ್ಟತೆ ಇಲ್ಲ. ಆದ್ದರಿಂದ ಮನುಷ್ಯನಿಗೆ ರೋಗ-ರುಜಿನಗಳು ಹೇಗೋ ಅದೇ ರೀತಿ ಜಗತ್ತಿಗೂ ಸಂಕಷ್ಟಗಳು ಸಹಜ. ಆದರೂ ಇದ್ದಷ್ಟು ದಿನ ಜನರಿಗೆ ಒಳ್ಳೆಯದು ಮಾಡಬೇಕು. ಅದೇ ಜಗತ್ತಿನ ನಿಯಮವಾಗಿದೆ. **-ವೀರೇಶ ಧೂಪದಮಠ**

ಜನಸಾಮಾನ್ಯರ ಕಡೆ ಗಮನಹರಿಸಿ


ಮಾನ್ಯರೇ,

ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನು ಇವಿಎಂ ಬದಲಿಗೆ ಮತಪತ್ರ ಬಳಸಿ ನಡೆಸಲು ಅವಕಾಶ ಕಲ್ಪಿಸುವ ಮಸೂದೆಗೆ ಸರ್ಕಾರ ಅಂಗೀಕಾರ ಪಡೆದಿರುವುದು ಸರಿಯಾಗಿದೆ. ಆದರೆ ಸ್ಥಳೀಯ ಸಂಸ್ಥೆಗಳ ಗೆಲುವಿಗೆ ಇದಿಷ್ಟೇ ಬದಲಾವಣೆ ಮಾಡಿದರೆ ಸಾಲದು. ಗ್ರಾಮ ಪಂಚಾಯಿತಿ ಮತ್ತು ಬಿಬಿಎಂಪಿ ಕಚೇರಿಗಳಲ್ಲಿ ತಂತ್ರಾಂಶದ ತೊಂದರೆಯಿಂದಾಗಿ ನಿಂತು ಹೋಗಿರುವ ಇ-ಖಾತೆಗಳನ್ನು ಮಾಡಿಕೊಡುವ ಕಡೆಗೂ ಗಮನಹರಿಸಬೇಕು. ಇ-ಖಾತೆಗಳ ವಿತರಣೆ ನಿಂತಿರುವುದರಿಂದ ನಿವೇಶನ ಕೊಳ್ಳುವ ಮತ್ತು ಮಾರಾಟ ಮಾಡುವ ವ್ಯವಹಾರಗಳೂ ನಿಂತಿವೆ. ಸೆಟ್ ಬ್ಯಾಕ್ ನೆಪ ಹೇಳಿಕೊಂಡು ಕಟ್ಟಿರುವ ಮನೆಗಳಿಗೆ ವಿದ್ಯುತ್ ಸಂಪರ್ಕ ಸಿಗುತ್ತಿಲ್ಲ. 30x40 ಅಳತೆಗಿಂತ ಹೆಚ್ಚಿನ ವಿಸ್ತೀರ್ಣದ ನಿವೇಶನಗಳಲ್ಲಿ ಮನೆ ಕಟ್ಟುವವರಿಗೆ ತಾತ್ಕಾಲಿಕ ವಿದ್ಯುತ್ ಸಂಪರ್ಕವೂ ಸಿಗುತ್ತಿಲ್ಲ. ಇದರಿಂದಾಗಿ ಗ್ರಾಮಾಂತರ ಮತ್ತು ನಗರ ಪ್ರದೇಶಗಳಲ್ಲಿ ಗೃಹ ನಿರ್ಮಾಣದ ಕೆಲಸಗಳು ಸಂಪೂರ್ಣವಾಗಿ ನಿಂತಂತಾಗಿದೆ. ಈಗ ನರೇಗಾ ಯೋಜನೆಯೂ ಜಾರಿಯಲ್ಲಿಲ್ಲದೆ ಕೂಲಿ ಸಿಗುತ್ತಿಲ್ಲ. ಬೇಸಿಗೆಯಾದ್ದರಿಂದ ಕೃಷಿ ಕೆಲಸಗಳೂ ಸಿಗದೆ, ಕಟ್ಟಡದ ಕೆಲಸಗಳೂ ಸಿಗದೆ ಜನರು ಪರದಾಡುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಗ್ಯಾರಂಟಿ ಯೋಜನೆಗಳಷ್ಟೇ ಗೆಲ್ಲಿಸುತ್ತವೆಂಬ ಭ್ರಮೆಯನ್ನು ಬಿಟ್ಟು, ಸ್ಥಳೀಯ ಕಚೇರಿಗಳಲ್ಲಿ ಜನಸಾಮಾನ್ಯರ ಅಗತ್ಯ ಕೆಲಸಗಳು ಆಗುವಂತೆ ಸರ್ಕಾರ ಕ್ರಮ ವಹಿಸಲಿ.

-ಉದಂತ ಶಿವಕುಮಾರ, ಬೆಂಗಳೂರು.

ಮರೆಯಲಾಗದ ಟೈಗರ್ ಪ್ರಭಾಕರ್

ಮಾನ್ಯರೆ,



ಹಿರಿಯ ನಟ, ನಿರ್ದೇಶಕ ಟೈಗರ್ ಪ್ರಭಾಕರ್ ನಮ್ಮನ್ನಗಲಿ (ಮಾರ್ಚ್ 25) 25 ವರ್ಷಗಳು ಕಳೆದಿವೆ. ದಿವಂಗತ ಎಂ.ಪಿ.ಶಂಕರ್ ನಿರ್ಮಾಣದ 'ಕಾಡಿನ ರಹಸ್ಯ' ಚಿತ್ರದ ಮೂಲಕ ಚಿತ್ರರಂಗ ಪ್ರವೇಶಿಸಿದ ಟೈಗರ್ ಪ್ರಭಾಕರ್. ಆದಿ ಮಾನವ ಚಿತ್ರದ ಮೂಲಕ ಪೂರ್ಣ ಪ್ರಮಾಣದ ನಾಯಕ ನಟರಾದರು.

ಗಣೇಶನ ಮಹಿಮೆ, ಹುಲಿಯಾದ ಕಾಳ, ಜಿದ್ದು, ಹೊಸ ಇತಿಹಾಸ, ಕಂಪನ, ಮುತ್ತೈದೆ ಭಾಗ್ಯ, ಮುತ್ತಿನಂಥ ಮನುಷ್ಯ, ಬಂಗಾರದ ಬದುಕು, ಏನ್ ಸ್ವಾಮಿ ಅಳಿಯಂದ್ರೆ, ಕಲಿಯುಗ ಭೀಮ, ಮಹೇಂದ್ರ ವರ್ಮ, ರಣಭೇರಿ, ಸಿಬಿಐ ವಿಜಯ್, ತ್ರಿನೇತ್ರ, ಕರುಳಿನ ಕೂಗು, ಟೈಗರ್, ಭವ್ಯ ಭಾರತ, ಜೈಲರ್ ಜಗನ್ನಾಥ್, ಯಮಕಿಂಕರ, ಬಾಂಬೆ ದಾದ, ಶಕ್ತಿ, ಮಿಸ್ಟರ್ ವಾಸು, ಕಿಂಗ್, ಟೈಗರ್ ಗಂಗು, ಮೇಯರ್ ಪ್ರಭಾಕರ್, ಕಿಲಾಡಿ ತಾತ, ಅಶೋಕ ಚಕ್ರ, ಗುಡ್ ಬ್ಯಾಡ್ ಅಗ್ಲಿ ಇನ್ನು ಮುಂತಾದ ಚಿತ್ರಗಳಲ್ಲಿ ಮನೋಜ್ಞವಾಗಿ ಅಭಿನಯಿಸಿದ್ದಾರೆ.

ಕನ್ನಡ, ತೆಲುಗು, ತಮಿಳು, ಹಿಂದಿ, ಮಲಯಾಳಂ ಚಿತ್ರಗಳಲ್ಲೂ ನಟಿಸಿ ದಕ್ಷಿಣ ಭಾರತದಲ್ಲಿ ಬಹು ಬೇಡಿಕೆಯ ನಟರಾಗಿದ್ದರು. ಖಳನಾಯಕನಾಗಿ ತೆಲುಗು ಚಿತ್ರರಂಗದಲ್ಲಿ ಅತಿಹೆಚ್ಚು ಸಂಭಾವನೆ ಪಡೆದ ಹೆಗ್ಗಳಿಕೆ ಟೈಗರ್ ಪ್ರಭಾಕರ್ ಅವರಿಗೆ ಸಲ್ಲುತ್ತದೆ. ಇನ್ಸ್‌ಪೆಕ್ಟರ್ ಪಾತ್ರಗಳಿಗೆ ಒಂದು ಮೆರಗು, ಗತ್ತು ತಂದು ಕೊಟ್ಟವರು ಟೈಗರ್ ಪ್ರಭಾಕರ್. 'ಕಾಡಿನ ರಹಸ್ಯ' ಚಿತ್ರದಿಂದ ಅವರು ಕೊನೆಯ ಚಿತ್ರ 'ಗುಡ್ ಬ್ಯಾಡ್ ಅಗ್ಲಿ' ಸೇರಿ ಕನ್ನಡದಲ್ಲಿ 205 ಚಿತ್ರಗಳಲ್ಲಿ ನಟಿಸಿದ್ದಾರೆ. ಕನ್ನಡ, ತೆಲುಗು, ತಮಿಳು, ಹಿಂದಿ, ಮಲಯಾಳಂ ಸೇರಿದಂತೆ 350ಕ್ಕೂ ಹೆಚ್ಚು ಚಿತ್ರಗಳಲ್ಲಿ ಅಮೋಘವಾಗಿ ಅಭಿನಯಿಸಿದ್ದಾರೆ. ಟೈಗರ್ ಪ್ರಭಾಕರ್ ಕಥೆ, ಚಿತ್ರಕಥೆ, ಸಂಗೀತ, ಸಂಭಾಷಣೆ, ಛಾಯಾಗ್ರಹಣ, ನಿರ್ಮಾಪಕ, ನಿರ್ದೇಶನ, ನಟನೆ ಹೀಗೆ ಹಲವಾರು ವಿಭಾಗಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಅವರ ಚಿತ್ರಗಳು ಅವರನ್ನು ಅಮರರನ್ನಾಗಿಸಿವೆ. ರಾಜ್ಯದ ಯಾವುದಾದರೂ ವಿಶ್ವವಿದ್ಯಾನಿಲಯ ಮರಣೋತ್ತರವಾಗಿ ಟೈಗರ್ ಪ್ರಭಾಕರ್ ಅವರಿಗೆ ಗೌರವ ಡಾಕ್ಟರೇಟ್ ನೀಡಲಿ ಎಂದು ಲಕ್ಷಾಂತರ ಅಭಿಮಾನಿಗಳ ಮನವಿ.

-ಅಹಲ್ಯ ಸಿ.ನಾ.ಚಂದ್ರ, ಜನತಾನಗರ, ಮೈಸೂರು.

ಮಂಥನ



ನಿವೇದಿತ ಎಚ್.
ಇಂಗ್ಲಿಷ್ ಉಪನ್ಯಾಸಕಿ
ಮಹಾರಾಜ ಕಾಲೇಜು
ಮೈಸೂರು.
niveditha.manthana26@gmail.com


ಸಾಂಸ್ಕೃತಿಕ ರಾಜಧಾನಿಯ ಸಾಹಿತ್ಯ ಮಣಿಮುಕುಟಗಳು...



ಬಿ.ಎಸ್.ರುಕ್ಕಮ್ಮ



ಹೇಮಗಂಗಾ



ಶುಭಾ ಸಂಜಯ್



ಪದ್ಮಾ ಆನಂದ್



ಹೇಮಮಾಲ



ತ್ರಿವೇಣಿ



ಎಂ.ಎಸ್.ವೇದಾ



ಉಷಾ ನರಸಿಂಹನ್



ಮಂಗಳಾ ಸತ್ಯನ್



ವಾಣಿ



ಸಿ.ಎನ್.ಮುಕ್ತಾ

ತುಳಸೀದಾಸರ 'ರಾಮಚರಿತಮಾನಸ'ವನ್ನು ಕನ್ನಡಕ್ಕೆ ತಂದ ಎಂ.ಎನ್.ಸರೋಜಮ್ಮನವರ ಬಗ್ಗೆ ಲೇಖನ ಬರೆದು ಮುಗಿಸಿದ ನಂತರ ಹಾಗೆಯೇ ಯೋಚಿಸುತ್ತಿರುವಾಗ, ಮೈಸೂರು ಜಿಲ್ಲೆಯಲ್ಲಿ ಅದೆಷ್ಟು ಲೇಖಕಿಯರಿದ್ದಾರೆ ಎಂಬುದು ಹೊಳೆದು ಆಶ್ಚರ್ಯವಾಯಿತು. ಅವರ ಬಗ್ಗೆಯೇ ಒಂದು ಲೇಖನ ಸಿದ್ಧಪಡಿಸಿದರೆ ಸಂತೋಷ ಹೆಚ್ಚುತ್ತದೆ ಎಂದೆನಿಸಿತು. ಹಾಗಾಗಿಯೇ ಈ ಧೈರ್ಯ ಮಾಡಿದೆ. ನಾನು ಕಲೆ ಹಾಕಿದ ಮಾಹಿತಿಗಳನ್ನು ಇಲ್ಲಿ ನಿಮ್ಮೊಂದಿಗೆ ಹಂಚಿಕೊಳ್ಳುತ್ತಿದ್ದೇನೆ. ಹಾಗೆಂದು ಇಲ್ಲಿ ಎಲ್ಲರೂ ಇದ್ದಾರೆಂದಲ್ಲ. ನನ್ನ ಕಣ್ತಪ್ಪಿನಿಂದ ಒಂದಷ್ಟು ಲೇಖಕಿಯರನ್ನು, ಸಂಘಗಳನ್ನು ನಾನು ಉಲ್ಲೇಖಿಸಿಲ್ಲವೆಂದರೆ ಅದು ನನ್ನ ತಪ್ಪಷ್ಟೇ. ಆ ಒಂದು Disclaimer ನೊಂದಿಗೇ ಲೇಖನವನ್ನು ಆರಂಭಿಸುತ್ತಿದ್ದೇನೆ. ಇನ್ನೊಂದು ಲೇಖನಕ್ಕೆ ಆಗುವಷ್ಟು ಸಾಮಾಗ್ರಿ ಇದೆ ಎಂದೇ ನನ್ನ ನಂಬಿಕೆ.

ಸಾಂಸ್ಕೃತಿಕ ರಾಜಧಾನಿ ಎಂದು ನಿರ್ವಿವಾದವಾಗಿ ಕರೆಸಿಕೊಂಡಿರುವ ಮೈಸೂರು, ಕತೆಗಾರರು, ಕವಿಗಳನ್ನು ಪೊರೆದ ನಗರ. ಇಲ್ಲಿನ ಮಣ್ಣಿನಲ್ಲಿಯೇ ಒಂದು ಸಾಹಿತ್ಯಕ ಗುಣವಿದೆ ಎಂದರೆ ಅದು ಉತ್ಪ್ರೇಕ್ಷೆಯಲ್ಲ. ಕವಿ ಕಾದಂಬರಿಕಾರರು ವಿಮರ್ಶಕರಿಂದ ತುಂಬಿ ತುಳುಕುತ್ತಿದ್ದ ಮೈಸೂರಿನ ಪ್ರಾಜ್ಞವಲಯದಲ್ಲಿ, ತಮಗೆ ದೊರೆತ ಸೀಮಿತ ಅವಕಾಶದಲ್ಲಿಯೇ ಪ್ರಜ್ವಲಿಸಿದ ಮಹಿಳಾ ರತ್ನಗಳು ಹಲವು.

ನಿಮಗೆ ಆಶ್ಚರ್ಯವಾಗಬಹುದು, ಕನ್ನಡದ ಮೊದಲ ಕಾದಂಬರಿಕಾರ್ತಿ, ಆಧುನಿಕ ಕನ್ನಡದ ಮೊದಲ ಪ್ರಕಾಶಕಿ, ಸಂಪಾದಕಿ ಎಂದು ಹೆಸರು ಮಾಡಿದ **ನಂಜನಗೂಡು ತಿರುಮಲಾಂಬ**. ಇವರೆಲ್ಲರಲ್ಲಿ ಆದ್ಯರು. 10ನೇ ವಯಸ್ಸಿನಲ್ಲಿ ವಿವಾಹಿತರಾಗಿ, 14ಕ್ಕೇ ಬಾಲವಿಧವೆಯಾದ ತಿರುಮಲಾಂಬ ತಮ್ಮ ತಂದೆಯ ಬೆಂಬಲದಿಂದ ಓದು ಮುಂದುವರೆಸಿ ತಮ್ಮದೇ ಆದ ರೀತಿಯಲ್ಲಿ ಬೆಳೆದರು, ಮಾರ್ಗದರ್ಶಿಯಾದರು. ತಾವೇ 30ಕ್ಕೂ ಹೆಚ್ಚು ಪುಸ್ತಕಗಳನ್ನು ರಚಿಸಿರುವ ಇವರ ಸುಶೀಲ ಕಾದಂಬರಿ, ಒಬ್ಬ ಲೇಖಕಿಯಿಂದ ಬಂದ ಕನ್ನಡದ ಮೊದಲ ಕಾದಂಬರಿ ಎಂದು ಹೇಳಲಾಗುತ್ತದೆ. ಪ್ರಕಾಶಕಿಯಾಗಿ 'ಸತಿಹಿತೈಷಿಣಿ ಪ್ರಕಾಶನ ಸಂಸ್ಥೆ'ಯ ಮೂಲಕ ವೈವಿಧ್ಯಮಯ ವಿಷಯಗಳ ಕುರಿತು ಹಲವು ಪುಸ್ತಕಗಳನ್ನು ಪ್ರಕಟಿಸಿದ್ದಾರೆ.

'ಕರ್ನಾಟಕ ನಂದಿನಿ' ಪತ್ರಿಕೆ ಮೂಲಕ ಮಹಿಳೆಯರಿಗೆ ವೇದಿಕೆ ಕಲ್ಪಿಸಿ ಕೊಟ್ಟರು. ಹಲವು ಕಾವ್ಯನಾಮಗಳಿಂದ ತಾವೇ ಪತ್ರಿಕೆಗೆ ನಿರಂತರವಾಗಿ ಬರೆದರು. ಆದರೆ ಲೇಖಕಿಯರ ಕೊರತೆಯಿಂದಾಗಿ ಅನಿವಾರ್ಯವಾಗಿ ಪತ್ರಿಕೆ ನಿಲ್ಲಿಸಿದರು. ತಮ್ಮ 95ನೇ ವಯಸ್ಸಿನಲ್ಲಿ ನಿಧನರಾದ ತಿರುಮಲಾಂಬರ ಜೀವನ ಇಂದಿನ ಎಲ್ಲ ಲೇಖಕಿಯರಿಗೆ ಸ್ಫೂರ್ತಿ. ಮಾರ್ಚ್ 25, ಅಂದರೆ ನಿನ್ನೆ, ನಂಜನಗೂಡು ತಿರುಮಲಾಂಬ ಅವರ ಹುಟ್ಟಿದ ದಿನ!

ತ್ರಿವೇಣಿ


ಕನ್ನಡ ಸಾಹಿತ್ಯದ ಧ್ರುವತಾರೆ. ಕನ್ನಡದ ಹೆಂಗಳೆಯರನ್ನು ಓದಿನ ಹವ್ಯಾಸಕ್ಕೆ ಆತುಕೊಳ್ಳುವಂತೆ ಮಾಡಿದವರಲ್ಲಿ ಇವರ ಹೆಸರೇ ಮೊದಲು. ಹಿಂದೆಯೂ ಒಮ್ಮೆ ಇವರ ಬಗ್ಗೆ ಬರೆದಿದ್ದೆನಾದ್ದರಿಂದ ಮತ್ತೆ ಹೇಳುವುದಿಲ್ಲ. ಆದರೆ ಇಂದಿಗೂ ತ್ರಿವೇಣಿಯವರನ್ನು ಓದುತ್ತಾರೆ, ಅವರ ಪುಸ್ತಕಗಳು ಮರುಮುದ್ರಣಗೊಳ್ಳುತ್ತಲೇ ಇವೆ ಎಂಬುದೇ ಅವರ ಜನಪ್ರಿಯತೆಗೆ ಸಾಕ್ಷಿ. ಅವರ **ವಸಂತಗಾನ** ಕಾದಂಬರಿಯನ್ನು ಆಧರಿಸಿ ಇತ್ತೀಚೆಗೆ **ಸರಳಾ ಸುಬ್ಬರಾವ್** ಚಿತ್ರ ಬಂದದ್ದು ಅವರು ಇಂದಿಗೂ ಪ್ರಸ್ತುತರು ಎನ್ನುವುದನ್ನು ಸಾರಿಹೇಳುತ್ತದೆ.

ವಾಣಿ

ಬಿ.ಎನ್.ಸುಬ್ಬಮ್ಮ ಎಂದರೆ ಯಾರಿಗೂ ಗೊತ್ತಾಗುವುದಿಲ್ಲ. ಅದೇ ಶುಭಮಂಗಳದ **ವಾಣಿ** ಎಂದರೆ ಎಲ್ಲರ ಮೈ ರೋಮಾಂಚನಗೊಳ್ಳುತ್ತದೆ! ಹೊಸಬೆಳಕು, ಎರಡು ಕನಸು ಚಿತ್ರಗಳು ಕನ್ನಡದ Iconic. ಶ್ರೀರಂಗಪಟ್ಟಣದಲ್ಲಿ ಜನಿಸಿದರೂ, ಇವರ ಸಾಹಿತ್ಯ ಕೃಷಿ ನಡೆದದ್ದು ಮೈಸೂರಿನಲ್ಲಿಯೇ. 15ಕ್ಕೂ ಹೆಚ್ಚು ಕಾದಂಬರಿಗಳು, ಹಲವಾರು ಸಣ್ಣಕತೆಗಳನ್ನು ರಚಿಸಿದ ವಾಣಿ ಅವರು, ವಚನಗಳನ್ನೂ ರಚಿಸಿದ್ದರು ಎಂಬುದು ಬಹಳ ಜನರಿಗೆ ತಿಳಿದಿಲ್ಲದ ವಿಷಯ. 1988ರಲ್ಲಿ ಇವರು ನಿಧನರಾದಾಗ ಕನ್ನಡದ ಸಂಸ್ಕೃತಿ ಅದರಲ್ಲೂ ಮೈಸೂರಿನ ಜನಮಾನಸವನ್ನು ಕಟ್ಟಿಕೊಟ್ಟ ಮಹಾನ್ ಚೇತನ ಅಸ್ತಂಗತವಾಯಿತು.

ಆರ್ಯಾಂಬ ಪಟ್ಟಾಭಿ

ತ್ರಿವೇಣಿ ಅವರ ಸಹೋದರಿ, ಆರ್ಯಾಂಬ ಪಟ್ಟಾಭಿ ಕೂಡಾ ಅಕ್ಕನ ದಾರಿಯಲ್ಲಿಯೇ ನಡೆದು ಕನ್ನಡದ ಜನಪ್ರಿಯ ಲೇಖಕಿಯರ ಸಾಲಿಗೆ ಸೇರಿದ್ದಾರೆ. ಮಾರ್ಚ್ 12ರಂದು ಜನಿಸಿದ ಆರ್ಯಾಂಬ ಅವರು ಇತ್ತೀಚೆಗೆ ತಮ್ಮ 90ನೇ ಹುಟ್ಟುಹಬ್ಬವನ್ನು ಆಚರಿಸಿಕೊಂಡರು. ಕಾದಂಬರಿ ಮಾತ್ರವಲ್ಲದೆ, ಪ್ರವಾಸ ಸಾಹಿತ್ಯ, ವಿಚಾರ ಸಾಹಿತ್ಯ ಮತ್ತು ಪ್ರಬಂಧ ಪ್ರಕಾರದಲ್ಲಿಯೂ ಕೈಯ್ಯಾಡಿಸಿರುವ ಇವರ 4 ಕಾದಂಬರಿಗಳು ಚಲನಚಿತ್ರಗಳಾಗಿವೆ. ರಾಜ್ಯೋತ್ಸವ ಪ್ರಶಸ್ತಿ ಸೇರಿದಂತೆ ಹಲವು ಪ್ರಶಸ್ತಿಗಳನ್ನು ಪಡೆದಿರುವ ಇವರು, ಇಂದಿಗೂ ಅದೇ ಉತ್ಸಾಹದಿಂದ ಸಾಹಿತ್ಯದ ರಚನೆಯಲ್ಲಿ ತೊಡಗಿದ್ದಾರೆ.



ತಿರುಮಲಾಂಬ



ಆರ್ಯಾಂಬ ಪಟ್ಟಾಭಿ



ಕುಸುಮಾ ಆಯರಹಳ್ಳಿ

ಸಿ.ಎನ್.ಮುಕ್ತಾ

ಮೈಸೂರಿನಲ್ಲಿಯೇ ಜನಿಸಿ, ಇಲ್ಲಿಯೇ ಶಿಕ್ಷಕಿಯಾಗಿ ಸೇವೆಸಲ್ಲಿಸಿ, ನಿವೃತ್ತರಾದ ನಂತರವೂ ಸಾಹಿತ್ಯ ಸೇವೆಯಲ್ಲಿ ತೊಡಗಿರುವ ಮುಕ್ತಾ ಅವರದು ಉತ್ಕಟ ಸಾಹಿತ್ಯ ಪ್ರೇಮ. ಇವರ ಕತೆ ಕಾದಂಬರಿ ಪ್ರಕಟಗೊಳ್ಳದ ಕನ್ನಡದ ಪತ್ರಿಕೆ ಒಂದೂ ಇಲ್ಲ ಎಂಬುದೇ ಇವರ ಹೆಗ್ಗಳಿಕೆ. ಈಗಲೂ ಸ್ನೇಹಬಳಗ ಎಂಬ ಸಾಹಿತ್ಯಕೂಟದ ಮೂಲಕ ಸಾಹಿತ್ಯದ ವಿವಿಧ ಮಗ್ಗುಲುಗಳನ್ನು ಅನ್ವೇಷಿಸುತ್ತಲೇ ಇರುವ ಮುಕ್ತಾ ಅವರು ಮೈಸೂರಿನ ಹೆಮ್ಮೆ. ಹಿಂದೊಮ್ಮೆ ಚಿತ್ರಲೇಖಾ, ಎಚ್ ಜಿ ರಾಧಾದೇವಿ ಹಾಗು ಉಷಾ ನವರತ್ನರಾಮ್ ಅವರ ಕಾದಂಬರಿಗಳ ಬಗ್ಗೆ ಮುಕ್ತಾ ಅವರು ಏರ್ಪಡಿಸಿದ್ದ ಒಂದು ಕಾರ್ಯಕ್ರಮದ ಬಗ್ಗೆ ಇದೇ ಅಂಕಣದಲ್ಲಿ ಬರೆದಿದ್ದು ನೆನಪಾಯಿತು.

ಮಂಗಳಾ ಸತ್ಯನ್

ಮುಗ್ಧಮಾನವ, ಬಿಸಿಲು ಬೆಳದಿಂಗಳು, ಭಾಗ್ಯಜ್ಯೋತಿ ಚಿತ್ರಗಳನ್ನು ನೋಡಿದ್ದರೆ, ನಿಮಗೆ ಆ ಚಿತ್ರಗಳ ಕತೆ ಮೈಸೂರಿನಲ್ಲಿಯೇ ನೆಲೆಸಿರುವ **ಮಂಗಳಾ ಸತ್ಯನ್** ಅವರದ್ದು ಎಂದು ತಿಳಿದಿರುತ್ತದೆ. ಮೈಸೂರನ್ನು ತಮ್ಮ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡ ಮಂಗಳಾ ಸತ್ಯನ್ ಅವರು 140ಕ್ಕೂ ಹೆಚ್ಚು ಜನಪ್ರಿಯ ಕಾದಂಬರಿಗಳನ್ನು ಬರೆದಿದ್ದಾರೆ. ಸಣ್ಣ ಕತೆಗಳು, ರೇಡಿಯೋ ನಾಟಕಗಳನ್ನು ರಚಿಸಿರುವ ಇವರು ಒಂದು ಕಾಲದ ಮಹಿಳೆಯರ ಅಚ್ಚುಮೆಚ್ಚಿನ ಕಾದಂಬರಿಕಾರ್ತಿ.

ಪ್ರೊ ಬಿ.ಎಸ್.ರುಕ್ಕಮ್ಮ ಅವರು ಸ್ವತಃ ಲೇಖಕಿ ಅನುವಾದಕಿ ಮಾತ್ರವಲ್ಲ, ಹಲವು ಬರಹಗಾರರಿಗೆ ಪ್ರೇರಣೆಯನ್ನೂ ನೀಡಿದ್ದಾರೆ. ಡಾ.ಎಚ್.ಆರ್. ಲೀಲಾವತಿ ಇಂದಿಗೂ ಸುಂದರ ಕವನಗಳನ್ನು ರಚಿಸುತ್ತಿದ್ದಾರೆ.

ಇವರೆಲ್ಲಾ ಹಿಂದಿನ ತಲೆಮಾರಿನ ಲೇಖಕಿಯರಾದರೆ, ಮೈಸೂರಿನಲ್ಲಿ ನೆಲೆಸಿ ಇಂದಿಗೂ ಸಾಹಿತ್ಯ ಕ್ಷೇತ್ರಕ್ಕೆ ತಮ್ಮ ಅಮೂಲ್ಯ ಕೊಡುಗೆಗಳನ್ನು ನೀಡುತ್ತಿರುವ ಹಲವು ಲೇಖಕಿಯರಿದ್ದಾರೆ. **ಡಾ ಎಂ ಎಸ್ ವೇದಾ** ಮೈಸೂರಿನ ವೈವಿಧ್ಯಮಯ ಕನ್ನಡವನ್ನು, ತನ್ನ ಕತೆ ಕಾದಂಬರಿಗಳಲ್ಲಿ ಬಳಸಿ ವಿಶಿಷ್ಟ ಕೃತಿಗಳನ್ನು ರಚಿಸುತ್ತಿದ್ದಾರೆ. ನಾಟಕ ರಚನೆಯ ಮೂಲಕವೂ ವಿಷಯ ಪ್ರಸ್ತುತಿಯ ವಿವಿಧ ಆಯಾಮಗಳನ್ನು ವೇದಾ ಅನ್ವೇಷಿಸುತ್ತಿದ್ದಾರೆ.

ಉಷಾ ನರಸಿಂಹನ್ ಕತೆ, ಕಾದಂಬರಿ, ಕವನ, ನಾಟಕ ಮತ್ತು ಲಲಿತ ಪ್ರಬಂಧಗಳಿಗೆ ಹೆಸರಾದವರು. ಐತಿಹಾಸಿಕ ಕೃತಿಗಳನ್ನು ಅವರ ಶ್ರದ್ಧೆ ಮತ್ತು ಅಪಾರ ಸಂಶೋಧನೆಯ ಬಲದಿಂದ ರಚಿಸುವ ಉಷಾ ಅವರ ಇತ್ತೀಚಿನ ಕಾದಂಬರಿ ಆರ್ಯಾವರ್ತ ಹರ್ಷವರ್ಧನನ ಚರಿತೆಯನ್ನು ಹೇಳುತ್ತದೆ. ಡಾ ಚಂದ್ರಮತಿ ಸೋಂದಾ ನಮ್ಮ ನಡುವಿನ ಸಂಶೋಧಕಿ ಮತ್ತು ಲೇಖಕಿ. ಇವರ ಮಗಳು ಅಲಕಾ ಕಟ್ಟೆಮನೆ ಕೂಡಾ ಕತೆಗಾರ್ತಿ. ಪ್ರೊ ಬಿ ಎಸ್ ರುಕ್ಕಮ್ಮ ಅನುವಾದ ಸೇರಿದಂತೆ ಹಲವು ಕೃತಿಗಳನ್ನು ರಚಿಸಿದ್ದಾರೆ. ಡಾ.ಕೆ ಎನ್ ಲಾವಣ್ಯಪ್ರಭ, ಡಾ.ಶೋಭಾರಾಣಿ, ಡಾ.ದಿನಮಣಿ ಮತ್ತು ಎಚ್ ಎಸ್ ಮಧುರಾಣಿ ಸುಂದರ ಕವಿತೆಗಳನ್ನು ಕನ್ನಡ ಕಾವ್ಯಲೋಕಕ್ಕೆ ಸೇರಿಸುತ್ತಿದ್ದಾರೆ.

ಡಾ.ಲತಾ ರಾಜಶೇಖರ್ 5 ಮಹಾಕಾವ್ಯಗಳನ್ನು ರಚಿಸಿರುವ ಮೈಸೂರಿನ ಹೆಮ್ಮೆಯ ಲೇಖಕಿ. ಡಾ.ಶಾಂತಾ ನಾಗರಾಜ್, ಸಾಮಾಜಿಕ ಕಳಕಳಿಯ ಪುಸ್ತಕಗಳನ್ನು ಬರೆದಿರುವ ನಮ್ಮ ಮಧ್ಯೆ ಇರುವ ಹಿರಿಯ ಲೇಖಕಿ. ನಿವೃತ್ತ ಪ್ರಾಂಶುಪಾಲರಾಗಿರುವ ಡಾ. ಎಸ್ ಸುಧಾ ಪ್ರವಾಸ ಸೇರಿದಂತೆ ಹಲವು ಪ್ರಕಾರಗಳ ಕೃತಿಗಳನ್ನು ರಚಿಸುತ್ತಿದ್ದಾರೆ. ಡಾ.ವೈ.ಸಿ.ಭಾನುಮತಿ ನಮ್ಮ ನಡುವಿರುವ ಹಿರಿಯ ಸಂಶೋಧಕಿ. ಡಾ. ಕೆ.ಕೃಷ್ಣಮೂರ್ತಿ ಅವರ ಮಗಳಾದ ಡಾ. ಕೆ ಲೀಲಾ ಪ್ರಕಾಶ್, ಸಂಸ್ಕೃತ ಸಾಹಿತ್ಯ ಕ್ಷೇತ್ರದಲ್ಲಿ ವಿದ್ವಾಂಸರು ಮತ್ತು 40ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಡಾ. ಸಿ ಜಿ ಉಷಾದೇವಿ 5ಕೃತಿಗಳನ್ನು ಪ್ರಕಟಿಸಿದ್ದಾರೆ, ಶರಣ ಸಾಹಿತ್ಯ ಇವರ ಆಸಕ್ತಿಯ ಕ್ಷೇತ್ರವಾದರೂ ಎಲ್ಲ ಕ್ಷೇತ್ರಗಳನ್ನೂ ಹೊಕ್ಕಿ ಬಂದಿದ್ದಾರೆ. ಬಿ .ಕೆ ಮೀನಾಕ್ಷಿ ಕತೆ, ಕವನ, ಪ್ರಬಂಧಗಳ ರಚನೆಯಲ್ಲಿ ತೊಡಗಿದ್ದಾರೆ, ಮಕ್ಕಳಿಗಾಗಿ ಇವರು ಬರೆಯುವ ಕತೆಗಳು ಜನಪ್ರಿಯ.

ಆಡುಮುಟ್ಟದ ಸೊಪ್ಪಿಲ್ಲ ಎನ್ನುವ ಹಾಗೆ, ಕುಸುಮಾ ಆಯರಹಳ್ಳಿ ಮತ್ತು ಸುಚಿತ್ರಾ ಹೆಗಡೆ ಬರೆಯದ ಸಾಹಿತ್ಯ ಪ್ರಕಾರವಿಲ್ಲ!

ಡಾ.ಪದ್ಮಿನಿ ಹೆಗಡೆ, ಡಾ.ಮಂದಾರವಲ್ಲಿ, ಡಾ.ಮಾಧುರಿ ಕುಲಕರ್ಣಿ, ವಾಣಿ ಸುಬ್ಬಯ್ಯ, ಹೇಮಗಂಗಾ, ಸುಜಾತಾ ರವೀಶ್, ಡಾ.ಬಿ.ಎ. ಶಾರದಾ, ಕುಸುಮಾ ಮೂರ್ತಿ, ತುಳಸೀ ವಿಜಯಕುಮಾರಿ, ಪ್ರೊ. ಕೆ.ಆರ್.ಪ್ರೇಮಲೀಲಾ, ದೀಪಾ ರವಿಶಂಕರ್, ಅನುರಾಧಾ ಸಾಮಗ, ಸವಿತಾ ಪ್ರಭಾಕರ್, ಇಂದಿರಾ ಪಾಟೀಲ್, ಸುಧಾ ಹರೀಶ್, ಪದ್ಮಜಾ ಸುಂದರೇಶ್, ಡಾ.ಜಯಲಕ್ಷ್ಮಿ ಸೀತಾಪುರ, ವಿಜಯಾ ಶಂಕರ, ಡಾ. ಎಂ ಕನ್ನಿಕಾ, ಯಶೋಧಾ ರಾಮಕೃಷ್ಣ, ಸೌಗಂಧಿಕಾ ಜೋಯಿಸ್, ಜೋಶ್ಯುಲಾ ಪ್ರಭಾ ಶಾಸ್ತ್ರಿ, ಕೆರೋಡ ಎಂ.ಲೋಲಾಕ್ಷಿ, ಶ್ರೀಲತಾ ಮನೋಹರ್, ಮಂಗಳಾ ಮುದ್ದುಮಾದಪ್ಪ, ಚಂಪಾ ಶಿವಣ್ಣ, ಹಲ್ಲೆಗೆರೆ ಸುಬ್ಬಲಕ್ಷ್ಮಿ, ಸುಮತೀ ಸುಬ್ರಮಣ್ಯ, ಮಣಿಶ್ರೀ ಡಿ ಎ, ಯಶೋಧಾ ರಾಮಕೃಷ್ಣ, ಕೆ.ಟಿ.ಶ್ರೀಮತಿ, ಲಕ್ಷ್ಮಿ, ರುಕ್ಮಿಣಿಮಾಲಾ, ಹೀಗೆಯೇ ಹೆಸರುಗಳನ್ನು ಹೇಳುತ್ತಾ ಹೋದರೆ ಪಟ್ಟಿ ಉದ್ದವಾಗುತ್ತಲೇ ಹೋಗುತ್ತದೆ. ಇವರೆಲ್ಲಾ, ಮೈಸೂರಿನಲ್ಲಿ ನಡೆಯುವ ಎಲ್ಲ ಸಾಹಿತ್ಯಕ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾ, ಹೊಸಹೊಸ ರಚನೆಗಳಲ್ಲಿ ತೊಡಗಿಕೊಂಡಿರುವ ಸಾಹಿತಿಗಳು. ಇನ್ನು ಇತ್ತೀಚೆಗೆ ಹೊಸ ಲೇಖಕಿಯರ ಪಡೆಯೇ ಹುಟ್ಟಿಕೊಂಡಿದ್ದು, ಕತೆ, ಕವನ, ಲೇಖನ, ಪ್ರಬಂಧ ಹೀಗೆ ಎಲ್ಲ ಪ್ರಕಾರ ಗಳಲ್ಲಿಯೂ ಕೈಯ್ಯಾಡಿಸುತ್ತಾ ತಮ್ಮ ಸರದಿಗಾಗಿ ಕಾಯುತ್ತಿದ್ದಾರೆ.

ಬೇರೆ ಬೇರೆ ಜಿಲ್ಲೆಗಳಿಂದ ಬಂದಿರುವ ವಸುಮತಿ ಉಡುಪ, ಶಶಿಕಲಾ ವಸ್ತ್ರದ, ವಸಂತ ಕಲ್ಬಾಗಲ್ ಅವರಂತಹ ಸಾಹಿತಿಗಳು ಈಗ ಮೈಸೂರು ವಾಸಿಗಳು! ಇವರ ಜೊತೆ, ಸಾಹಿತ್ಯಕ ಕಾರ್ಯಕ್ರಮಗಳ ಸಂಘಟನೆಯಲ್ಲಿ ತೊಡಗಿಕೊಂಡು, ಸಾಹಿತ್ಯ ರಚನೆ ಮಾಡುತ್ತಾ, ಮಹಿಳೆಯರನ್ನು ಬರೆಯಲು ಪ್ರೇರೇಪಿಸುತ್ತಿರುವ ಹಲವು ಸಂಘಗಳು ಒಕ್ಕೂಟಗಳು ಮೈಸೂರಿನಲ್ಲಿವೆ.

ಮೈಸೂರು ಸಾಹಿತ್ಯ ಸಂಭ್ರಮದ ರೂವಾರಿಯಾಗಿರುವ **ಶುಭಾ ಸಂಜಯ್ ಅರಸ್** ಅವರ ಕನ್ನಡ ಓದುಗರ ಒಕ್ಕೂಟ 15 ವಸಂತಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದೆ. ತಿಂಗಳಿಗೊಂದು ಹೊಸ ಪುಸ್ತಕ ಓದಿ ಅದರ ಬಗ್ಗೆ ಚರ್ಚೆ ಮಾಡುವ ಪರಿಪಾಠವನ್ನು ಇಟ್ಟುಕೊಂಡಿದೆ.

ತಮ್ಮ ಪತಿ ಆನಂದ್ ಅವರೊಂದಿಗೆ ಸೇರಿ ಲೇಖಕಿ **ಪದ್ಮಾ ಆನಂದ್** ಅವರು ನಡೆಸುತ್ತಿರುವ ಸಾಹಿತ್ಯ ದಾಸೋಹ, ತನ್ನ ದಶಮಾನ ಸಮಾರಂಭವನ್ನು ಇತ್ತೀಚೆಗಷ್ಟೇ ಆಚರಿಸಿಕೊಂಡಿತು. ಇಲ್ಲಿ ಎಲ್ಲ ಸದಸ್ಯರು ತಿಂಗಳಿಗೊಮ್ಮೆ ಸೇರಿ ತಮ್ಮ ರಚನೆಯನ್ನು ಪ್ರಸ್ತುತಪಡಿಸುವ ಅವಕಾಶ ಹಲವಾರು ಲೇಖಕರನ್ನು ಹುಟ್ಟು ಹಾಕಿದೆ. ಸ್ವತಃ ಲೇಖಕಿಯಾಗಿರುವ ಮ.ನಾ.ಲತಾ ಮೋಹನ್, ತಮ್ಮ ಸ್ನೇಹಸಿಂಚನ ಸಂಘದ ಮೂಲಕ ಸಾಹಿತ್ಯ ಪ್ರೀತಿಯನ್ನು ಹೆಚ್ಚಿಸುತ್ತಿದೆ. ತಮ್ಮ ಜನಮನ ಚಾನೆಲ್‌ನ ಮೂಲಕವೂ ಲತಾ ಮೋಹನ್ ಅವರು ಸಾಹಿತ್ಯಕ ಕಾರ್ಯಕ್ರಮಗಳನ್ನು ಪ್ರಸಾರ ಮಾಡುತ್ತಾರೆ.

ಕದಳೀ ವೇದಿಕೆ ಶರಣಸಾಹಿತ್ಯವನ್ನು ಇಂದಿಗೂ ಜನರಿಗೆ ತಲುಪಿಸುವ ಕೆಲಸವನ್ನು ಅವ್ಯಾಹತವಾಗಿ ಮಾಡುತ್ತಿದೆ. ಸಿ.ಎನ್.ಮುಕ್ತಾ ಅವರ ಸ್ನೇಹ ಬಳಗದ ಬಗ್ಗೆ ಈ ಹಿಂದೆಯೇ ಹೇಳಿದ್ದೇನೆ. ಪದ್ಮಾ ಅವರ ನೇತೃತ್ವದಲ್ಲಿ, ಸೃಜನಶೀಲರ ಬಳಗ ಏನಾದರೊಂದು ಸಾಹಿತ್ಯಕ ಚಟುವಟಿಕೆ ನಡೆಸುತ್ತಲೇ ಇರುತ್ತದೆ. ಹೇಮಗಂಗಾ ಪ್ರತಿಷ್ಠಾನ ಸಾಹಿತ್ಯಕ ಕಾರ್ಯಕ್ರಮಗಳ ಜೊತೆ ಸಾಧಕಿಯರನ್ನು ಗುರುತಿಸಿ ಸನ್ಮಾನಿಸುತ್ತಿದೆ. ಡಾ.ಎಂ.ಎಸ್. ವಿಜಯಾ ಹರನ್ ಹಾಗು ಪೂರ್ಣಿಮಾ ಸುರೇಶ್ ಅವರ ಕನ್ನಡ ಓದುಗರ ವೇದಿಕೆ ತನ್ನ ಸಾಹಿತ್ಯ ಸಂಬಂಧಿತ ಚಟುವಟಿಕೆಗಳಿಗೆ ಸದಾ ಹೆಸರುವಾಸಿ.

ಕರ್ನಾಟಕ ಲೇಖಕಿಯರ ಸಂಘಕ್ಕೆ ಮೈಸೂರಿನ ಡಾ.ಸುನಂದಮ್ಮನವರೇ ಅಧ್ಯಕ್ಷರು! ಅವರ ನೇತೃತ್ವದಲ್ಲಿ ಕಲೇಸಂನ ಚಟುವಟಿಕೆಗಳು ನಿಧಾನಕ್ಕೆ ಗರಿಗೆದರುತ್ತಿವೆ. ಡಾ.ಸಬೀಹಾ ಭೂಮಿಗೌಡಾ ಅವರು ಅಧ್ಯಕ್ಷರಾಗಿರುವ ಸಮತಾ ವೇದಿಕೆ ಗಂಭೀರ ಸಾಹಿತ್ಯ ವಿಮರ್ಶಾ ಕಾರ್ಯಕ್ರಮಗಳನ್ನು ನಡೆಸುವುದರೊಂದಿಗೆ ವಿವಿಧ ಪ್ರಕಾರಗಳ ಕೃತಿಗಳಿಗೆ ಬಹುಮಾನ ನೀಡುವ ಸಂಪ್ರದಾಯ ಪಾಲಿಸುತ್ತಿದೆ.

ಗಾಯತ್ರಿ ಸುಂದರೇಶ್ ಅವರ ಸಖೀ ಫೌಂಡೇಶನ್ ವೈವಿಧ್ಯಮಯ ಸಾಹಿತ್ಯಕ ಚಟುವಟಿಕೆಗಳನ್ನು, ಲೇಖಕಿಯರ ಪುಸ್ತಕ ಬಿಡುಗಡೆಯನ್ನು ಮಾಡುತ್ತಾ ಲೇಖಕಿಯರನ್ನು ಮುನ್ನೆಲೆಗೆ ತರುತ್ತಿದೆ.

ಹೊಸ ತಲೆಮಾರಿನ ಲೇಖಕಿಯರಾದ ಡಾ ಶಭಾನ ಹಾಗೂ ಕೀರ್ತಿ ಬೈಂದೂರು ಅವರು ಇನ್ನಿತರ ಸಮಾನಮನಸ್ಕರೊಡನೆ ಸೇರಿಕೊಂಡು, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಂಗವಾಗಿರುವ ಚಕೋರ ಎಂಬ ಸಾಹಿತ್ಯಾಸಕ್ತರ ಬಳಗವನ್ನು ಹುಟ್ಟುಹಾಕಿ ಕಾಲೇಜುಗಳಲ್ಲಿ ಸಾಹಿತ್ಯದ ಕುರಿತ ಉಪನ್ಯಾಸಗಳನ್ನು ಏರ್ಪಡಿಸುತ್ತಿದ್ದಾರೆ. ಭವಿಷ್ಯದ ಪೀಳಿಗೆಯಲ್ಲಿ ಸಾಹಿತ್ಯಾಸಕ್ತಿಯನ್ನು ಬೆಳೆಸುವ ಈ ಪ್ರಯತ್ನ ಶ್ಲಾಘನೀಯ.

ಇವರೆಲ್ಲರ ನಡುವೆ, ಶ್ರೀಮತಿ ಹೇಮಾಮಾಲ ಅವರು, ಸುರಹೊನ್ನೆ ಎಂಬ ಅಂತರ್ಜಾಲ ಪತ್ರಿಕೆಯನ್ನು ಹೊರತರುತ್ತಿರುವುದು ಮತ್ತು 12 ವರ್ಷಗಳಿಂದ ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿರುವುದು ಹೆಮ್ಮೆಯ ವಿಷಯ. ಈ ಲೇಖನಕ್ಕೆ ನನ್ನ ಹುಡುಕಾಟಕ್ಕೆ ಪೂರಕವಾಗಿ ಆಕರವಾಗಿ ದೊರೆತ ಪುಸ್ತಕ, ಮೈಸೂರು ನಗರದಲ್ಲಿರುವ ಕನ್ನಡ ಲೇಖಕಿಯರ ಪರಿಚಯ. ಇದನ್ನು ರಚಿಸಿರುವ ಬಿ.ಆರ್.ನಾಗರತ್ನ ಅವರು. ಮೇಲೆ ಹೇಳಿರುವ ಬಹುತೇಕ ಎಲ್ಲ ಬಳಗಗಳ ಸಕ್ರಿಯ ಸದಸ್ಯೆ ಮತ್ತು ಎಲ್ಲ ಪ್ರಕಾರಗಳಲ್ಲಿ ಕೃತಿ ರಚನೆ ಮಾಡಿರುವ ಮಾಡುತ್ತಿರುವ ಕ್ರಿಯಾಶೀಲೆ. ಮೈಸೂರನ್ನು ಸಾಹಿತ್ಯಕವಾಗಿ ಸಮೃದ್ಧಗೊಳಿಸುತ್ತಿರುವ ಎಲ್ಲ ಲೇಖಕಿಯರಿಗೂ ವಂದನೆಗಳು ಮತ್ತು ಅಭಿನಂದನೆಗಳು.

ಸಿಗ್ಮಾ ಆಸ್ಪತ್ರೆಯಲ್ಲಿ ಕ್ಷಯರೋಗ ಜಾಗೃತಿ ಕಾರ್ಯಕ್ರಮ



ಮೈಸೂರಿನ ಸಿಗ್ಮಾ ಆಸ್ಪತ್ರೆಯಲ್ಲಿ ಕ್ಷಯ ರೋಗ ಕುರಿತು ಜಾಗೃತಿ ಕಾರ್ಯಕ್ರಮ ನಡೆಯಿತು. ಈ ಸಂದರ್ಭದಲ್ಲಿ ಆಸ್ಪತ್ರೆಯ ತಜ್ಞ ವೈದ್ಯರಾದ ಜನರಲ್ ಫಿಸಿಷಿಯನ್ ಡಾ. ರಾಕೇಶ್ ರಾಜೇ ಅರಸ್, ಪ್ರಸೂತಿ ತಜ್ಞರಾದ ಡಾ. ತೇಜಸ್ವಿನಿ, ಮಕ್ಕಳ ತಜ್ಞರಾದ ಡಾ. ಕನ್ಯಾ, ಆಹಾರ ತಜ್ಞರಾದ ಪವಿತ್ರ, ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕ ಎಸ್.ಜ್ಞಾನಶಂಕರ್, ಆಸ್ಪತ್ರೆಯ ರೋಗಿಯ ಪರಿಚಾರಕರು ಉಪಸ್ಥಿತರಿದ್ದರು.

ಮೈಸೂರು, ಮಾ.25- ಮೈಸೂರಿನ ಸಿಗ್ಮಾ ಆಸ್ಪತ್ರೆಯಲ್ಲಿ ಕ್ಷಯ ರೋಗ ಕುರಿತು ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಆಸ್ಪತ್ರೆಯ ತಜ್ಞ ವೈದ್ಯರಾದ ಡಾ.ರಾಕೇಶ್ ರಾಜೇ ಅರಸ್ ಮಾತನಾಡುತ್ತ, ಕ್ಷಯ ರೋಗ ಶ್ವಾಸಕೋಶಕ್ಕೆ ಅಲ್ಲ ಕರುಳು, ಮೆದುಳಿಗೂ ಬರಬಹುದು. ಕ್ಷಯ ರೋಗ ಬಂದಾಗ ಕನಿಷ್ಠ 1ರಿಂದ 2 ತಿಂಗಳವರೆಗೆ ರೋಗಿಯನ್ನು ಪ್ರತ್ಯೇಕವಾಗಿರಿಸಿ, ಅವರ ವಸ್ತುಗಳನ್ನು ಮನೆಯವರಿಂದ ಅಂತರದಲ್ಲಿರಿಸಿ, ರೋಗ ಹರಡುವುದನ್ನು ತಡೆಗಟ್ಟುವುದು ಉತ್ತಮ. ಅಲ್ಲದೆ, ಅರಿವು, ಜಾಗೃತಿ ಮತ್ತು ಸುರಕ್ಷೆ ಅಗತ್ಯ ಎಂದರು.

ಆಸ್ಪತ್ರೆಯ ಮಕ್ಕಳ ತಜ್ಞರಾದ ಡಾ.ಕನ್ಯ ಮಾತನಾಡಿ, ಮಕ್ಕಳಲ್ಲಿ ಬರುವ ಕ್ಷಯ ರೋಗದ ಬಗ್ಗೆ ಅರಿವು ಮೂಡಿಸಿದರು. 15 ದಿವಸದಲ್ಲಿ ಕೆಮ್ಮು, ರಾತ್ರಿ ಜ್ವರ ವಾಸಿ ಆಗದಿದ್ದಲ್ಲಿ ತಜ್ಞ ವೈದ್ಯರ ಸಲಹೆ ಪಡೆಯಬೇಕು ಎಂದು ಹೇಳಿದರು.

ಪ್ರಸೂತಿ ತಜ್ಞರಾದ ಡಾ.ತೇಜಸ್ವಿನಿ ಅವರು ಗರ್ಭಿಣಿಯರಲ್ಲಿ ಬರುವ ಕ್ಷಯ ರೋಗದ ಸಮಸ್ಯೆ ಕುರಿತು ಮಾತನಾಡಿದರು. ಆಹಾರ ತಜ್ಞರಾದ ಪವಿತ್ರ, ಕ್ಷಯರೋಗಿಗಳ ಕುರಿತು ಕೆಲವು ಆಹಾರ ಪದ್ಧತಿಯ ಬಗ್ಗೆ ತಿಳಿಸುತ್ತಾ, ಹೆಚ್ಚಿನ ಪ್ರೋಟಿನ್, ವಿಟಮಿನ್, ಖನಿಜ ಸಮತೋಲನ ಆಹಾರ ಸೇವಿಸಬೇಕು ಎಂದು ತಿಳಿಸಿದರು.

ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕ ಎಸ್.ಜ್ಞಾನಶಂಕರ್ ಮಾತನಾಡಿ, ವಿಶ್ವ ಕ್ಷಯರೋಗ ದಿನ 2026ರ ಥೀಮ್ 'ಹೌದು ! ನಾವು ಟಿಬಿಯನ್ನು ಕೊನೆಗೊಳಿಸಬಹುದು'. ಇದರ ಬಗ್ಗೆ ಜನರಿಗೆ ತಿಳಿಸಬೇಕು. ಮೂರು ನಿಮಿಷಕ್ಕೆ ಜಗತ್ತಲ್ಲಿ ಒಬ್ಬರು ಈ ರೋಗಕ್ಕೆ ಆಹುತಿ ಆಗುತ್ತಿದ್ದಾರೆ. ಇದು ಸಾಂಕ್ರಾಮಿಕ ರೋಗವಾದ್ದರಿಂದ ಆಸ್ಪತ್ರೆಯ ವೈದ್ಯರಿಂದ ಸಲಹೆ, ಪರೀಕ್ಷೆ ಮತ್ತು ಚಿಕಿತ್ಸೆ ಪಡೆದುಕೊಳ್ಳುವುದು. ಚಿಕಿತ್ಸೆಗಿಂತ ಮುನ್ನೆಚ್ಚರಿಕೆಗಳು ಉತ್ತಮ ಎಂದು ತಿಳಿಸಿದರು.

ಕರ್ನಾಟಕ ಸಾಹಿತ್ಯ ವಿದ್ಯಾರತ್ನ ಪ್ರಶಸ್ತಿ



ಮೈಸೂರು, ಮಾ.25-ಇತ್ತೀಚೆಗೆ ಬೆಂಗಳೂರಿನ ಕೆಂಗೇರಿ ಸಮೀಪದ ದರ್ಶನ್ ಕಾಲೇಜು ಸಭಾಂಗಣದಲ್ಲಿ ನಡೆದ ಎ.ಜಿ.ಎಸ್ ಎಜುಕೇಶನ್ ಚಾರಿಟಬಲ್ ಟ್ರಸ್ಟ್‌ನ 5ನೇ ವಾರ್ಷಿಕೋತ್ಸವ ಸಮಾರಂಭದಲ್ಲಿ ಡಾ.ಚಾ.ನಾ. ಯಶವಂತ ಕುಮಾರ್ ಅವರಿಗೆ 2026ನೇ ಸಾಲಿನ 'ಕರ್ನಾಟಕ ಸಾಹಿತ್ಯ ವಿದ್ಯಾರತ್ನ ಪ್ರಶಸ್ತಿ' ನೀಡಿ ಗೌರವಿಸಲಾಯಿತು. ಮೈಸೂರಿನ ಜಯಲಕ್ಷ್ಮೀಪುರಂ ಸಂತ ಜೋಸೆಫರ ಪ್ರಥಮ ದರ್ಜೆ ಕಾಲೇಜಿನಲ್ಲಿ ಕನ್ನಡ ಸಹಾಯಕ ಪ್ರಾಧ್ಯಾಪಕರಾಗಿರುವ ಡಾ.ಚಾ.ನಾ.ಯಶವಂತ ಕುಮಾರ್‌ಗೆ ಸಮಾಜ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಸಲ್ಲಿಸಿರುವ ಗಣನೀಯ ಸೇವೆ ಗುರುತಿಸಿ ಈ ಪ್ರಶಸ್ತಿ ಸಂದಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ ಗುರುವಾರ 26 ಮಾರ್ಚ್ 2026

ಅನ್ಯ ರಾಜ್ಯದಿಂದ ತಂದು ಮನ ಬಂದಂತೆ ಮಾರ್ಪಾಡು ಮಾಡಿಸಿದ್ದ ಮಹೀಂದ್ರ ಜೀಪು; ಎಫ್‌ಸಿ ಆಗಿರದ ಬಸ್, ನೋಂದಣಿ ಆಗಿರದ ಕಾರು ಜಪ್ತಿ

ಮೈಸೂರು,ಮಾ.25(ಎಂಕೆ)– ಸಾರಿಗೆ ನಿಯಮ ಉಲ್ಲಂಘಿಸಿ ನೈಜ ಸ್ವರೂಪ ಬದಲಿಸಿ ಮಾರ್ಪಾಡು ಮಾಡಿಸಿದ್ದ ಮಹೀಂದ್ರ ಜೀಪ್ ಸೇರಿದಂತೆ ಎರಡು ಸ್ಕೂಲ್ ಬಸ್ ಹಾಗೂ ಮೂರು ಕಾರುಗಳನ್ನು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ.

ಮೈಸೂರಿನ ಬಲ್ಲಾಳ ವೃತ್ತದ ಸಮೀಪದಲ್ಲಿರುವ ಪ್ರಾದೇಶಿಕ ಸಾರಿಗೆ ಕಚೇರಿಯ(ಆರ್‌ಟಿಒ–ಪಶ್ಚಿಮ) ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ ರಾಜ್‌ಕುಮಾರ್ ನೇತೃತ್ವದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಎಫ್‌ಸಿ (ವಾಹನ ಫಿಟ್‌ನೆಸ್ ಪ್ರಮಾಣಪತ್ರ) ಇಲ್ಲದ ಎರಡು ಸ್ಕೂಲ್ ಬಸ್(KA-09-C-2638 ಮತ್ತು KA-68-0360), ಮಾರಾಟ ಮಾಡಲಾಗಿದ್ದ ನೋಂದಣಿಯಾಗಿರದ ಮಹೀಂದ್ರ ಎಸ್‌ಯುವಿ–ಎಕ್ಸ್7ಟಿ, ತೆರಿಗೆ ಪಾವತಿಸದೆ ಬಳಕೆ ಮಾಡುತ್ತಿದ್ದ ಹೊರ ರಾಜ್ಯದ ಎರಡು ಕಾರು(ಟೊಯೋಟಾ ಫಾರ್ಚೂನರ್–AP-39-BY-1111 ಮತ್ತು ಇನ್ನೋವಾ–HR-70-D-9875)ಗಳು ಹಾಗೂ ಮಾರ್ಪಾಡು ಮಾಡಿಸಿದ್ದ ಮಹೀಂದ್ರ ಜೀಪ್(PB-80-0849)ಅನ್ನು ವಶಪಡಿಸಿಕೊಳ್ಳಲಾಗಿದೆ.

ಚಾಮರಾಜನಗರದ ಬಿಕಾಂ ವಿದ್ಯಾರ್ಥಿಯೋರ್ವ ಪಂಜಾಬ್‌ನಿಂದ ಮಹೀಂದ್ರ ಜೀಪ್ ಖರೀದಿಸಿ, ಸಾರಿಗೆ ನಿಯಮಗಳ ಉಲ್ಲಂಘಿಸಿ ಜೀಪ್‌ನ ನೈಜ ಸ್ವರೂಪವನ್ನು ಬದಲಿಸಿ, ಮಾರ್ಪಾಡು ಮಾಡಿಸಿಕೊಂಡಿದ್ದು, ಅದರ ನಾಲ್ಕು ಟೈರ್‌ಗಳು 33 ಸೆಂಟಿ ಮೀಟರ್‌ನಷ್ಟು ಹೆಚ್ಚಿನ ಅಗಲ ಮತ್ತು ಎತ್ತರವಿದ್ದು, ಸಂಚರಿಸುವ ವೇಳೆ ಇತರೆ ವಾಹನಗಳಿಗೆ ಜೀಪ್‌ನಿಂದ ತೊಂದರೆಯಾಗಲಿದೆ. ಅಲ್ಲದೆ ಎಲ್‌ಇಡಿ ಹೆಡ್‌ಲೈಟ್ ಹಾಕಿಸಿಕೊಂಡಿದ್ದು, ಲೈಟ್ ಆನ್ ಮಾಡಿದರೆ ಬಾಸ್ ಎಂಬ ಇಂಗ್ಲಿಷ್ ಅಕ್ಷರಗಳು ಮುಂದೆ ಸಾಗುವ ವಾಹನದ ಮೇಲೆ ಕಾಣುವಂತೆ ಮಾರ್ಪಾಡು ಮಾಡಿಸಿಕೊಂಡಿದ್ದಾನೆ ಎಂದು ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ ರಾಜ್‌ಕುಮಾರ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಬೇರೆ ರಾಜ್ಯದ ವಾಹನಗಳನ್ನು ರಾಜ್ಯಕ್ಕೆ ತಂದು, ವರ್ಷದ ನಂತರವೂ ಇಲ್ಲಿಯೇ ಬಳಕೆ ಮಾಡುತ್ತಿದ್ದಾರೆ. ವಾಸ್ತವವಾಗಿ ತಂದ ತಕ್ಷಣವೇ ಸಾರಿಗೆ ನಿಯಮಾನುಸಾರ ತೆರಿಗೆ ಪಾವತಿಸಬೇಕು. ಆದರೆ, ತೆರಿಗೆ ಪಾವತಿಸದೆ ಬಳಕೆಯಲ್ಲಿದ್ದ ಟೊಯೋಟಾ ಫಾರ್ಚೂನರ್ ಮತ್ತು ಇನ್ನೋವಾ ಕಾರುಗಳನ್ನು ವಶಕ್ಕೆ ಪಡೆಯಲಾಗಿದೆ. ಅಲ್ಲದೆ ನೋಂದಣಿಯಾಗದೆ ಮಾರಾಟ ಮಾಡಲಾಗಿದ್ದ ಮಹೀಂದ್ರ ಎಸ್‌ಯುವಿ–ಎಕ್ಸ್7ಟಿ ಕಾರು ಈಗಾಗಲೇ 3330 ಕಿ.ಮೀ. ಓಡಿಸಲಾಗಿದೆ ಎಂದರು.



ಮಾರ್ಪಾಟು ಮಾಡಿಸಿರುವ ಮಹೀಂದ್ರಾ ಜೀಪ್ ಕಾಣಬಹುದು

138 ಸ್ಕೂಲ್ ಬಸ್‌ಗಳು ಅನ್‌ಫಿಟ್

ಮೈಸೂರಿನಲ್ಲಿರುವ ಖಾಸಗಿ ಶಾಲಾ–ಕಾಲೇಜುಗಳ ಬಸ್‌ಗಳಲ್ಲಿ ಬರೋಬ್ಬರಿ 138 ಬಸ್‌ಗಳಿಗೆ ಎಫ್‌ಸಿ(ವಾಹನ ಫಿಟ್‌ನೆಸ್ ಪ್ರಮಾಣಪತ್ರ) ಇಲ್ಲ. ನೋಟಿಸ್ ಮೇಲೆ ನೋಟಿಸ್ ಕೊಟ್ಟರೂ ಶಾಲೆಗಳಿಂದ ಯಾವುದೇ ಪ್ರತಿಕ್ರಿಯೆ ಇಲ್ಲ. ಆದ್ದರಿಂದ ಎಫ್‌ಸಿ ಇಲ್ಲದ ಬಸ್‌ಗಳ ತಪಾಸಣೆ ನಡೆಸಲಾಗುತ್ತಿದ್ದು, ಮೈಸೂರಿನ ವಿಜಯನಗರದಲ್ಲಿ ಮಂಗಳವಾರ ಎಫ್‌ಸಿ ಇಲ್ಲದ ಎರಡು ಬಸ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ.

–ರಾಮಚಂದ್ರ ಪ್ರಾದೇಶಿಕ ಸಾರಿಗೆ ಅಧಿಕಾರಿ

ಬರಗೂರು ದೃಷ್ಟಿ ಬಂಡಾಯವಾದರೂ ಅವರ ಹೃದಯ ಮಾತ್ರ ಅತೀ ಸೂಕ್ಷ್ಮ

'ಬರಗೂರು–ಮಹತ್ವದ ಬೇರು' ವಿಚಾರ ಸಂಕಿರಣದಲ್ಲಿ ನಟಿ ಭಾವನ ರಾಮಣ್ಣ ಅಭಿಮತ

ಮೈಸೂರು, ಮಾ.25 (ಎಂಟಿವೈ)–ಸಾಹಿತಿ ಬರಗೂರು ರಾಮಚಂದ್ರಪ್ಪ ಅವರ ಮಾತು ಅಥವಾ ದೃಷ್ಟಿಯಲ್ಲಿ ಬಂಡಾಯವಿರಬಹುದು. ಆದರೆ ಅವರ ಹೃದಯ ಅತ್ಯಂತ ಸೂಕ್ಷ್ಮತೆಯಿಂದ ಕೂಡಿದೆ ಎಂದು ನಟಿ ಭಾವನ ರಾಮಣ್ಣ ತಿಳಿಸಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಹಾಗೂ ದಂಡಿನ ರಾಜಪ್ಪ ಪರಿವಾರ ಪ್ರತಿಷ್ಠಾನ ವತಿಯಿಂದ ಬಿ.ಎಂ.ಶ್ರೀ ಸಭಾಂಗಣದಲ್ಲಿ ಬುಧವಾರ ಆಯೋಜಿಸಿದ್ದ 'ಬರಗೂರು: ಮಹತ್ವದ ಬೇರು' ಸೌಹಾರ್ದ ಬದುಕಿನ ಆಶಯಗಳ ಚಿಂತನ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದ ಅವರು, ಬರಗೂರು ರಾಮಚಂದ್ರಪ್ಪ ಬಹುತ್ವವನ್ನೇ ಉಸಿರಾಗಿಸಿಕೊಂಡಿದ್ದಾರೆ. ಅವರಲ್ಲಿ ಭಾವಕೋಶ ಇರುವುದರಿಂದಲೇ ಹೆಚ್ಚಿನ ಕ್ಷೇತ್ರಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳಲು ಸಾಧ್ಯವಾಗಿದೆ. ಬರಗೂರು ರಾಮಚಂದ್ರಪ್ಪ ಹೇಳಿದಂತೆ ಯಾವುದೇ ಪುರುಷ ಕವಿ, ಬರಹಗಾರರಾಗಲಿ ಅವರಲ್ಲಿ ಹೆಂಗರುಳು ಇರಬೇಕು. ಹೆಣ್ಣು ಕರುಳು ಇದ್ದಾಗ ಮಾತ್ರ ಭಾಷೆ, ದೇಶ, ಕುಟುಂಬ ಸೇರಿದಂತೆ ಪ್ರತಿಯೊಂದನ್ನು ಕರುಣೆಯಿಂದ ನೋಡಬಹುದು. ಒಂದು ಚಿಕ್ಕ ಮಾತಿಗೂ ಸಹ ಹೆಣ್ಣು ಭಾವನಾತ್ಮಕವಾಗುತ್ತಾಳೆ ಎಂದರು.

ಪ್ರಸ್ತುತ ಪುರುಷ ಪ್ರಧಾನ ಸಮಾಜ ಇದೆ. ಆದರೆ ಪುರುಷರ ದೃಷ್ಟಿಯಿಂದ ನೋಡುವ ಸಮಾಜ ಬೇರೆ ಇದೆ. ಅದರಲ್ಲಿ ಒಂದು ಹೆಣ್ಣು ಕರುಳನ್ನು ಸೇರಿಸಿ ಅದರ ಮೂಲಕ ಸಮಾಜವನ್ನು ನೋಡಬೇಕು. ಹೆಣ್ಣಿಗೆ ಪ್ರತಿ ಪದ, ಜೀವ, ಭಾಷೆ, ದೇಶ ಎಲ್ಲದರೊಂದಿಗೂ ಕರುಳು ಬಳ್ಳಿಯ ಸಂಬಂಧವಿದೆ. ಅವರ ಸಿನಿಮಾದ ಕಥೆಗಳು ಸ್ತ್ರೀ ಸಂವೇದನೆಯನ್ನೇ ಹೇಳುತ್ತವೆ. ಭಾಗೀರಥಿ ಸಿನಿಮಾ ಕೆರೆಗೆ ಹಾರ ಪದ್ಯದಿಂದ ಸ್ಫೂರ್ತಿ ಪಡೆದಿದ್ದರೂ ಬರಗೂರರ ವಿಮರ್ಶಾ ವಿಸ್ತರಣೆ ಎಲ್ಲರನ್ನೂ ಸೆಳೆಯುತ್ತದೆ. ಬರಗೂರು ರಾಮಚಂದ್ರಪ್ಪ ಅವರು ರಾಜಕುಮಾರ್ ಅವರ ಒಡನಾಡಿಗಳಾಗಿದ್ದರು. ಸಾಹಿತ್ಯ, ಸಿನಿಮಾ, ಹೋರಾಟ ಸೇರಿದಂತೆ ಎಲ್ಲ ಜ್ಞಾನ ಭಂಡಾರ ಆಗಿದ್ದಾರೆ. ಭೂತಕಾಲ ವರ್ತಮಾನದ ಕೊಂಡಿಯಾಗಿದ್ದಾರೆ ಎಂದು ಬಣ್ಣಿಸಿದರು.

ಬರಗೂರು ರಾಮಚಂದ್ರಪ್ಪ ಅವರು ಮಾಡಿರುವ ಅಷ್ಟು ಸಿನಿಮಾ, ಅವರ ಕಥೆಗಳಲ್ಲಿ ಹೆಣ್ಣಿನ ಮನಸ್ಸಿನ ದ್ವಂದ್ವ, ಹೆಣ್ಣಿನ ಒಳ ಮನಸ್ಸಿನ ಭಾವನೆಗಳನ್ನು ಹೇಳುತ್ತದೆ. ಇದರಲ್ಲಿ ಪ್ರಮುಖವಾದದ್ದು ಭಾಗೀರಥಿ. ಭಾಗೀರಥಿಯ ಜೀವನದಲ್ಲಿರುವ ಆಸೆಗಳು, ಕನಸುಗಳು ಅಂಕುರಗೊಳ್ಳದಿರುವ ಸಮಯದಲ್ಲೇ ತಾನು ಹೊರಟುಹೋಗುವುದನ್ನು ತಾನೆ ನೋಡುತ್ತಾಳೆ. ಭಾಗೀರಥಿ ತನ್ನ ಕಥೆಯನ್ನು ತನ್ನ ಸ್ನೇಹಿತರ ಬಳಿ, ತಂದೆ, ತಾಯಿ ಗಂಡನ ಬಳಿಯೂ ಹೇಳಿಕೊಳ್ಳುತ್ತಾಳೆ. ಅವಳಿಗೆ ಎಲ್ಲಿಯೂ ಉತ್ತರ ಸಿಗದ ಕಾರಣ ತ್ಯಾಗಕ್ಕೆ ಮುಂದಾಗುತ್ತಾಳೆ ಎಂದು ಹೇಳಿದರು.

ನಾವೆಲ್ಲರೂ ಅದೃಷ್ಟವಂತರು. ಕರ್ನಾಟಕದಲ್ಲಿ ಉತ್ತಮ ಶಿಕ್ಷಣ ಪಡೆಯಬಹುದು, ಹೋರಾಟ ಮಾಡಬಹುದು, ನಮಗೆ ಅಂದುಕೊಂಡಂತಹ ಜೀವನ ನಡೆಸಲು ಅವಕಾಶ ಇದೆ. ಇಂದಿಗೂ ನಮ್ಮ ಭಾರತದಲ್ಲಿ ಎಷ್ಟೋ ಕಡೆ ಇಂತಹ ಅವಕಾಶಗಳನ್ನು ನೋಡಲು ಆಗುವುದಿಲ್ಲ. ಇದನ್ನು ನಾವು ಅರ್ಥ ಮಾಡಿಕೊಂಡು ನಾವು ರಾಜ್ಯಕ್ಕೆ ಏನನ್ನು ಕೊಡುಗೆ ನೀಡಬಹುದು ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ವಹಿಸಿದ್ದರು. ಸಾಹಿತಿ ಬರಗೂರು ರಾಮಚಂದ್ರಪ್ಪ, ಮುಖ್ಯ ಅತಿಥಿಗಳಾಗಿ ಕುಲಸಚಿವೆ ಎಂ.ಕೆ.ಸವಿತಾ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕಿ ಪ್ರೊ.ಎನ್.ಕೆ.ಲೋಲಾಕ್ಷಿ, ದಂಡಿನ ರಾಜಪ್ಪ ಪರಿವಾರ ಪ್ರತಿಷ್ಠಾನದ ಖಜಾಂಚಿ ಲತಾ ಪಾಲ್ಗೊಂಡಿದ್ದರು. ಡಾ.ಕೆ.ಎಲ್.ದಿವ್ಯಾ ನಿರೂಪಣೆ ಮಾಡಿದರು.



ಮೈಸೂರು ವಿವಿ ಕನ್ನಡ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ನಡೆದ 'ಬರಗೂರು: ಮಹತ್ವದ ಬೇರು' ಸೌಹಾರ್ದ ಬದುಕಿನ ಆಶಯಗಳ ಚಿಂತನ ವಿಚಾರ ಸಂಕಿರಣವನ್ನು ನಟಿ ಭಾವನ ರಾಮಣ್ಣ ಉದ್ಘಾಟಿಸಿದರು.

ಮಾ.29, ನಿರ್ಗಮನ ಪಥಸಂಚಲನ

ಮೈಸೂರು, ಮಾ.25– ಕರ್ನಾಟಕ ಪೊಲೀಸ್ ಅಕಾಡೆಮಿ ವತಿಯಿಂದ 46 ನೇ ತಂಡದ ಪೊಲೀಸ್ ಉಪ ನಿರೀಕ್ಷಕರು(ಸಿವಿಲ್) ಪ್ರಶಿಕ್ಷಣಾರ್ಥಿಗಳ ನಿರ್ಗಮನ ಪಥ ಸಂಚಲನ ಕಾರ್ಯಕ್ರಮವನ್ನು ಮಾ.29ರಂದು ಬೆಳಗ್ಗೆ 8 ಗಂಟೆಗೆ ಪೊಲೀಸ್ ಅಕಾಡೆಮಿಯ ಕವಾಯತು ಮೈದಾನದಲ್ಲಿ ಆಯೋಜಿಸಲಾಗುತ್ತದೆ.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಆಗಮಿಸಲಿದ್ದಾರೆ. ಡಾ.ಜಿ.ಪರಮೇಶ್ವರ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ರಾಜ್ಯದ ಪೊಲೀಸ್ ಮಹಾನಿರ್ದೇಶಕ, ಪೊಲೀಸ್ ಪಡೆ ಮುಖ್ಯಸ್ಥ ಡಾ.ಎಂ.ಎ.ಸಲೀಂ, ತರಬೇತಿ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ದೇವಜ್ಯೋತಿ ರೇ, ಪೊಲೀಸ್ ಅಕಾಡೆಮಿ ಉಪ ಪೊಲೀಸ್ ಮಹಾನಿರೀಕ್ಷಕರು ಮತ್ತು ನಿರ್ದೇಶಕ ಎನ್.ವಿಷ್ಣುವರ್ಧನ ಹಾಗೂ ಕರ್ನಾಟಕ ಪೊಲೀಸ್ ಅಕಾಡೆಮಿ ಉಪನಿರ್ದೇಶಕ ಚೆನ್ನಬಸವಣ್ಣ ಎಸ್.ಎಲ್ ಕಾರ್ಯಕ್ರಮದಲ್ಲಿ ಉಪಸ್ಥಿತರಿರಲಿದ್ದಾರೆ.

ನಾಳೆ ಪೂಜಾ ಕಾರ್ಯಕ್ರಮ

ಮೈಸೂರು, ಮಾ.25–ಮೈಸೂರಿನ ಕೆ.ಆರ್. ಮೊಹಲ್ಲಾದ ಕುರುಹಿನಶೆಟ್ಟಿ ಶ್ರೀರಾಮ ಸೇವಾ ಸಂಘದ ವತಿಯಿಂದ ಮಾ.27ರಂದು ಶುಕ್ರವಾರದಂದು ಬೆಳಗ್ಗೆ 10 ಗಂಟೆಗೆ ಕುರುಹಿನಶೆಟ್ಟಿ ಶ್ರೀರಾಮ ಸೇವಾ ಮಂದಿರದಲ್ಲಿ ಶ್ರೀ ರಾಮನವಮಿಯ ಪೂಜಾ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ. ಹಾಗೆಯೇ ಮಾ.29ರಂದು ಭಾನುವಾರ ಮಧ್ಯಾಹ್ನ 12.30ಕ್ಕೆ ಅನ್ನಸಂತರ್ಪಣೆ ಏರ್ಪಡಿಸಲಾಗಿದೆ.

ಲಾಗೈಡ್ ವೆಂಕಟೇಶ್ ಹುಟ್ಟುಹಬ್ಬ: ಅರ್ಥಪೂರ್ಣ ಆಚರಣೆ



ಮೈಸೂರಿನ ಸರಸ್ವತಿಪುರಂನಲ್ಲಿರುವ ಹಿರಿಯ ನಾಗರಿಕರ ಆಶ್ರಮ ನಿವಾಸಿಗಳಿಗೆ ಅಗತ್ಯವಿರುವ ದಿನಸಿ ಪದಾರ್ಥಗಳನ್ನು ವಿತರಿಸುವ ಮೂಲಕ ಹಿರಿಯ ವಕೀಲರೂ ಆದ 'ಲಾಗೈಡ್' ಕನ್ನಡ ಕಾನೂನು ಮಾಸಪತ್ರಿಕೆಯ ಗೌರವ ಸಂಪಾದಕರಾದ ಹೆಚ್.ಎನ್.ವೆಂಕಟೇಶ್ ಅವರ ಹುಟ್ಟುಹಬ್ಬವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಮೈಸೂರು, ಮಾ.25– ಹಿರಿಯ ವಕೀಲರೂ ಆದ 'ಲಾಗೈಡ್' ಕನ್ನಡ ಕಾನೂನು ಮಾಸಪತ್ರಿಕೆಯ ಗೌರವ ಸಂಪಾದಕರಾದ ಹೆಚ್.ಎನ್.ವೆಂಕಟೇಶ್ ಅವರ ಹುಟ್ಟುಹಬ್ಬವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ನಗರದ ಸರಸ್ವತಿಪುರಂನಲ್ಲಿರುವ ಹಿರಿಯ ನಾಗರಿಕರ ಆಶ್ರಮಕ್ಕೆ ಭೇಟಿ ನೀಡಿದ ಅವರು, ಅಲ್ಲಿನ ನಿವಾಸಿಗಳಿಗೆ ಅಗತ್ಯವಿರುವ ದಿನಸಿ ಪದಾರ್ಥಗಳನ್ನು ವಿತರಿಸಿದರು. ಅಕ್ಕಿ, ಬೇಳೆ, ಗೋಧಿ, ಅಡುಗೆ ಎಣ್ಣೆ ಸೇರಿದಂತೆ ಹಲವು ಅವಶ್ಯಕ ವಸ್ತುಗಳನ್ನು ನೀಡಲಾಯಿತು. ಈ ವೇಳೆ ಆಶ್ರಮದಲ್ಲಿದ್ದ ಹಿರಿಯರಿಗೆ ಸ್ವತಃ ಹೆಚ್.ಎನ್. ವೆಂಕಟೇಶ್ ಸಿಹಿ ಹಂಚಿ ಸಂತಸ ಹಂಚಿಕೊಂಡರು. ಕಾರ್ಯಕ್ರಮದಲ್ಲಿ ಹಿರಿಯ ವಕೀಲರು, ಉದ್ಯಮಿಗಳಾದ ಎಂ.ಡಿ. ಹರೀಶ್‌ಕುಮಾರ್ ಹೆಗ್ಡೆ, ವಕೀಲರಾದ ಬಿ.ಪಿ.ರಾಜೇಶ್, ವಿನಯ್‌ಕುಮಾರ್, ಜಯಶಂಕರ್ ಎಸ್., ನೇತ್ರಾವತಿ, ಸಿ.ಎಸ್.ಲೋಕೇಶ್, ಗಿರೀಶ್, ದುರ್ಗಾ ಪ್ರಸಾದ್, ಪ್ರವೀಣ್‌ಕುಮಾರ್ ಇನ್ನಿತರರು ಉಪಸ್ಥಿತರಿದ್ದರು.

ಶ್ರೀರಾಂಪುರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಕೋಟೆಹುಂಡಿ ಮಹದೇವು ಆಯ್ಕೆ



ಮೈಸೂರು ತಾಲೂಕು ಕಸಬಾ ಹೋಬಳಿ ಶ್ರೀರಾಂಪುರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಕೋಟೆಹುಂಡಿ ಮಹದೇವು, ಉಪಾಧ್ಯಕ್ಷರಾಗಿ ಲಿಂಗಾಂಬುಧಿಪಾಳ್ಯದ ಆರ್.ಮಹೇಶ್ ಅವಿರೋಧವಾಗಿ ಆಯ್ಕೆಯಾದರು.

ಮೈಸೂರು: ಮೈಸೂರು ತಾಲೂಕು ಕಸಬಾ ಹೋಬಳಿಯ ಶ್ರೀರಾಂಪುರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಕೋಟೆಹುಂಡಿ ಮಹದೇವು, ಉಪಾಧ್ಯಕ್ಷರಾಗಿ ಲಿಂಗಾಂಬುಧಿಪಾಳ್ಯದ ಆರ್.ಮಹೇಶ್‌ರವರು ಅವಿರೋಧವಾಗಿ ಆಯ್ಕೆಯಾದರು.

ಬುಧವಾರ ಸಂಘದ ಕಚೇರಿಯಲ್ಲಿ ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆ ನಡೆಯಿತು. 12 ನಿರ್ದೇಶಕರ ಪೈಕಿ ಅಧ್ಯಕ್ಷ ಸ್ಥಾನಕ್ಕೆ ಕೋಟೆಹುಂಡಿ ಮಹದೇವು, ಉಪಾಧ್ಯಕ್ಷ ಸ್ಥಾನಕ್ಕೆ ಲಿಂಗಾಂಬುಧಿಪಾಳ್ಯ ಆರ್.ಮಹೇಶ್ ಅವರಿಬ್ಬರೇ ನಾಮಪತ್ರ ಸಲ್ಲಿಸಿದ್ದರಿಂದ ಚುನಾವಣಾಧಿಕಾರಿಗಳು ಅವಿರೋಧ ಆಯ್ಕೆ ಘೋಷಣೆ ಮಾಡಿದರು.

ಬಳಿಕ ಸಂಘದ ವತಿಯಿಂದ ನೂತನ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಕೋಟೆಹುಂಡಿ ಮಹದೇವು ಅವರ ಬೆಂಬಲಿಗ ನಿರ್ದೇಶಕರಾದ ಉದ್ಬೂರು ಗೋವಿಂದ ನಾಯಕ, ಜಯಮ್ಮ, ಪ್ರೇಮ ಮಹದೇವು, ಶ್ರೀರಾಂಪುರದ ಎಲ್.ಜಿ.ಸುರೇಶ್, ರಮೇಶ್ ಮಾಯಣ್ಣ, ಹೆಚ್.ಪುಷ್ಪಾಂಜಲಿ, ನಾಗರಾಜು ಅವರನ್ನು ಅಭಿನಂದಿಸಿದರು.

ಶ್ರೀರಾಂಪುರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಕಚೇರಿ ಮುಂದೆ ಕೋಟೆಹುಂಡಿ ಮಹದೇವು ಬೆಂಬಲಿಗರು ಹಾಗೂ ಚಾಮುಂಡೇಶ್ವರಿ ಕ್ಷೇತ್ರದ ಜೆಡಿಎಸ್ ಕಾರ್ಯಕರ್ತರು ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು.

ನೂತನ ಅಧ್ಯಕ್ಷರು, ಉಪಾಧ್ಯಕ್ಷರನ್ನು ಕೋಟೆಹುಂಡಿ ಮಹದೇವು ಅವರ ಬೆಂಬಲಿಗರು ಮತ್ತು ಅಭಿಮಾನಿಗಳು ಬೃಹತ್ ಗಾತ್ರದ ಗುಲಾಬಿ, ಸುಗಂಧ ರಾಜ, ಮಲ್ಲಿಗೆ ಹೂವಿನ ಹಾರಗಳನ್ನು ಹಾಕಿ, ಪೇಟ ತೊಡಿಸಿ, ಶಾಲು ಹಾಕಿ ಸನ್ಮಾನಿಸಿ ಅಭಿನಂದಿಸಿ ಶುಭ ಕೋರಿದರು. ಧನಗಳ್ಳಿ, ಗೋಪಾಲಪುರ, ದೊಡ್ಡಮಾರಗೌಡನಹಳ್ಳಿ, ಉದ್ಬೂರು, ಹಾರೋಹಳ್ಳಿ, ಜಯಪುರ, ಸಿಂಧುವಳ್ಳಿ, ದೂರ, ಬೀರಿಹುಂಡಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಮುಖಂಡರು, ಶ್ರೀರಾಂಪುರ ಪಟ್ಟಣ ಪಂಚಾಯಿತಿ ವ್ಯಾಪ್ತಿ ಹಾಗೂ ಚಾಮುಂಡೇಶ್ವರಿ ಕ್ಷೇತ್ರದ ವಿವಿಧ ಗ್ರಾಮಗಳ ಮುಖಂಡರು ಭಾಗವಹಿಸಿ ಶುಭಕೋರಿದರು. ಚುನಾವಣಾಧಿಕಾರಿಯಾಗಿ ಸಹಕಾರ ಇಲಾಖೆ ಅಧೀಕ್ಷಕ ರಘು ಹಾಗೂ ಸಂಘದ ಕಾರ್ಯ ನಿರ್ವಹಣಾಧಿಕಾರಿ ಎಂ.ರವಿಕುಮಾರ್ ಕಾರ್ಯನಿರ್ವಹಿಸಿದರು.

ಒಳ ಮೀಸಲಾತಿ ಜಾರಿಗೆ ಆಗ್ರಹಿಸಿ ಕದಸಂಸ, ಆರ್‌ಪಿಐ ಪ್ರತಿಭಟನೆ

ಮೈಸೂರು, ಮಾ.25(ಎಂಕೆ)– ಸರ್ಕಾರಿ ಉದ್ಯೋಗದಲ್ಲಿ ಒಳ ಮೀಸಲಾತಿ ಜಾರಿಗೆ ಆಗ್ರಹಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿ(ಕದಸಂಸ) ಹಾಗೂ ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ(ಆರ್‌ಪಿಐ) ವತಿಯಿಂದ ಬುಧವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಸಿದ್ದಾರ್ಥನಗರದಲ್ಲಿರುವ ಜಿಲ್ಲಾಧಿಕಾರಿ ಕಚೇರಿ ಎದುರು ಜಮಾವಣೆಗೊಂಡ ಪ್ರತಿಭಟನಾಕಾರರು ಒಳ ಮೀಸಲಾತಿ ಇಲ್ಲದೆ 56,432 ಉದ್ಯೋಗ ನೇಮಕಾತಿಗೆ ಹೊರಡಿಸಿರುವ ಸುತ್ತೋಲೆಯನ್ನು ಕೂಡಲೇ ಹಿಂಪಡೆಯಬೇಕು. ಇಲ್ಲವೆ ಶೇ.15ರಷ್ಟು ಮೀಸಲಾತಿಯಲ್ಲಿ ನೇಮಕಾತಿ ನಡೆಸಬೇಕು ಎಂದು ಒತ್ತಾಯಿಸಿದರು.

ವಿವಿಗಳನ್ನು ಒಂದು ಘಟಕವಾಗಿಸಿ ಉದ್ಯೋಗ ನೇಮಕಾತಿ ನಡೆಸುವ ಪ್ರಯತ್ನ ಮಾಡಬೇಕು. ಅಲೆಮಾರಿ, ಅರೆ ಅಲೆಮಾರಿ ಸಮುದಾಯಗಳಿಗೆ ಶೇ.1ರಷ್ಟು ಪ್ರತ್ಯೇಕ ಮೀಸಲಾತಿ ನೀಡಬೇಕು. ಪರಿಶಿಷ್ಟ ಜಾತಿಗೆ ಶೇ.17 ಮತ್ತು ಪರಿಶಿಷ್ಟ ಪಂಗಡಕ್ಕೆ ಶೇ.7ರಷ್ಟು ಮೀಸಲಾತಿಯನ್ನು ಸಂವಿಧಾನದ 9ನೇ ಅನುಸೂಚಿಯಲ್ಲಿ ಸೇರಿಸಬೇಕು. ಉದ್ಯೋಗ ನೇಮಕಾತಿ, ನೇರ ನೇಮಕಾತಿ, ಬ್ಯಾಕ್‌ಲಾಗ್, ಬಡ್ತಿ, ಮುಂಬಡ್ತಿ, ಒಳಗುತ್ತಿಗೆಗೆ ಎಸ್‌ಸಿಎಸ್‌ಪಿ/ಟಿಎಸ್‌ಪಿ ಸೌಲಭ್ಯ ಕಲ್ಪಿಸಬೇಕು ಎಂದು ಆಗ್ರಹಿಸಿದರು. ಬಳಿಕ ಅಪರ ಜಿಲ್ಲಾಧಿಕಾರಿಗಳಿಗೆ ಹಕ್ಕೊತ್ತಾಯ ಮನವಿ ಪತ್ರ ನೀಡಲಾಯಿತು. ಅದಿಜಾಂಬವ ಅಭಿವೃದ್ಧಿ ನಿಗಮದ ರಾಜ್ಯ ನಿರ್ದೇಶಕ ಕುಮಾರ ರಾಮು, ಡಿಎಸ್‌ಎಸ್ ಜಿಲ್ಲಾ ಸಂಚಾಲಕ ಹಲಗಯ್ಯನಹುಂಡಿ ಶಂಕರ್, ಸಾಮಾಜಿಕ ನ್ಯಾಯಪರ ವೇದಿಕೆ ಡಾ.ಮರಡೀಪುರ ರವಿಕುಮಾರ್, ಎಲ್‌ಐಸಿ ರಾಜಣ್ಣ, ಸ್ವಾಮಿ, ಗೋಪಾಲಪುರ ಮಂಜುನಾಥ್, ಮೂಗೂರು ಬಲ್ಲಯ್ಯ, ಹುಣಸೂರು ರಾಜಪ್ಪ, ಗಾಂಧಿನಗರ ಬಸಪ್ಪ ಜವರಯ್ಯ, ಹಲಗಯ್ಯನಹುಂಡಿ ಮಾಜಿ ಗ್ರಾಪಂ ಅಧ್ಯಕ್ಷ ಶಂಕರ್, ರಂಗಚಾರಿ ಹುಂಡಿ ಸುನೀಲ್, ಎಂಸಿಹುಂಡಿ ವಿಜಯ ಕುಮಾರ್, ರಾಯನಹಳ್ಳಿ ಸ್ವಾಮಿ, ಡಿಎಸ್‌ಎಸ್ ಜಿಲ್ಲಾ ಮಹಿಳಾ ಘಟಕದ ಸಂಚಾಲಕಿ ಶಿವಮ್ಮ ಮತ್ತಿತರರಿದ್ದರು.



ಡಿಎಸ್‌ಎಸ್ ಹಾಗೂ ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ ವತಿಯಿಂದ ಜಿಲ್ಲಾಧಿಕಾರಿ ಕಚೇರಿ ಎದುರು ಬುಧವಾರ ಪ್ರತಿಭಟನೆ ನಡೆಸಲಾಯಿತು.

ಹೊಸಕೋಟೆಯಲ್ಲಿ ಸ್ಮಶಾನ ಸಮಸ್ಯೆ

ತಹಸೀಲ್ದಾರ್, ನಾಡ ಕಚೇರಿ ಆವರಣದಲ್ಲಿ ಅಂತ್ಯ ಸಂಸ್ಕಾರಕ್ಕೆ ಅವಕಾಶ ನೀಡಲು ಮನವಿ

ಮೈಸೂರು,ಮಾ.25(ಜಿಎ)– ಮೈಸೂರು ತಾಲೂಕಿನ ಇಲವಾಲ ಹೋಬಳಿಯ ಗುಂಗ್ರಾಲ್ ಛತ್ರ ಗ್ರಾಪಂ ವ್ಯಾಪ್ತಿಯಲ್ಲಿರುವ ಹೊಸಕೋಟೆ ಗ್ರಾಮಸ್ಥರಿಗೆ, ಸ್ಮಶಾನದ ಸಮಸ್ಯೆ ಇರುವುದರಿಂದ ತಹಸೀಲ್ದಾರ್ ಕಾರ್ಯಾಲಯ ಹಾಗೂ ಇಲವಾಲ ನಾಡ ಕಚೇರಿ ಆವರಣದಲ್ಲಿ ಅಂತ್ಯ ಸಂಸ್ಕಾರಕ್ಕೆ ಅನುಕೂಲ ಮಾಡಿಕೊಡಬೇಕು ಎಂದು ಸಾಮಾಜಿಕ ಹೋರಾಟಗಾರ ರವಿಕುಮಾರ್ ಅವರು, ಶಾಸಕ ಜಿ.ಟಿ.ದೇವೇಗೌಡ, ಡಿಸಿ, ತಹಶೀಲ್ದಾರ್ ಅವರಲ್ಲಿ ಮನವಿ ಮಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 26 ವರ್ಷಗಳ ಹಿಂದೆ ಕಲ್ಲೂರು ನಾಗನಹಳ್ಳಿ ಗ್ರಾಮದಲ್ಲಿ ಎರಡು ಎಕರೆ ಸರ್ಕಾರಿ ಜಮೀನನ್ನು ಸ್ಮಶಾನಕ್ಕೆ ಸರ್ಕಾರದಿಂದ ಮಂಜೂರು ಮಾಡಿರುವ ಬಗ್ಗೆ ಆರ್‌ಟಿಸಿಯಲ್ಲಿ ದಾಖಲಾಗಿದೆ. ಆದರೆ, ಈ ಸ್ಮಶಾನದ ಜಮೀನಿಗೆ ಸರಿಯಾಗಿ ಗುರುತು ಇಲ್ಲದೆ ಗ್ರಾಮಸ್ಥರು, ಶವ ಸಂಸ್ಕಾರ ಮಾಡಲು ಗ್ರಾಮದಲ್ಲಿ ತೊಂದರೆಯಾಗುತ್ತಿದೆ. ಜಮೀನನ್ನು ಗುರುತಿಸಿ ಹದ್ದುಬಸ್ತು ಮಾಡಿಕೊಡಲು, ತಾವು ಹಾಗೂ ಗ್ರಾಮಸ್ಥರು ಜಿಲ್ಲಾಧಿಕಾರಿ ಹಾಗೂ ತಹಶೀಲ್ದಾರ್‌ಗೆ ಪತ್ರದ ಮೂಲಕ ಮನವಿ ಮಾಡಿದರೂ, ಯಾವುದೇ ಪ್ರಯೋಜನವಾಗಿಲ್ಲವೆಂದು ದೂರಿದರು.

ಶಾಸಕ ಜಿ.ಟಿ.ದೇವೇಗೌಡ, ಮೈಸೂರು ತಹಶೀಲ್ದಾರ್, ಜಿಲ್ಲಾಧಿಕಾರಿಗಳಿಗೆ ಅರ್ಜಿ ನೀಡಿ ಒಂದು ವರ್ಷ ಆರು ತಿಂಗಳು ಕಳೆದಿದ್ದರೂ, ಸ್ಮಶಾನದ ಜಮೀನನ್ನು ಗುರುತಿಸಿ, ಹದ್ದುಬಸ್ತು ಮಾಡಿಸಿ ಗ್ರಾಮಸ್ಥರ ಉಪಯೋಗಕ್ಕೆ ಅನುಕೂಲ ಮಾಡಿಕೊಟ್ಟಿಲ್ಲವೆಂದು ದೂರಿದರು.

ಗ್ರಾಮಸ್ಥರಿಗೆ ಅನುಕೂಲ ಮಾಡಿಕೊಡಲು ವಿಳಂಬವಾಗುತ್ತಿರುವುದರಿಂದ ಗ್ರಾಮದಲ್ಲಿ ಯಾರಾದರೂ ಮರಣ ಹೊಂದಿದರೆ ಮೈಸೂರು ತಹಶೀಲ್ದಾರ್ ಕಾರ್ಯಾಲಯ, ಇಲವಾಲ ನಾಡ ಕಚೇರಿ ಆವರಣದಲ್ಲಿ ಶವಸಂಸ್ಕಾರ ಮಾಡಲು ಅನುಮತಿ ನೀಡಬೇಕು ಎಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಗ್ರಾಪಂ ಮಾಜಿ ಉಪಾಧ್ಯಕ್ಷ ಮಾದೇಗೌಡ, ಗ್ರಾಮಸ್ಥರಾದ ರಾಜಣ್ಣ, ಕೃಷ್ಣೇಗೌಡ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಮಹಿಳೆಯರ ಮೇಲಿನ ದೌರ್ಜನ್ಯ ವಿರೋಧಿಸಿ ಮೈಸೂರಲ್ಲಿ ಜಾಗೃತಿ ಜಾಥಾ

ಮೈಸೂರು, ಮಾ.25(ಜಿಎ)–ಮೈಸೂರಿನ ಪುರಭವನದಲ್ಲಿ ಗ್ರಾಮೀಣ ಶಿಕ್ಷಣ ಮತ್ತು ಆರೋಗ್ಯ ಸಂಸ್ಥೆ, ಚೈಲ್ಡ್ ಫಂಡ್ ಇಂಟರ್‌ನ್ಯಾಷನಲ್ ಬೆಂಗಳೂರು ಮತ್ತು ಧ್ವನಿ ಮಹಿಳಾ ಒಕ್ಕೂಟ ಮೈಸೂರು ಸಹಯೋಗದೊಂದಿಗೆ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಆಚರಿಸಲಾಯಿತು.

ಪುರಭವನದಲ್ಲಿ ಸಭಾ ಕಾರ್ಯಕ್ರಮಕ್ಕೂ ಮೊದಲು ಮಹಿಳೆಯರ ಮೇಲಿನ ದೌರ್ಜನ್ಯ ವಿರೋಧಿಸಿ ಜಾಗೃತಿ ಜಾಥಾವನ್ನು ಹಮ್ಮಿಕೊಳ್ಳಲಾಗಿತ್ತು. ಜಾಥಾಕ್ಕೆ ಚಿಂತಕ ಪ್ರೊ.ಕಾಳ ಚೆನ್ನೇಗೌಡ ಚಾಲನೆ ನೀಡಿದರು. ಜಾಥಾದಲ್ಲಿ ಸಮಾರು 150ಕ್ಕೂ ಮಹಿಳೆಯರು ಭಾಗವಹಿಸಿ, ಜಾಗೃತಿ ಭಿತ್ತಿಪತ್ರಗಳು, ಘೋಷಣೆಗಳು ಮತ್ತು ಡೊಳ್ಳು ಬಡಿತದ ಮೂಲಕ ದೊಡ್ಡಗಡಿಯಾರದ ಮೂಲಕ ಕೋಟೆ ಅಂಜನೇಯ ದೇವಸ್ಥಾನ ಬಳಸಿಕೊಂಡು ಜಾಥಾ ಟೌನ್‌ಹಾಲ್ ತಲುಪಿತು.

ಈ ವೇಳೆ ಚಿಂತಕ ಪ್ರೊ.ಕಾಳ ಚೆನ್ನೇಗೌಡ ಮಾತನಾಡಿ, ನಾವು 21ನೇ ಶತಮಾನದಲ್ಲಿದ್ದರೂ ಹೆಣ್ಣನ್ನು ಇನ್ನು ದ್ವಿತೀಯ ದರ್ಜೆಯ ವ್ಯಕ್ತಿಯನ್ನಾಗಿ ಕಾಣುತ್ತಿದ್ದೇವೆ, ಇವತ್ತಿಗೂ ಪಿತೃ ಪ್ರಧಾನ ವ್ಯವಸ್ಥೆಯಲ್ಲಿ ನಾವಿದ್ದೇವೆ. ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳು ಹೆಚ್ಚಾಗುತ್ತಿರುವುದು ಮತ್ತು ದೌರ್ಜನ್ಯದ ಸ್ವರೂಪ ಬದಲಾಯಿಸುತ್ತಿರುವುದು ಕಾಣುತ್ತಿದ್ದೇವೆ. ಇದರ ವಿರುದ್ಧ ಜಾಗೃತಿ ಮೂಡಿಸುವುದು ಈ ಜಾಥಾದ ಮೂಲ ಉದ್ದೇಶವಾಗಿದೆ. ಮಹಿಳೆಯರು ತಮ್ಮ ಮೇಲೆ ಯಾವುದೇ ರೀತಿಯ ದೌರ್ಜನ್ಯಗಳು ನಡೆದಾಗ ಅದರ ವಿರುದ್ಧ ಧ್ವನಿ ಎತ್ತಬೇಕು ಮತ್ತು ಸಮಾಜ ಇವತ್ತು ಮಹಿಳೆಯರನ್ನು ಸಮಾನವಾಗಿ ಕಾಣಬೇಕು, ಸಮಾನ ಅವಕಾಶಗಳನ್ನು ನೀಡಬೇಕು ಎಂದು ತಿಳಿಸಿದರು.

ಕಾರ್ಯಕ್ರಮ ಉದ್ಘಾಟಿಸಿದ ಗ್ಯಾರಂಟಿ ಯೋಜನೆ ನಗರ ಅಧ್ಯಕ್ಷೆ ಪುಷ್ಪವಲ್ಲಿ ಮಾತನಾಡಿ, ಇಂದು ಹೆಣ್ಣಿನ ಮೇಲೆ ನಾನಾ ರೀತಿಯ ದೌರ್ಜನ್ಯ ನಡೆಯುತ್ತಿರುವುದರಿಂದ ಸಮಾಜದಲ್ಲಿ ಹೆಣ್ಣಿನ ಕುರಿತು ಜಾಗೃತಿ ಮೂಡುವುದು ತುಂಬಾ ಅವಶ್ಯವಿದೆ. ಕಾನೂನುಗಳ ಪರಿಣಾಮಕಾರಿ ಅನುಷ್ಠಾನ ಆಗಬೇಕಾಗಿದೆ. ಎಲ್ಲಾ ಮಹಿಳೆಯರಿಗೆ ಅವರ ಹಕ್ಕುಗಳ ಬಗ್ಗೆ ತಿಳಿವಳಿಕೆ ನೀಡುವುದರೊಂದಿಗೆ ಹೆಣ್ಣಿನ ಕುರಿತಾಗಿ ಜಾಗೃತಿ ಮೂಡಬೇಕಾಗಿದೆ ಎಂದರು.

ಸಾಮಾಜಿಕ ಹೋರಾಟಗಾರ್ತಿ ಡಾ.ದು.ಸರಸ್ವತಿ ಮಾತನಾಡಿ, ಈ ಹಿಂದೆ ಮಹಿಳೆಯರು ಕೇವಲ ಗೃಹ ಕೆಲಸಗಳಿಗೆ ಮಾತ್ರ ಸೀಮಿತವಾಗಿದ್ದರು ಸ್ವತಂತ್ರದ ನಂತರ ನಮ್ಮ ಸಂವಿಧಾನವು ಮಹಿಳೆಯರಿಗೆ ಉತ್ತಮವಾದ ಹಕ್ಕು, ಸ್ಥಾನಮಾನವನ್ನು ನೀಡಿದೆ. ಮಹಿಳೆಯರ ಅಭಿವೃದ್ಧಿಗೆ ಬೆಂಬಲ ನೀಡಿದರೆ ಮಾತ್ರ ಸಮಾಜದ ಅಭಿವೃದ್ಧಿ ಸಾಧ್ಯ. ಮಹಿಳೆಯರಿಗೆ ಆರ್ಥಿಕ, ಸಾಮಾಜಿಕ, ರಾಜಕೀಯ ಕ್ಷೇತ್ರಗಳಲ್ಲಿ ಸಮಾನ ಅವಕಾಶ ಒದಗಿಸಬೇಕು. ಮಹಿಳೆ ಪ್ರಪಂಚದ ದೊಡ್ಡ ಶಕ್ತಿ ಎಂದರು.

ಇಂದು ಆಟೋ ರಿಕ್ಷಾದಿಂದ ಅಂತರಿಕ್ಷಾ ತಲುಪುವ ರಾಕೆಟ್ ಅನ್ನು ಉಡಾವಣೆ ಮಾಡುವ ಮಟ್ಟಕ್ಕೆ ಬೆಳೆದು ನಿಂತಿದ್ದಾರೆ. ಇದು ಮಹಿಳೆಯರಲ್ಲಿ ಎಂತಹ ಅಭೂತಪೂರ್ವ ಆತ್ಮವಿಶ್ವಾಸ ಮತ್ತು ಶ್ರದ್ಧೆ ಇದೆ ಎಂಬುದನ್ನು ಎತ್ತಿ ತೋರಿಸುತ್ತದೆ. ಹೆಣ್ಣು ಯಾರಲ್ಲಿಯೂ ಅವಲಂಬಿತವಾಗದೆ ಸ್ವತಂತ್ರವಾಗಿ, ಆತ್ಮ ವಿಶ್ವಾಸದಿಂದ ಬದುಕುವ ಶಕ್ತಿ ಬೆಳೆಸಿಕೊಳ್ಳಬೇಕು. ಭಯವಿಲ್ಲದೆ ಶೋಷಣೆಯ ವಿರುದ್ಧವಾಗಲಿ, ದೌರ್ಜನ್ಯದ ವಿರುದ್ಧವಾಗಲಿ ದನಿ ಎತ್ತಿ ಎದುರಿಸಬೇಕು. ಮಹಿಳೆಯರು ಆರೋಗ್ಯದ ಕಡೆ ಹೆಚ್ಚು ಗಮನಕೊಡಬೇಕು. ಜಾಗೃತರಾಗಬೇಕು ಗಟ್ಟಿತನ ಬೆಳೆಸಿಕೊಂಡು ಏನೇ ಕಷ್ಟ ಬಂದರು ಎದುರಿಸಿ ಮಾನಸಿಕವಾಗಿ ಸದೃಢ, ಸ್ವಾವಲಂಬಿಗಳಾಗಿ ಬದುಕಬೇಕು ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಶೋಭಾ, ಬಿ.ಎಸ್. ಮೀನಾಕ್ಷಿ, ವಸಂತ, ಚಂದ್ರಕುಮಾರ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.



ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಮಹಿಳೆಯರ ಮೇಲಿನ ದೌರ್ಜನ್ಯ ವಿರೋಧಿಸಿ ಬುಧವಾರ ಆಯೋಜಿಸಿದ್ದ ಜಾಥಾಕ್ಕೆ ಚಿಂತಕ ಪ್ರೊ.ಕಾಳ ಚೆನ್ನೇಗೌಡ ಚಾಲನೆ ನೀಡಿದರು.

ಲಲಿತಾ ಜಿ.ಟಿ.ದೇವೇಗೌಡರಿಗೆ ಜಿ.ಎಸ್.ಬೊಮ್ಮೇಗೌಡ

ಸಹಕಾರ ರತ್ನ ಪ್ರಶಸ್ತಿ ಪ್ರದಾನ

ಸಹಕಾರಿ ಕ್ಷೇತ್ರದ ಅಳಿಲು ಸೇವೆಗೆ ದೊಡ್ಡ ಸತ್ಕಾರ ನಿರೀಕ್ಷಿಸಿರಲಿಲ್ಲ



ಶ್ರೀಮತಿ ಲಲಿತಾ ಜಿ.ಟಿ.ದೇವೇಗೌಡರಿಗೆ ಸಹಕಾರ ರತ್ನ ಪ್ರಶಸ್ತಿ ಪ್ರದಾನ ಮಾಡಿದರು.

ಮಂಡ್ಯ,ಮಾ.25– ಸಹಕಾರಿ ಕ್ಷೇತ್ರದ ಅಳಿಲು ಸೇವೆಗೆ ದೊಡ್ಡ ಸತ್ಕಾರ ನಿರೀಕ್ಷಿಸಿರಲಿಲ್ಲ ಮಂಡ್ಯ ಜಿಲ್ಲೆಯ ಋಣವನ್ನು ನಾನೂ ಎಂದಿಗೂ ಮರೆಯುವುದಿಲ್ಲ ಎಂದು ರಾಜ್ಯದ ಹಿರಿಯ ಮಹಿಳಾ ಸಹಕಾರಿ ಲಲಿತಾ ಜಿ.ಟಿ.ದೇವೇಗೌಡ ತಿಳಿಸಿದರು.

ನಗರದ ಕರ್ನಾಟಕ ಸಂಘದ ಕೆ.ವಿ.ಶಂಕರಗೌಡ ಶತಮಾನೋತ್ಸವ ಭವನದಲ್ಲಿ ಬುಧವಾರ ನಡೆದ ಹಿರಿಯ ಸಹಕಾರಿ ಜಿ.ಎಸ್.ಬೊಮ್ಮೇಗೌಡ ಸಹಕಾರ ರತ್ನ ಪ್ರಶಸ್ತಿ ಸ್ವೀಕರಿಸಿ ಅವರು ಮಾತನಾಡಿದರು.

2020ರಲ್ಲಿ ಮಂಡ್ಯ ತಾಲೂಕಿನಲ್ಲಿ ಕೀಲಾರ ಗ್ರಾಮದಲ್ಲಿಯೂ ಸಹ ನನಗೆ ಸಹಕಾರ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಗಿತ್ತು. ನನ್ನ ಅಳಿಲು ಸೇವೆಗೆ ಮಂಡ್ಯ ಜಿಲ್ಲೆಯಿಂದಲೇ ಎರಡೆರಡು ಸಹಕಾರ ಪ್ರಶಸ್ತಿ ಲಭಿಸಿರುವುದು ನಿಜವಾಗಿಯೂ ಹರ್ಷ ತಂದಿದೆ. 2008ರವರೆಗೂ ಸಹಕಾರಿ ಕ್ಷೇತ್ರದಲ್ಲಿ ತೊಡಗಲು ಮನೆಯಿಂದ ಹೊರಗೆ ಬಂದಿರಲಿಲ್ಲ. ಆದರೆ ಹುಣಸೂರು ತಾಲೂಕಿನಲ್ಲಿ ಎಲ್ಲ ಮಹಿಳೆಯರು ಸಹಕಾರ ಕ್ಷೇತ್ರವನ್ನು ಕಟ್ಟೋಣ ಎಂದು ನನಗೆ ಒತ್ತಡ ಹಾಕಿದರು. ಅವರ ಒತ್ತಡದಿಂದ ಈ ಕ್ಷೇತ್ರಕ್ಕೆ ಕಾಲಿಟ್ಟೆ ಎಂದು ಸ್ಮರಿಸಿದರು.

ಸಹಕಾರಿ ಕ್ಷೇತ್ರಕ್ಕೂ ಬರುವುದಕ್ಕೂ ಮುನ್ನ ತಮ್ಮ ಪತಿಯವರಾದ ಮಾಜಿ ಸಚಿವರು ಹಾಗೂ ಹಿರಿಯ ಸಹಕಾರಿ ಧುರೀಣರಾದ ಜಿ.ಟಿ.ದೇವೇಗೌಡರ ಸಲಹೆ ಪಡೆದೆ. ಆದರೆ ಅವರು ಆರಂಭದಲ್ಲಿ ಒಪ್ಪಲಿಲ್ಲ. ಆದರೆ ಅಂದು ಶಾಸಕರಾಗಿದ್ದ ಪಾಪಣ್ಣ ಎಂಬುವರು ನಾನು ಸಹಕಾರಿ ಕ್ಷೇತ್ರದಲ್ಲಿ ಹೆಸರು ಮಾಡಲು ಆಗುತ್ತಾ ಎಂದು ಸವಾಲು ಹಾಕಿದ್ದರು. ಅದೇ ನನಗೆ ಪ್ರೇರಣೆಯಾಯಿತು ಎಂದರು.

ನಂತರ ಹುಣಸೂರಿನಲ್ಲಿ ಮಹಿಳಾ ಸಂಘ ಕಟ್ಟಿಕೊಂಡು ಕೇವಲ ಒಂದು ವರ್ಷದಲ್ಲಿ ನಾಲ್ಕು ಸಾವಿರ ಸದಸ್ಯತ್ವ ಮಾಡಿ 1 ಕೋಟಿ ರೂ. ಹಣ ಸಂಗ್ರಹಿಸಿದೆ. ಅದೇ ವರ್ಷದಲ್ಲಿ ಆ ಸಂಘದಲ್ಲಿ 19 ಲಕ್ಷ ರೂ. ಲಾಭ ಬರುವಂತೆ ಮಾಡಿದೆ. ಜಿ.ಟಿ.ದೇವೇಗೌಡರ ಸಹಕಾರದಿಂದ ಸ್ವಂತ ಕಟ್ಟಡ ನಿರ್ಮಿಸಿದೆ. ಮೈಸೂರಿನ ನಂದಿನಿ ಲೇಔಟ್‌ನಲ್ಲಿ ಕೋಟ್ಯಂತರ ರೂ. ಹಣ ವ್ಯಯ ಮಾಡಿ ಸೊಸೈಟಿ ನಿರ್ಮಾಣ ಮಾಡಿದೆ. 2022ರಲ್ಲಿ ಅಂದಿನ ಸಹಕಾರಿ ಸಚಿವರು ಕಟ್ಟಡ ಉದ್ಘಾಟಿಸಿದರು. ಆ ಸಂಘವನ್ನು ಲಾಭದಾಯಕವಾಗಿ ಮುನ್ನಡೆಸಿದೆ ಎಂದು ವಿವರಿಸಿದರು.

ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಸದಸ್ಯರಿಗೆ ಲಾಭ ಬರುವಂತೆ ಮಾಡಿದರೂ ಅಲ್ಲಿನ ಸಿಇಒ ಹಣ ದುರುಪಯೋಗ ಮಾಡಿದ ಪರಿಣಾಮ ನನ್ನ ಸ್ಥಾನಕ್ಕೆ ರಾಜೀನಾಮೆ ನೀಡಿ ಹೊರಬಂದೆ. ಅಲ್ಲಿ ನನ್ನದು ತಪ್ಪಿಲ್ಲದಿದ್ದರೂ ಸಿಇಒ ಭ್ರಷ್ಟಾಚಾರದಿಂದ ಬೇಸರಗೊಂಡೆ. ಆದ್ದರಿಂದ ಎಷ್ಟೇ ಒತ್ತಡವಿದ್ದರೂ ಮತ್ತೆ ಈ ಬಾರಿ ನಡೆದ ಚುನಾವಣೆಯಲ್ಲಿ ಸ್ಪರ್ಧಿಸಲು ಮುಂದಾಗಲಿಲ್ಲ. ನನ್ನ ಈ ಸಣ್ಣಪುಟ್ಟ ಸಹಕಾರಿ ಕ್ಷೇತ್ರದ ದುಡಿಮೆಗೆ ಸಹಕಾರಿ ಧುರೀಣರ ಹೆಸರಿನ ಪ್ರಶಸ್ತಿ ಲಭ್ಯವಾಗುತ್ತದೆ ಎಂದುಕೊಂಡಿರಲಿಲ್ಲ. ನಿಮ್ಮ ಋಣ ತೀರಿಸುವುದು ಬಹಳ ಕಷ್ಟ ಎಂದು ಹೇಳಿದರು.

ಮೈಸೂರು ವಿವಿಯ ಪ್ರಸಾರಾಂಗ ವಿಭಾಗ ವಿಶ್ರಾಂತ ನಿರ್ದೇಶಕ ಕೆ.ಟಿ.ವೀರಪ್ಪ ಮಾತನಾಡಿ, ಸಹಕಾರಿ ಧುರೀಣೆ ಲಲಿತಾ ಅವರನ್ನು ಬೊಮ್ಮೇಗೌಡ ಸಹಕಾರ ಪ್ರಶಸ್ತಿಗೆ ಆಯ್ಕೆ ಮಾಡಿರುವುದು ನಿಜಕ್ಕೂ ಶ್ಲಾಘನೀಯ. ಅವರು ಸಹಕಾರಿ ಕ್ಷೇತ್ರದಲ್ಲಿ ಕೇವಲ ಮೈಸೂರು ಜಿಲ್ಲೆಯಲ್ಲಿ ಮಾತ್ರವಲ್ಲದೆ, ರಾಜ್ಯದ ಸಹಕಾರಿ ಕ್ಷೇತ್ರದಲ್ಲಿ ಹೆಸರು ಮಾಡಿದ್ದಾರೆ ಎಂದರು.

ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಬಿ.ಜಯಪ್ರಕಾಶಗೌಡ ಮಾತನಾಡಿ, ಮಂಡ್ಯ ರಾಜಕಾರಣವು ಒಂದು ಕಾಲದಲ್ಲಿ ಇಡೀ ರಾಜ್ಯವನ್ನೇ ಮುನ್ನಡೆಸುತ್ತಿತ್ತು. ಮೈಸೂರು, ತುಮಕೂರು ಸೇರಿದಂತೆ ಹಲವು ಜಿಲ್ಲೆಯ ನಾಯಕರು ರಾಜ್ಯ ರಾಜಕಾರಣದಲ್ಲಿ ಮಂಡ್ಯ ಜಿಲ್ಲೆಯ ನಿಯಂತ್ರಣವನ್ನು ಹತ್ತಿರದಿಂದ ನೋಡಿದ್ದಾರೆ. ಅದರಲ್ಲೂ ಸ್ವಾತಂತ್ರ್ಯಪೂರ್ವದ ಹೋರಾಟದಲ್ಲಿ ಮಂಡ್ಯ ಜಿಲ್ಲೆಯಿಂದ ಅನೇಕ ರಾಜಕಾರಣಿಗಳ ಉದಯವಾಯಿತು. ಮಂಡ್ಯದ ಶಿವಪುರ ಧ್ವಜ ಸತ್ಯಾಗ್ರಹ ರಾಜ್ಯ ಕಾಂಗ್ರೆಸ್‌ನ ಉದಯಕ್ಕೆ ಕಾರಣವಾಯಿತು. ಆದರೆ ಇಂದು ಜಿಲ್ಲೆಯಲ್ಲಿ ರಾಜ್ಯ ರಾಜಕಾರಣ ಆಳುವ ಶಕ್ತಿಯುತ ರಾಜಕಾರಣಿಗಳು ಮರೆಯಾಗಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಕರ್ನಾಟಕ ಸಂಘ ಸಾಹಿತ್ಯ, ಸಂಸ್ಕೃತಿ, ಕಲೆ, ಸಿನಿಮಾ ಮತ್ತು ರಾಜಕಾರಣ ಕ್ಷೇತ್ರದಲ್ಲಿ ಯುವ ಪೀಳಿಗೆಯನ್ನು ಬೆಳೆಸುವ ಕೆಲಸ ಮಾಡುತ್ತಿದೆ. ಕೆ.ವಿ.ಶಂಕರಗೌಡ ಅವರಂಥ ರಾಜಕಾರಣಿಗಳು ಯುವ ರಾಜಕಾರಣಿಗಳನ್ನು ಹುಟ್ಟು ಹಾಕುತ್ತಿದ್ದರು. ಕೆ.ವಿ.ಶಂಕರಗೌಡ ಅವರು ರಾಜಕಾರಣ, ಸಹಕಾರ, ಶಿಕ್ಷಣ ಕ್ಷೇತ್ರದಲ್ಲಿ ಹೆಸರು ಮಾಡಿ ಮೂರು ಕ್ಷೇತ್ರಗಳಿಂದ ಅನೇಕ ಸಾಧಕರನ್ನು ಸಮಾಜಕ್ಕೆ ಕೊಟ್ಟಿದ್ದಾರೆ. ಇಂಥ ಕೆಲಸಗಳು ಪ್ರಸ್ತುತ ಆಗಬೇಕು. ಇದಕ್ಕೆ ಕರ್ನಾಟಕ ಸಂಘ ಪ್ರೋತ್ಸಾಹವಾಗಿ ನಿಂತಿದೆ ಎಂದು ಹೇಳಿದರು.

ವೇದಿಕೆಯಲ್ಲಿ ವಿಧಾನ ಪರಿಷತ್ ಮಾಜಿ ಸದಸ್ಯ ಡಿ.ಮಾದೇಗೌಡ, ಮಾಜಿ ಶಾಸಕ ಹಾಗೂ ಪ್ರಶಸ್ತಿಯ ದತ್ತಿ ಜಿ.ಬಿ.ಶಿವಕುಮಾರ್, ಕರ್ನಾಟಕ ಸಂಘದ ಎಚ್.ಡಿ.ಸೋಮಶೇಖರ್, ಮಂಜುಳ ಉದಯ ಶಂಕರ್ ಸೇರಿದಂತೆ ಮತ್ತಿತರರಿದ್ದರು.

ರೈತರಿಗೆ ಅಗತ್ಯ ದಾಖಲಾತಿ ನೀಡುವಂತೆ ಒತ್ತಾಯಿಸಿ ಪ್ರತಿಭಟನೆ



ಶ್ರೀರಂಗಪಟ್ಟಣದಲ್ಲಿ ರೈತರು ಪ್ರತಿಭಟನೆ ನಡೆಸುತ್ತಿರುವುದು.

ಶ್ರೀರಂಗಪಟ್ಟಣ: ತಾಲೂಕಿನ ಮಹದೇವಪುರ ಗ್ರಾಮದ ಸರ್ವೆ ನಂಬರ್ 342 ರಲ್ಲಿ ನೂರಾರು ರೈತರು ಸ್ವಾತಂತ್ರ್ಯ ಪೂರ್ವದಿಂದಲೂ ಉಳುಮೆ ಮಾಡಿಕೊಂಡು ಬರುತ್ತಿದ್ದು, ತಾಲೂಕು ಆಡಳಿತ ಮತ್ತು ಸರ್ಕಾರದಿಂದ ಅಗತ್ಯ ದಾಖಲಾತಿಗಳನ್ನು ನೀಡುತ್ತಿಲ್ಲ ಎಂದು ಆರೋಪಿಸಿ ನೂರಾರು ರೈತರು ತಾಲೂಕು ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಭೂಮಿತಾಯಿ ಹೋರಾಟ ಸಮಿತಿಯ ರೈತ ಹೋರಾಟಗಾರ ಕೆ.ಎಸ್.ನಂಜುಂಡೇಗೌಡ ಹಾಗೂ ಸಮಿತಿ ಅಧ್ಯಕ್ಷ ಬಿ.ಸಿ.ಕೃಷ್ಣೇಗೌಡ ನೇತೃತ್ವದಲ್ಲಿ ಧರಣಿ ಕುಳಿತು ಪ್ರತಿಭಟನೆ ನಡೆಸಿದ ಮಹದೇವಪುರ ಹಾಗೂ ಚೆನ್ನಹಳ್ಳಿ ಗ್ರಾಮಗಳ ನೂರಾರು ರೈತರು, ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಇದೀಗ ಭೂಗಳ್ಳರ ಪರ ನಿಂತಿರುವ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ಉಳುಮೆ ಮಾಡುತ್ತಿರುವ ರೈತರಿಗೆ ಅನ್ಯಾಯ ಮಾಡುತ್ತಿದ್ದು, ನಕಲಿ ದಾಖಲೆ ಸೃಷ್ಟಿಸಿ ಉಳ್ಳವರ ಪರ ನಿಲ್ಲುತ್ತಿದ್ದಾರೆ ಎಂದು ಕಿಡಿಕಾರಿದರು. ಸರ್ಕಾರದಿಂದ ಅಕ್ರಮ ಸಕ್ರಮದಲ್ಲಿ ಆದೇಶ ಬಂದಾಗಲೆಲ್ಲಾ ರೈತರು ದಾಖಲಾತಿಗಳಿಗಾಗಿ ಅರ್ಜಿ ಸಲ್ಲಿಸುತ್ತಲೇ ಬರುತ್ತಿದ್ದರೂ ಯಾವುದೇ ಪ್ರಯೋಜನವಾಗುತ್ತಿಲ್ಲ ಎಂದು ದೂರಿದರು.

ಜಿಲ್ಲಾಡಳಿತ ಮತ್ತು ಸರ್ಕಾರ ಕೂಡಲೇ ಮಧ್ಯ ಪ್ರವೇಶಿಸಿ ಅನುಭವದಲ್ಲಿರುವ ರೈತರಿಗೆ ಆರ್.ಟಿ.ಸಿ ಸೇರಿದಂತೆ, ಖಾತೆ, ದುರಸ್ತು, ಪೋಡಿ ಸೇರಿದಂತೆ ಅಗತ್ಯ ದಾಖಲಾತಿ ನೀಡಬೇಕೆಂದು ಒತ್ತಾಯಿಸಿ ಉಪ ತಹಸೀಲ್ದಾರ್ ನಾಗೇಶ್ ರವರ ಮೂಲಕ ತಾಲೂಕು ಮತ್ತು ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿದರು.

ಇಂದು ವಿದ್ಯುತ್ ವ್ಯತ್ಯಯ

ಮಂಡ್ಯ: ವಿ.ಸಿ.ಫಾರಂ, ವಿದ್ಯುತ್ ವಿತರಣಾ ಕೇಂದ್ರದಿಂದ ಹೊರಡುವ ಚಂದಗಾಲು ಫೀಡರ್ ಮಾರ್ಗದಲ್ಲಿ ಲಿಂಕ್‌ಲೈನ್ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಮಾ.26 ರಂದು ಬೆಳಗ್ಗೆ 9 ರಿಂದ ಸಂಜೆ 6 ಗಂಟೆಯ ವರೆಗೆ ಗಾಣದಳು, ಎಂ.ಎನ್ ಕಟ್ಟೆ, ಚಿಕ್ಕಕೊಪ್ಪಲು, ಕುರಿಕೊಪ್ಪಲು, ಮಾದೇಗೌಡನಕೊಪ್ಪಲು ಹಾಗೂ ಈ ಸುತ್ತ ಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದೆ.

ಕೊರಟೀಕೆರೆ ಡೇರಿ ನೂತನ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ಕೆ.ಆರ್.ಪೇಟೆ,ಮಾ.25–ತಾಲೂಕು ಸಂತೇಬಾಚಹಳ್ಳಿ ಹೋಬಳಿಯ ಕೊರಟೀಕೆರೆ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಕೆ.ಎಸ್.ಕೃಷ್ಣೇಗೌಡ ಹಾಗೂ ಉಪಾಧ್ಯಕ್ಷರಾಗಿ ಕೆ.ಎಸ್.ಮಹೇಶ್ ಅವಿರೋಧವಾಗಿ ಆಯ್ಕೆಯಾದರು.

ಸಂಘದ ನೂತನ ಆಡಳಿತ ಮಂಡಳಿಯ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಕ್ಕೆ ಇಂದು ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಕೆ.ಎಸ್.ಕೃಷ್ಣೇಗೌಡ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಕೆ.ಎಸ್.ಮಹೇಶ್ ಅವರನ್ನು ಹೊರತುಪಡಿಸಿ ಉಳಿದ ಯಾವುದೇ ನಿರ್ದೇಶಕರು ನಾಮಪತ್ರವನ್ನು ಸಲ್ಲಿಸದೇ ಇರುವ ಕಾರಣ ಅವಿರೋಧ ಆಯ್ಕೆ ನಡೆಯಿತು.

ಚುನಾವಣಾ ಅಧಿಕಾರಿಯಾಗಿ ತಾಲೂಕು ಸಹಕಾರ ಅಭಿವೃದ್ಧಿ ಅಧಿಕಾರಿ ಹೆಚ್.ಬಿ.ಭರತ್‌ಕುಮಾರ್ ಕಾರ್ಯನಿರ್ವಹಣೆ ಮಾಡಿದರು. ಈ ಸಂದರ್ಭದಲ್ಲಿ ಸಂಘದ ನಿರ್ದೇಶಕರಾದ ಜಯರಾಮು, ನಾರಾಯಣಗೌಡ, ಹರೀಶ್, ವಾಸುದೇವೇಗೌಡ, ಲಕ್ಷ್ಮೀದೇವಮ್ಮ, ಶೃತಿ.ಎಸ್.ಎಮ್ ನಾರಾಯಣಶೆಟ್ಟಿ, ಲೋಕೇಶ್.ಕೆ.ಆರ್, ಯಶೋಧಮ್ಮ, ಗ್ರಾಮದ ಮುಖಂಡರಾದ ಟಿಎಪಿಸಿಎಂಎಸ್ ಮಾಜಿ ನಿರ್ದೇಶಕ ಕೆಎಸ್.ದಿನೇಶ್, ಕೆ.ವಿ.ಶಂಕರೇಗೌಡ, ರವಿ, ವಿಎಸ್ಎಸ್ಎನ್ ಅಧ್ಯಕ್ಷ ಕೆ.ಎನ್.ದೇವನಾಥ್, ಕೆ.ಎನ್.ಬಲರಾಮು, ಕೆ.ಆರ್.ಮಹೇಶ್, ಕೆ.ಎಸ್.ಕುಮಾರ್, ಗಣೇಶ್, ಅಭಿಷೇಕ್, ಕೆ.ಇ.ಮೋಹನ್, ಕೆ.ಎನ್.ಮೋಹನ್‌ಕುಮಾರ್, ಕೆ.ಇ.ವಿಜಯಕುಮಾರ್, ಸೇರಿದಂತೆ ಗ್ರಾಮದ ಮುಖಂಡರು, ಯುವಕರು ಇದ್ದರು.

ಗುಂಪುಗಾರಿಕೆ ಬಿಟ್ಟು ಸ್ವಚ್ಛವಾಗಿಟ್ಟುಕೊಳ್ಳಿ



ಶಾಸಕ ಉದಯ್ ವಿವಿಧ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿದರು.

ಭಾರತೀನಗರ, ಮಾ.25– ಗ್ರಾಮದಲ್ಲಿ ಗುಂಪುಗಾರಿಕೆ ಮಾಡುವುದನ್ನು ಬಿಟ್ಟು ಗ್ರಾಮವನ್ನು ಸ್ವಚ್ಛವಾಗಿಟ್ಟುಕೊಳ್ಳಿ, ಗ್ರಾಮದ ಅಭಿವೃದ್ಧಿ ಕಡೆಗೆ ಗಮನ ಹರಿಸಿ ಎಂದು ಶಾಸಕ ಕೆ.ಎಂ.ಉದಯ್ ತಿಳಿಸಿದರು.

ಇಲ್ಲಿಗೆ ಸಮೀಪದ ಯಡಗನಹಳ್ಳಿ ಗ್ರಾಮದಲ್ಲಿ 4.95 ಕೋಟಿ ರೂ ವೆಚ್ಚದಲ್ಲಿ ಸಬ್ಬನಹಳ್ಳಿ, ಯಡಗನಹಳ್ಳಿ, ಕಾಡುಕೊತ್ತನಹಳ್ಳಿ ಮಾರ್ಗದ ರಸ್ತೆಯ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಅವರು ಮಾತನಾಡಿದರು. ಮದ್ದೂರು ತಾಲೂಕಿನ ಬಹುತೇಕ ಗ್ರಾಮಗಳಲ್ಲಿ ಚರಂಡಿ ವ್ಯವಸ್ಥೆ ಅವ್ಯವಸ್ಥೆಯಿಂದ ಕೂಡಿದ್ದು, ಸರಾಗವಾಗಿ ನೀರು ಹರಿಯುತ್ತಿಲ್ಲ. ಇದರಿಂದ ಚರಂಡಿಗಳು ಗಬ್ಬು ನಾರುತ್ತಿವೆ. ಗ್ರಾಮಸ್ಥರು ಅಂತಹ ಕಡೆಗಳಲ್ಲಿ ಸ್ವಯಂ ಶುಚಿಗೊಳಿಸುವ ಮೂಲಕ ಸ್ವಚ್ಛತೆಯನ್ನು ಕಾಪಾಡಿಕೊಳ್ಳಬೇಕು ಎಂದು ಹೇಳಿದರು.

ಗ್ರಾಮದಲ್ಲಿ ರಸ್ತೆ ಅಭಿವೃದ್ಧಿ ಹಿಂದುಳಿದಿದ್ದರಿಂದ ಗ್ರಾಮಸ್ಥರ ಒತ್ತಾಯದ ಮೇರೆಗೆ 4.95 ಕೋಟಿ ರೂ ವೆಚ್ಚದಲ್ಲಿ ಸರ್ಕಾರದಿಂದ ಹಣ ಬಿಡುಗಡೆಗೊಳಿಸಿ ಕಾಮಗಾರಿಗೆ ಚಾಲನೆ ನೀಡಲಾಗಿದೆ. ಜೊತೆಗೆ ನಾಲೆಗಳ ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದೇನೆ. ಮತ್ತಷ್ಟು ಅಭಿವೃದ್ಧಿ ಕೆಲಸಗಳನ್ನು ಮಾಡಬೇಕಾದರೆ ಮೊದಲು ಗ್ರಾಮದಲ್ಲಿ ಗುಂಪುಗಾರಿಕೆ ಮಾಡುವುದನ್ನು ಬಿಡಬೇಕೆಂದು ಎಚ್ಚರಿಸಿದರು.

ಯಡಗನಹಳ್ಳಿ ಗ್ರಾಪಂ ವ್ಯಾಪ್ತಿಯಲ್ಲಿ ಈಗಾಗಲೇ 35 ರಿಂದ 40 ಕೋಟಿ ವೆಚ್ಚದಲ್ಲಿ ಅಭಿವೃದ್ಧಿ ಕಾಮಗಾರಿಗಳು ನಡೆಯುತ್ತಿದೆ. ನಾನು ಶಾಸಕನಾಗುವ ಮೊದಲೇ ಈ ಗ್ರಾಮಕ್ಕೆ ಬಂದಾಗ ಕೆಲವು ಯುವಕರು ನನ್ನೊಂದಿಗೆ ಗ್ರಾಮದ ಅಭಿವೃದ್ಧಿಯ ಬಗ್ಗೆ ಚರ್ಚಿಸಿದ್ದರು. ಆಗ ಉದಯ್ ಚಾರಿಟಬಲ್ ಟ್ರಸ್ಟ್‌ನಿಂದ ಕೆಲವು ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದೆ ಎಂದರು.

ವೇದಿಕೆಯಲ್ಲಿ ಜಿಲ್ಲಾ ಪರಿಷತ್ ಮಾಜಿ ಅಧ್ಯಕ್ಷ ಬಿ.ಬಸವರಾಜು, ಜಿಪಂ ಮಾಜಿ ಸದಸ್ಯ ಎ.ಎಸ್.ರಾಜೀವ್, ಗ್ರಾಪಂ ಮಾಜಿ ಅಧ್ಯಕ್ಷ ಬಿ.ಕೆಂಚೇಗೌಡ, ರೈಸ್ ಮಿಲ್ ಮಟ್ಟೀಗೌಡ, ವೈ.ಸಿ.ರಾಜು, ವೈ.ಸಿ.ರಮೇಶ್, ಹಲವರಿದ್ದರು.

ಒಂದನೇ ಪುಟದಿಂದ

ಅಧಿಕಾರಿಗಳ ವಿರುದ್ಧ ಏನೂ ಕ್ರಮವಿಲ್ಲ....!

ಮಾಜಿ ಎಂಎಲ್‌ಸಿ ಆಸ್ತಿ ಅಕ್ರಮ ಮಾರಾಟ ಯತ್ನ: ಇತ್ತೀಚೆಗೆ ಮೈಸೂರು ಪಶ್ಚಿಮ ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ಮಾಜಿ ಎಂಎಲ್‌ಸಿ ಸಿದ್ದರಾಜು ಅವರಿಗೆ ಸೇರಿದ 22 ನಿವೇಶನಗಳನ್ನು ಅವರದೇ ನಕಲಿ ಆಧಾರ್‌ಕಾರ್ಡ್ ಇನ್ನಿತರ ದಾಖಲೆಯನ್ನು ಇಟ್ಟುಕೊಂಡು ಬೇರೊಬ್ಬರಿಗೆ ಮಾರಾಟ ಮಾಡುವ ಪ್ರಯತ್ನ ನಡೆದಿತ್ತು. ಇದರ ಬಗ್ಗೆ ಮಾಹಿತಿ ತಿಳಿದು ಸ್ಥಳಕ್ಕೆ ತೆರಳಿದ ಮಾಜಿ ಎಂಎಲ್‌ಸಿ ಸಿದ್ದರಾಜು, ಸಂಬಂಧಿಸಿದವರ ವಿರುದ್ಧ ಕ್ರಮ ಕೈಗೊಳ್ಳುವಂತೆ ದೂರು ಸಲ್ಲಿಸಿದ್ದರು. ಆದರೆ, ಇದೂವರೆಗೆ ಯಾರ ವಿರುದ್ಧವೂ ಕ್ರಮ ಗೊಂಡಿಲ್ಲ. ಇಲ್ಲಿನ ಸಬ್ ರಿಜಿಸ್ಟ್ರಾರ್ ಶ್ರೀಕಾಂತ್ ಅವರ ವೈಫಲ್ಯತೆ ಎದ್ದು ಕಾಣುತ್ತಿದೆ. ಅವರ ವಿರುದ್ಧ ಏನೂ ಕ್ರಮವಾಗಿಲ್ಲ. ಮೈಸೂರಲ್ಲಿ ಯಾವುದೇ ಅಕ್ರಮ ನಡೆದರೂ ಅದರ ಬಗ್ಗೆ ಕಠಿಣ ಕ್ರಮ ಕೈಗೊಳ್ಳದ ಪರಿಸ್ಥಿತಿ ಉದ್ಭವಿಸಿದೆ. ಸ್ವತಃ ಮುಖ್ಯಮಂತ್ರಿಗಳ ತವರಲ್ಲೇ ಈ ಪರಿಸ್ಥಿತಿಯಾದರೆ ಇನ್ನುಳಿದ ಕಡೆ ಹೇಗಿರಬಹುದು ಎಂದು ಶ್ರೀವತ್ಸ ಆತಂಕ ವ್ಯಕ್ತಪಡಿಸಿದರು.

ಇಲಾಖಾ ತನಿಖೆ ಪ್ರಗತಿಯಲ್ಲಿದೆ: ಶಾಸಕರ ಪ್ರಸ್ತಾಪಕ್ಕೆ ಉತ್ತರಿಸಿದ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಇಲಾಖಾ ತನಿಖೆ ಪ್ರಗತಿಯಲ್ಲಿದೆ. ಅದು ಮುಗಿದ ನಂತರ ಕ್ರಮ ಕೈಗೊಳ್ಳುವುದಾಗಿ ಹೇಳಿದರು.

ಸಾಲಕ್ಕೆ ಸಿಎಂ ಸಮರ್ಥನೆ

ನಂ. 1 ಆರ್ಥಿಕತೆ ಆಶಯ: 2025–26ರಲ್ಲಿ ದೇಶದ ಜಿಡಿಪಿಯು ಸ್ಥಿರ ಬೆಲೆಗಳಲ್ಲಿ ಶೇ.7.4 ರಷ್ಟು ಬೆಳವಣಿಗೆ ದಾಖಲಿಸಿದರೆ, ರಾಜ್ಯದ ಜಿ.ಎಸ್.ಡಿ.ಪಿಯು ಶೇ.8.1 ರಷ್ಟು ಬೆಳವಣಿಗೆ ದಾಖಲಿಸಿದೆ, ಕರ್ನಾಟಕದ ಜಿಎಸ್‌ಡಿಪಿ ದೇಶದ ಜಿಡಿಪಿ ಬೆಳವಣಿಗೆಗಿಂತ ಹೆಚ್ಚಿರುವುದು ನಮ್ಮ ಸರ್ಕಾರ ಬಂಡವಾಳ ಯೋಜನೆಗಳಿಗೆ ಹೆಚ್ಚಿನ ಅನುದಾನ ನೀಡುವ ಮೂಲಕ ಆರ್ಥಿಕ ಪ್ರಗತಿಗೆ ಉತ್ತೇಜನ ನೀಡುತ್ತಿರುವುದನ್ನು ಹೇಳುತ್ತದೆ, ಈ ಮೂಲಕ ರಾಜ್ಯದ ಆರ್ಥಿಕತೆಯನ್ನು ದೇಶದಲ್ಲಿಯೇ ನಂ.1 ಮಾಡುವತ್ತ ಹೆಜ್ಜೆಯಿಟ್ಟಿದ್ದೇವೆ ಎಂದು ಸಮರ್ಥಿಸಿಕೊಂಡರು.

ಮಿತಿಯುಡಿ ಸಾಲ: ವಿತ್ತೀಯ ಕೊರತೆ ಶೇ.3ರ ಒಳಗಿರಬೇಕು, ಒಟ್ಟು ಸಾಲ 25%ರ ಜಿಡಿಪಿಯನ್ನು ಮೀರಬಾರದು ಎಂಬ ಆರ್ಥಿಕ ಶಿಸ್ತನ್ನು ತರಲು ಮಾನದಂಡಗಳನ್ನು ರಾಜ್ಯ ಸರ್ಕಾರ ಪೂರೈಸಿದೆ, ವಿತ್ತೀಯ ಕೊರತೆ 2.95 ರೊಳಗಿದ್ದು, ಸಾಲದ ಮೊತ್ತ 24.94% ರಷ್ಟಿದೆ. ಇದು 25% ನ ಮಿತಿಯೊಳಗೆ ಇದೆ ಎಂದು ಸಮರ್ಥಿಸಿಕೊಂಡರು.

ಆರ್ಥಿಕ ಶಿಸ್ತು ಪಾಲನೆ: ನಾನು ಮಂಡಿಸಿದ 17 ಆಯವ್ಯಯದಲ್ಲಿಯೂ ಆರ್ಥಿಕ ಶಿಸ್ತನ್ನೂ ಪಾಲಿಸಲಾಗಿದೆ. ಜನರಿಗೆ ಸಾಮಾಜಿಕ ನ್ಯಾಯ ನೀಡಿ, ಆರ್ಥಿಕ, ಸಾಮಾಜಿಕ ಶಕ್ತಿ ತುಂಬುವುದು ಮುಖ್ಯ. ನಾವು ಅಧಿಕಾರದಲ್ಲಿದ್ದು, ಜನರಿಗೆ ಮಾಡುವ ಒಳಿತು ಅತ್ಯಂತ ಮುಖ್ಯವಾಗಿದೆ. ಮಹಿಳೆಯರು, ರೈತರು, ಕಾರ್ಮಿಕರು, ಹಿಂದುಳಿದವರು, ದೀನ–ದಲಿತರಿಗೆ ಶಕ್ತಿ ತುಂಬಿರುವುದು ಮುಖ್ಯ. ಕರ್ನಾಟಕ ರಾಜ್ಯದ್ದೊಂದೇ ಸಮಸ್ಯೆಯಲ್ಲ, ಕೇಂದ್ರ ಸರ್ಕಾರದ ಅಪಕ್ವ ಆರ್ಥಿಕ ನೀತಿಗಳಿಂದ ಉಂಟಾಗುತ್ತಿರುವ ಸಮಸ್ಯೆಯಾಗಿದೆ. ಆದರೆ, ನಮ್ಮ ಅಕ್ಕಪಕ್ಕದ ರಾಜ್ಯಗಳಿಗೆ ಹೋಲಿಸಿದರೂ ಸಹ ನಮ್ಮ ಸ್ವಂತ ರಾಜಸ್ವ ಸಂಗ್ರಹ ಉತ್ತಮವಾಗಿದೆ.

2026–27ನೇ ಸಾಲಿನ ಮುಂಗಡಪತ್ರವು 4,48,04 ಕೋಟಿ ರೂ. ಗಾತ್ರದ ಬಜೆಟ್ ಆಗಿದೆ, 2025–26ನೇ ಸಾಲಿನಲ್ಲಿ 4,09,549 ಕೋಟಿ ರೂ. ಆಗಿತ್ತು, 38,455 ಕೋಟಿ ರೂ. ಬಜೆಟ್ ಗಾತ್ರದಲ್ಲಿ ಹೆಚ್ಚಳವಾಗಿದೆ, ಶೇ.9.4ರಷ್ಟು ಬೆಳವಣಿಗೆಯಾಗಿದೆ ಎಂದು ಸಿದ್ದರಾಮಯ್ಯ ಪ್ರತಿಪಾದಿಸಿದರು.

ಶಿವಕುಮಾರ್ ಇಲ್ಲ...!?

ಮುಖ್ಯಮಂತ್ರಿ ಆಗುವ ಅರ್ಹತೆ ಇದೆ. ಅಶೋಕ್ ನೀನೂ ಮುಖ್ಯಮಂತ್ರಿ ಆಗಬಹುದು. ಆದರೆ, ವಿಜಯೇಂದ್ರ ಕಾಯುತ್ತಾ ಕುಳಿತಿದ್ದಾರೆ. ನಮ್ಮದಿರಲಿ, ಶಿವಕುಮಾರ್ ಮುಖ್ಯಮಂತ್ರಿ ಆಗುತ್ತಾರಾ ಎಂದು ಅಶೋಕ್ ಪದೇ ಪದೇ ಮಾಡಿದ ಪ್ರಸ್ತಾವಕ್ಕೆ, ನಮ್ಮಲ್ಲಿ ಎಲ್ಲರಿಗೂ ಅವಕಾಶ ಇದೆ ಎಂ.ಬಿ.ಪಾಟೀಲ್, ಈಶ್ವರ್ ಖಂಡ್ರೆ, ಕೆಎಚ್.ಮುನಿಯಪ್ಪ ದಿನೇಶ್ ಗುಂಡೂರಾವ್, ಕೋನರೆಡ್ಡಿ ಸಹ ಮುಖ್ಯಮಂತ್ರಿ ಆಗಬಹುದು ಎಂದರು. ಕೋನರೆಡ್ಡಿ ಹೆಸರೇಳಿದ ಸಿದ್ದರಾಮಯ್ಯ ಕೊನೆಗೂ ಶಿವಕುಮಾರ್ ಹೆಸರನ್ನು ಪ್ರಸ್ತಾಪಿಸಲೇ ಇಲ್ಲ. ಎಲ್ಲರಿಗೂ ಯೋಗ್ಯತೆ ಇದೆ. ಆದರೆ, ಅವಕಾಶ ಸಿಗಬೇಕು ಎನ್ನುತ್ತಿದ್ದಂತೆ ಪ್ರತಿಪಕ್ಷದ ಸದಸ್ಯರು ಗೊಳ್ಳೆಂದು ನಕ್ಕಿದ್ದಲ್ಲದೆ. ಅಂತೂ ಶಿವಕುಮಾರ್ ಅವರಿಗೆ ಅವಕಾಶ ಇಲ್ಲ, ನೀವೇ ಮುಂದಿನ ಬಜೆಟ್‌ಗಳನ್ನೂ ಮಂಡಿಸುತ್ತೀರಿ ಎನ್ನುವ ಮೂಲಕ ವಿಷಯಕ್ಕೆ ತೆರೆ ಎಳೆದರು.

ಕಾರಣವಾಯ್ತು!

ಕಣಕ್ಕಿಳಿಯುವಂತೆ ಒತ್ತಾಯಿಸಿದರು. ಈ ಬರಹಗಳಿಂದಲೇ ನಾನು 17 ಬಜೆಟ್ ಮಂಡಿಸಲು ನಾಂದಿ ಆಯಿತು. ನಾನು ಯಾವತ್ತೂ ಅಧಿಕಾರದ ಹಿಂದೆ ಹೋಗಿಲ್ಲ, ಬಯಸಲೂ ಇಲ್ಲ, ಅವೇ ಹುಡುಕಿಕೊಂಡು ಬಂದವು ಎಂದರು. 1983ರಲ್ಲಿ ಪಕ್ಷೇತರನಾಗಿ ವಿಧಾನಸಭೆಗೆ ಆಯ್ಕೆಗೊಂಡಾಗ ಅಂದಿನ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ, ನನ್ನನ್ನೂ ಕನ್ನಡ ಕಾವಲು ಸಮಿತಿ ಅಧ್ಯಕ್ಷನನ್ನಾಗಿ ನೇಮಿಸಿದರು. ಸ್ವಲ್ಪ ದಿನಗಳಲ್ಲೇ ರೇಷ್ಮೆ ಖಾತೆ ರಾಜ್ಯ ಸಚಿವನನ್ನಾಗಿ ಮಾಡಿದರು. ನನ್ನನ್ನು ಮಂತ್ರಿ ಮಾಡಿ ಎಂದು ಕೇಳಿರಲಿಲ್ಲ, ಆಗ ಬೇಕೆಂಬ ಆಸೆ ಪಟ್ಟಿರಲಿಲ್ಲ. ಅಂದೇ ಅಧಿಕಾರ ನನ್ನನ್ನು ಹುಡುಕಿಕೊಂಡು ಬಂದಿತ್ತು. ಆನಂತರ ಹಣಕಾಸು ಸಚಿವನೂ ಆದೆ, ಮುಖ್ಯಮಂತ್ರಿಯೂ ಆದೆ ಎಂದರು.

ಪಾಲಿಕೆಯಲ್ಲಿ 10 ಕೋಟಿ ಉಳಿತಾಯ ಬಜೆಟ್

ತೆರಿಗೆ ಸಂಗ್ರಹಿಸುವ ಗುರಿ ಹೊಂದಲಾಗಿದೆ.

ನೀರಿನ ತೆರಿಗೆ: ಕಳೆದ ವರ್ಷ ಕುಡಿಯುವ ನೀರು ಹಾಗೂ ಒಳ ಚರಂಡಿ ನಿರ್ವಹಣಾ ಕರದಿಂದ 57 ಕೋಟಿ ಕ್ರೋಢೀಕರಣವಾಗಿತ್ತು, ಈ ಬಾರಿ 115 ಕೋಟಿ ಸಂಗ್ರಹ ನಿರೀಕ್ಷೆ ಹೊಂದಲಾಗಿದೆ.

ನೆಲಬಾಡಿಗೆ ಶುಲ್ಕ: ನೆಲ ಬಾಡಿಗೆ, ಕಟ್ಟಡ ಪರವಾನಗಿ, ರಸ್ತೆ ಅಗೆತ ಶುಲ್ಕ, ನೀರಿನ ಸಂಪರ್ಕ ಶುಲ್ಕ, ಕಟ್ಟಡ ಪೂರ್ಣಗೊಂಡ ವರದಿ, ದಂಡ ಸೇರಿದಂತೆ ಇತರೆ ಮೂಲಗಳಿಂದ ಕಳೆದ ವರ್ಷ 15.73 ಕೋಟಿ ಸಂಗ್ರಹಿಸಲಾಗಿತ್ತು. ಆದರೆ ಈ ವರ್ಷ 27.50 ಕೋಟಿ ಸಂಗ್ರಹ ಮಾಡುವ ಗುರಿ ಹೊಂದಲಾಗಿದೆ.

ಉದ್ದಿಮೆ ಪರವಾನಗಿ ಶುಲ್ಕ: ಕಳೆದ ವರ್ಷ ಉದ್ದಿಮೆ ಪರವಾನಗಿ (ಟ್ರೇಡ್ ಲೈಸನ್ಸ್) ಯಿಂದ 6.53 ಕೋಟಿ ಕ್ರೋಢೀಕರಿಸಲಾಗಿತ್ತು. ಆದರೆ ಈ ಬಾರಿ 8.84 ಕೋಟಿ ಸಂಗ್ರಹದ ನಿರೀಕ್ಷೆ ಹೊಂದಲಾಗಿದೆ.

ಬಾಡಿಗೆಯಿಂದ ಬರುವ ಆದಾಯ: ಮೈಸೂರು ನಗರ ಪಾಲಿಕೆಗೆ ಸೇರಿದ ವಿವಿಧ ವಾಣಿಜ್ಯ ಸಂಕೀರ್ಣ, ಮಾರುಕಟ್ಟೆಗಳಿಂದ ಕಳೆದ ವರ್ಷ 2 ಕೋಟಿ ಹಾಗೂ ಗರುಡ ಮಾಲ್ ನೆಲಗುತ್ತಿಗೆಯಿಂದ 1.49 ಕೋಟಿ ಸಂಗ್ರಹ ಮಾಡಲಾಗಿತ್ತು. ಆದರೆ ಈ ವರ್ಷ ವಾಣಿಜ್ಯ ಸಂಕೀರ್ಣ, ಮಾರುಕಟ್ಟೆಗಳಿಂದ 5 ಕೋಟಿ ಹಾಗೂ ಗರುಡಮಾಲ್ ನೆಲಗುತ್ತಿಗೆಯಿಂದ 1.49 ಕೋಟಿ ಸೇರಿ ಒಟ್ಟು 6.49 ಕೋಟಿ ಆದಾಯ ನಿರೀಕ್ಷೆ ಮಾಡಲಾಗಿದೆ.

ಜಾಹೀರಾತು ಶುಲ್ಕ: ಜಾಹೀರಾತು ಶುಲ್ಕದಿಂದ ಕಳೆದ ವರ್ಷ 1 ಕೋಟಿ ಆದಾಯ ಸಂಗ್ರಹಿಸಲಾಗಿತ್ತು. ಈ ಬಾರಿ 2 ಕೋಟಿ ಆದಾಯ ನಿರೀಕ್ಷೆ ಮಾಡಲಾಗಿದೆ.

ಕೇಂದ್ರ, ರಾಜ್ಯ ಸರ್ಕಾರದ ಅನುದಾನ: ಹೊಸಗುತ್ತಿಗೆ, ಪೌರಕಾರ್ಮಿಕರ ವೇತನ, ವಿಶೇಷ ನೇಮಕಾತಿಯಡಿ ನೇಮಕಾತಿಗೊಂಡಿರುವ ಪೌರ ಕಾರ್ಮಿಕರ ವೇತನಕ್ಕೆ ರಾಜ್ಯ ಸರ್ಕಾರ 33.77 ಕೋಟಿ ನಿಗದಿ ಮಾಡಿದೆ. ಹಾಗೆಯೇ ಬೀದಿ ದೀಪ, ನೀರು ಸರಬರಾಜು ಸ್ಥಾವರಗಳ ವಿದ್ಯುಚ್ಛಕ್ತಿ ಪಾವತಿಗೆ 96.36.36 ಕೋಟಿ, ನೌಕರರ ವೇತನ, ನಿವೃತ್ತಿ ನೌಕರರ ಪಿಂಚಣಿಗಾಗಿ 90.38 ಕೋಟಿ, 16 ನೇ ಹಣಕಾಸು ಆಯೋಗದಿಂದ 110 ಕೋಟಿ, ಸಂಸದರು ಹಾಗೂ ಶಾಸಕರ ನಿಧಿಯಿಂದ 45 ಲಕ್ಷ ಅನುದಾನವನ್ನು ನಿರೀಕ್ಷೆ ಮಾಡಲಾಗಿದೆ. ನಗರ ಪಾಲಿಕೆಗೆ ಚುನಾವಣೆ ನಡೆಸದ ಹಿನ್ನೆಲೆಯಲ್ಲಿ ಆಡಳಿತಾಧಿಕಾರಿ ನಿತೇಶ್ ಕುಮಾರ್ ಪಾಟೀಲ್ ಮಂಡಿಸುತ್ತಿರುವ ಎರಡನೇ ಬಜೆಟ್ ಇದಾಗಿದೆ. 2023 ರಿಂದ ಚುನಾಯಿತ ಪ್ರತಿನಿಧಿಗಳಿಲ್ಲದ ಕಾರಣ ಆಡಳಿತಾಧಿಕಾರಿಗಳೇ ಆಯವ್ಯಯ ಮಂಡಿಸುತ್ತಿದ್ದಾರೆ.

ಇ–ಆಫೀಸ್ ಅನುಷ್ಠಾನ, ಲಿಡಾರ್, ಡ್ರೋನ್ ಸರ್ವೆ

ರೆಕಾರ್ಡ್ ಇಂಡೆಕ್ಸಿಂಗ್ ಅಂಡ್ ಡಿಜಿಟೈಲೈಜೇಷನ್ ತಂತ್ರಾಂಶವನ್ನು ಅಭಿವೃದ್ಧಿಪಡಿಸಿ ಸಂರಕ್ಷಿಸುವ ಸಂಬಂಧ ಈಗಾಗಲೇ 12,87,133 ಪ್ರತಿಗಳನ್ನು ಸ್ಕ್ಯಾನಿಂಗ್ ಅಂಡ್ ಡಿಜಿಟೈಲೈಜೇಷನ್ ಕಾರ್ಯ ಕೈಗೊಂಡು ಗಣಕೀಕರಣಗೊಳಿಸಲಾಗುತ್ತಿದೆ. ಅಲ್ಲದೆ ವಲಯ ಕಚೇರಿ 1ರಿಂದ 9ರವರೆಗೆ ಎಲ್ಲಾ ದಾಖಲೆಗಳು ಹಾಗೂ ಆಸ್ತಿ ಶಾಖೆಯ ಎಲ್ಲಾ ದಾಖಲೆಗಳನ್ನು ಪ್ರಸಕ್ತ ಆರ್ಥಿಕ ವರ್ಷದಲ್ಲಿ ಸಂಪೂರ್ಣವಾಗಿ ಗಣಕೀಕರಣಗೊಳಿಸಲು ಉದ್ದೇಶಿಸಲಾಗಿದ್ದು, ಇದಕ್ಕಾಗಿ 50 ಲಕ್ಷ ಕಾಯ್ದಿರಿಸಲಾಗಿದೆ.

ಯುಎಲ್‌ಎಂಎಸ್ ತಂತ್ರಾಂಶ ಅನುಷ್ಠಾನ: ಪ್ರಸ್ತುತ ನೀಡುತ್ತಿರುವ ಕಟ್ಟಡ ಪರವಾನಿಗೆ ಮಂಜೂರಾತಿಯನ್ನು ನಿರ್ಮಾಣ್–2.0 ತಂತ್ರಾಂಶದ ಮೂಲಕ ನೀಡಲಾಗುತ್ತಿದೆ. ಈಗ ಇದನ್ನು ಜನಸ್ನೇಹಿಯಾಗಿ ಪರಿಣಾಮಕಾರಿಯಾಗಿ ನೀಡಲು ಹೊಸದಾಗಿ ಯುಎಲ್‌ಎಂಎಸ್ (UNIFIED LAND MANAGEMENT SYSTEM) ತಂತ್ರಾಂಶವನ್ನು ಅಭಿವೃದ್ಧಿಪಡಿಸಲಾಗಿದೆ. ಇನ್ನು ಮುಂದೆ ನಿರ್ಮಾಣ್–2.0 ತಂತ್ರಾಂಶದ ಬದಲಾಗಿ ಯುಎಲ್‌ಎಂಎಸ್ ತಂತ್ರಾಂಶದ ಮೂಲಕ ಸಾರ್ವಜನಿಕರಿಗೆ ಸೇವೆ ನೀಡಲು ಉದ್ದೇಶಿಸಲಾಗಿದೆ.

ಲಿಡಾರ್, ಡ್ರೋನ್ ಸರ್ವೆ: ಲಿಡಾರ್ (ಲೈಟ್ ಡಿಟೆಕ್ಷನ್ ಅಂಡ್ ರೇಜಿಂಗ್) 3 ಡಿ ಮ್ಯಾಪಿಂಗ್ ಮೂಲಕ ಕಟ್ಟಡಗಳು, ರಸ್ತೆ ಜಾಲ, ಭೂ ಪ್ರದೇಶವನ್ನು ಗುರುತಿಸಲಾಗುವುದು. ಇದರಿಂದ ಆಸ್ತಿ ಮ್ಯಾಪಿಂಗ್ ಸುಧಾರಣೆ, ಸಂಚಾರ ನಿಯಂತ್ರಣ, ನೆರೆಪೀಡಿತ ಪ್ರದೇಶಗಳ ಗುರುತು, ನಿಖರ ಭೌಗೋಳಿಕ ಮಾಹಿತಿ ದೊರೆಯಲಿದೆ.

ಆಸ್ತಿ ಮಾಲೀಕರು ನಿಗದಿ ಮಾಡಿರುವ ಎಲ್ಲಾ ದಾಖಲಾತಿ ಸಲ್ಲಿಸಿದ್ದಲ್ಲಿ 7 ದಿನದೊಳಗೆ ಇ–ಖಾತೆ ನೀಡಲಾಗುವುದು.

ಕ್ಲೀನ್ ಸಿಟಿ ಆ್ಯಪ್: ತ್ಯಾಜ್ಯ ಸಂಗ್ರಹಿಸಲು ನಗರ ಪಾಲಿಕೆ ಸಿಬ್ಬಂದಿ ಮನೆಗಳ ಬಳಿಯೆ ಬರುತ್ತಾರೆ. ಒಂದು ವೇಳೆ ಬರದಿದ್ದರೆ ಕ್ಲೀನ್ ಸಿಟಿ ಆ್ಯಪ್ ಮೂಲಕ ದೂರು ನೀಡಿದರೆ ಅಪ್ಲೋಡ್ ಆದ 24 ಗಂಟೆಯೊಳಗೆ ಸಮಸ್ಯೆ ಪರಿಹರಿಸಲಾಗುವುದು.

ಅಕ್ಕ ಕೆಫೆ, ಕಾಫಿ ಕಿಯೋಸ್ಕ್: ನಗರ ಪಾಲಿಕೆಯ ಪ್ರಧಾನ ಕಚೇರಿಯಲ್ಲಿ ಅಕ್ಕ ಕೆಫೆ ಸ್ಥಾಪಿಸಲು ನಿರ್ಧರಿಸಲಾಗುವುದು. ಅಲ್ಲದೆ ಕೇಂದ್ರ ಹಾಗೂ ವಲಯ ಕಚೇರಿಗಳಲ್ಲಿ 5 ಕಾಫಿ ಕಿಯೋಸ್ಕ್ ಕೇಂದ್ರ ತೆರೆಯಲು ಉದ್ದೇಶಿಸಲಾಗಿದೆ.

ವಿದೇಶಗಳಂತೆ ಪಾರ್ಕ್‌ಗಳಲ್ಲಿ ಸಂಗೀತ ವಾದ್ಯ ಅಳವಡಿಕೆ

ಸಂಸ್ಕೃತಿಗೆ ಹೆಸರಾಗಿರುವ ಮೈಸೂರಿನ ಸಾಂಸ್ಕೃತಿಕ ಅಭಿವ್ಯಕ್ತಿಯನ್ನು ಉತ್ತೇಜಿಸಲು ಪ್ರಾಯೋಗಿಕವಾಗಿ ನಗರ ಪಾಲಿಕೆಯ ಒಂದು ಉದ್ಯಾನವನದಲ್ಲಿ ವಿದೇಶಿ ಮಾದರಿ ಹೊರಾಂಗಣ ಸಂಗೀತ ವಾದ್ಯಗಳನ್ನು ಅಳವಡಿಸಲು ಉದ್ದೇಶಿಸಲಾಗಿದೆ. ಮಕ್ಕಳು ಹಾಗೂ ಕುಟುಂಬಗಳು ಇದರಲ್ಲಿ ತೊಡಗಿಸಿಕೊಳ್ಳುವಿಕೆ ಮತ್ತು ಸಂಗೀತ ಕೌಶಲ್ಯಗಳ ಉತ್ತೇಜಿಸಲು ಇದು ಸಹಕಾರಿಯಾಗುತ್ತದೆ. ಇದಕ್ಕಾಗಿ 20 ಲಕ್ಷ ಕಾಯ್ದಿರಿಸಲಾಗಿದೆ. ನಗರ ಪಾಲಿಕೆಯ ವಲಯ ಕಚೇರಿ 1ರಿಂದ 9ರವರೆಗೆ ತಲಾ 1,500 ಗಿಡಗಳನ್ನು ನೆಡಲು ಯೋಜನೆ ರೂಪಿಸಲಾಗಿದೆ. ಕೆಲವು ಉದ್ಯಾನವನಗಳನ್ನು ದತ್ತು ಯೋಜನೆಯಲ್ಲಿ ಖಾಸಗಿ ಸಂಸ್ಥೆಗಳ ಮೂಲಕ ಅಭಿವೃದ್ಧಿ ಮಾಡಲು ಉದ್ದೇಶಿಸಲಾಗಿದೆ.

ಗ್ರೀನ್ ಪ್ರಾಪರ್ಟಿ ಟ್ಯಾಗ್ ಯೋಜನೆ: ಪರಿಸರ ಸ್ನೇಹಿ ಜೀವನ ಶೈಲಿಯನ್ನು ಉತ್ತೇಜಿಸಲು ಹಾಗೂ ಪರಿಸರ ಸಂರಕ್ಷಣೆ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲು ಉದ್ದೇಶಿಸಲಾಗಿದೆ. ಸೌರ ವಿದ್ಯುತ್ ಬಳಕೆ, ತ್ಯಾಜ್ಯ ವಿಂಗಡಣೆ ಹಾಗೂ ಹಸಿ ತ್ಯಾಜ್ಯದಿಂದ ಗೊಬ್ಬರ ಮಾಡುವ ಕಟ್ಟಡಗಳಿಗೆ ಗ್ರೀನ್ ಪ್ರಾಪರ್ಟಿ ಟ್ಯಾಗ್ ನೀಡಲಾಗುವುದು.

ವೇಸ್ಟ್ ಟು ವಂಡರ್ ಪಾರ್ಕ್: ಪ್ಲಾಸ್ಟಿಕ್, ಲೋಹ, ಇ–ತ್ಯಾಜ್ಯ ಹಾಗೂ ವಸ್ತ್ರ ತ್ಯಾಜ್ಯಗಳನ್ನು ಬಳಸಿ ಕಲಾತ್ಮಕ ನಿರ್ಮಿತಿ ಮಾಡಲಾಗುತ್ತಿದೆ. ಹೀಗೆ ತ್ಯಾಜ್ಯ ವಸ್ತುಗಳನ್ನು ಬಳಸಿ ಸೃಜನಾತ್ಮಕವಾಗಿ ಮರು ಬಳಕೆ ಮಾಡಲು ವೇಸ್ಟ್ ಟು ವಂಡರ್ ಪಾರ್ಕ್ ಅಭಿವೃದ್ಧಿಪಡಿಸಲಾಗುವುದು.

ಸಿಬಿಜಿ ಘಟಕ ಸ್ಥಾಪನೆ: ನಗರ ಪಾಲಿಕೆಯು ಭಾರತ್ ಪೆಟ್ರೋಲಿಯಂ ಕಾರ್ಪೋರೇಷನ್ ಲಿಮಿಟೆಡ್ ಸಹಯೋಗದೊಂದಿಗೆ ವಿದ್ಯಾರಣ್ಯಪುರಂನಲ್ಲಿ 150 ಟಿಪಿಡಿ ಸಾಮರ್ಥ್ಯದ ಸಂಕುಚಿತ ಜೈವ ಅನಿಲ (ಸಿಬಿಜಿ) ಘಟಕವನ್ನು PPP ಮಾದರಿಯಲ್ಲಿ ಸ್ಥಾಪಿಸಲಾಗುತ್ತಿದೆ. ಇದರಿಂದ ದಿನಕ್ಕೆ 150 ಟನ್ ಹಸಿ ತ್ಯಾಜ್ಯವನ್ನು ಸಂಸ್ಕರಿಸಿ ಶುದ್ಧ ಇಂಧನ ಉತ್ಪಾದಿಸಲು ಉದ್ದೇಶಿಸಲಾಗಿದೆ.

ಪಕ್ಷ, ಸರ್ಕಾರಕ್ಕೆ ವರ್ಚಸ್ವಿ ನಾಯಕತ್ವ ಕಲ್ಪಿಸಿ

- ಕಾಂಗ್ರೆಸ್ ವರಿಷ್ಠರಿಗೆ ಎಂಎಲ್ಸಿಗಳ ಮನವಿ
- ಖಾಸಗಿ ಹೋಟೆಲ್‌ನಲ್ಲಿ ಸಭೆ ಸೇರಿ ಚರ್ಚೆ

ಬೆಂಗಳೂರು, ಮಾ.25(ಕೆಎಂಶಿ)–ಪಕ್ಷ ಮತ್ತು ಸರ್ಕಾರಕ್ಕೆ ಹೊಸ ಉತ್ಸಾಹ, ವರ್ಚಸ್ಸು ತಂದುಕೊಡುವಂತಹ ನಾಯಕತ್ವಕ್ಕೆ ಅವಕಾಶ ನೀಡುವಂತೆ ವಿಧಾನ ಪರಿಷತ್ತಿನ ಕಾಂಗ್ರೆಸ್ ಸದಸ್ಯರು ಎಐಸಿಸಿ ವರಿಷ್ಠರನ್ನು ಆಗ್ರಹಿಸಿದ್ದಾರೆ.

ಮಂಗಳವಾರ ರಾತ್ರಿ ನಗರದ ಪಂಚತಾರಾ ಹೋಟೆಲ್‌ನಲ್ಲಿ ಸಭೆ ಸೇರಿದ್ದ ಈ ಶಾಸಕರು, ಪರೋಕ್ಷವಾಗಿ ಪಕ್ಷ ಮತ್ತು ಸರ್ಕಾರದ ಹಿತದೃಷ್ಟಿಯಿಂದ ನಾಯಕತ್ವ ಬದಲಾವಣೆಗೆ ಆಗ್ರಹಿಸಿದ್ದಾರೆ.

ಅಧಿಕಾರ ಹಸ್ತಾಂತರ ವಿದ್ಯಮಾನದಿಂದ ಪಕ್ಷ ಸಂಘಟನೆ ಮತ್ತು ಸರ್ಕಾರದ ಮೇಲೆ ಗಂಭೀರ ಸ್ವರೂಪದ ಪರಿಣಾಮ ಬೀರುತ್ತಿದೆ. ಹೀಗಾಗಿ ತಕ್ಷಣವೇ ಮಧ್ಯಪ್ರವೇಶಿಸಿ, ಇದಕ್ಕೆ ಮಂಗಳ ಹಾಡಬೇಕು ಎಂದು ಪರಿಷತ್‌ನ 20 ಸದಸ್ಯರು ಹೈಕಮಾಂಡ್‌ಗೆ ಮನವಿ ಮಾಡಿದ್ದಾರೆ.

ಕಳೆದ ಒಂದು ವರ್ಷದಿಂದ ನಾಯಕತ್ವ ಬದಲಾವಣೆ ವಿಚಾರ ದೊಡ್ಡಮಟ್ಟದಲ್ಲಿ ಚರ್ಚೆಯಾಗುತ್ತಿದೆ. ಇದರಿಂದ ಕಾರ್ಯಕರ್ತರು ಗೊಂದಲಕ್ಕೆ ಸಿಲುಕಿದ್ದಾರೆ. ಪಕ್ಷ ಸಂಘಟನೆ ಮೇಲೆ ಪರಿಣಾಮ ಉಂಟಾಗಿದೆ. ಹೀಗೆ ಮುಂದುವರೆದರೆ ಸದ್ಯದಲ್ಲಿಯೇ ನಡೆಯಲಿರುವ ಜಿಲ್ಲಾ, ತಾಲೂಕು ಪಂಚಾಯತ್ ಸೇರಿದಂತೆ ಸ್ಥಳೀಯ ಸಂಸ್ಥೆ ಚುನಾವಣೆಗಳ ಮೇಲೆ ತೀವ್ರ ಪರಿಣಾಮ ಬೀರಲಿದೆ ಎಂದು ಇವರು

ಶಿವರಾತ್ರಿಯಂದು ನಾನು ಮಾಂಸ ತಿಂತ್ತೇನೆ...

ಅಧಿಕಾರಿಗಳು ಮತ್ತು ಮನೆಯವರು ಹೇಳಿದಂತೆ ಕೇಳಬೇಕಲ್ಲವೇ ಎಂದರು. ಆಗ ಅಶೋಕ್, ಈ ಹಿಂದೆ ರಾಹುಕಾಲದಲ್ಲಿ ಬಜೆಟ್ ಮಂಡಿಸಿದ ಸಂದರ್ಭವೇ ಬೇರೆ, ಮುಂದಿನ ಬಜೆಟ್ ಅನ್ನು ನೀವು ಮಂಡಿಸುತ್ತೀರೋ, ಇಲ್ಲವೋ ಎಂಬ ಗೊಂದಲದ ವಾತಾವರಣ ಇದೆ. ಅದಕ್ಕಾಗಿ ಕಾಲ ನೋಡಿ ಬಜೆಟ್ ಮಂಡಿಸಿ, ಮುಂದಿನ ಬಜೆಟ್ ಪೀಠಿಕೆ ಹಾಕಿಕೊಂಡಿದ್ದೀರಾ ಎಂದರು.

ಆಗ ಸಿದ್ದರಾಮಯ್ಯ ಅವರು ನನಗೆ ಯಾವ ಕಾಲದ ಮೇಲೂ ನಂಬಿಕೆ ಇಲ್ಲ, ಹಬ್ಬದ ದಿನವೂ ಕೂಡ ಮಾಂಸ ತಿನ್ನುತ್ತೇನೆ, ಎಲ್ಲವೂ ಅವರ ನಂಬಿಕೆ ಎಂದರು.

ಇದ್ದಕ್ಕಿದ್ದಂತೆ ಮುಖ್ಯಮಂತ್ರಿ ಮಾತು ಶಾಲಿನ ಮೇಲೆ ಹೊರಳಿತು. ನನಗೆ ಶಾಲು ಧರಿಸುವುದರ ಮೇಲೆ ನಂಬಿಕೆ ಇದೆ. ನಾನು ಮೊದಲು ಟವಲ್ ಹಾಕುತ್ತಿದ್ದೆ, ಅದು ಪದೇ ಪದೇ ಬಿದ್ದು ಹೋಗುತ್ತಿತ್ತು, ಸ್ವಲ್ಪ ತುಂಡ ಇತ್ತು, ಅದಕ್ಕಾಗಿ ಈಗ ಶಾಲು ಹಾಕುತ್ತಿದ್ದೇನೆ, ಇದು ಸ್ವಲ್ಪ ದುಬಾರಿ ಎಂದರು.

ಪಕ್ಕದಲ್ಲಿ ಇದ್ದ ಶಿವಕುಮಾರ್ 13500 ರೂ. ಬೆಲೆ ಎಂದು ನೆನಪಿಸಿದರು, ನನ್ನದು ಮೈಸೂರು ರೇಷ್ಮೆ, ಡಿ.ಕೆ.ಶಿವಕುಮಾರ್ ಅವರ ಶಲ್ಯ ಉಲ್ಲನ್, ಜಗತ್ತಿನಲ್ಲಿ ಸಿಗುವ ಎಲ್ಲಾ ವಸ್ತುಗಳು ಈಗ ಬೆಂಗಳೂರು, ಮೈಸೂರಿನಲ್ಲಿ ಲಭ್ಯವಾಗುತ್ತಿದೆ ಎಂದರು.

ನಾನು ಶಾಲು ಹಾಕುವುದು ಯಾವುದೇ ಶಾಸ್ತ್ರಕ್ಕಾಗಿ ಅಲ್ಲ. ದೇವರಿದ್ದಾನೆ ಎಂದು ನಂಬುತ್ತೇನೆ, ಇಲ್ಲವಾದರೆ ಜಗತ್ತು ನಡೆಯುವುದಿಲ್ಲ, ಆದರೆ, ದೇವರು ದೇವಸ್ಥಾನದಲ್ಲೇ ಇದ್ದಾನೆ ಎಂದು ನಂಬುವುದಿಲ್ಲ. ಎಲ್ಲೆಡೆ ಇದ್ದಾನೆ. ಬಸವಣ್ಣ ಅವರು ಹೇಳಿದಂತೆ ಉಳ್ಳವರು ಶಿವಾಲಯವ ಮಾಡುವರು ನಾನೇನು ಮಾಡಲಿ ಬಡವ ಎಂಬ ವಚನವನ್ನು ಮುಖ್ಯಮಂತ್ರಿ ಉಲ್ಲೇಖಿಸಿದರು.

ಕಟ್ಟಡಗಳಿಗೆ ಗ್ರೀನ್ ಪ್ರಾಪರ್ಟಿ ಟ್ಯಾಗ್!

3 ಕೋಟಿ ಕಾಯ್ದಿರಿಸಲಾಗಿದೆ. ಹಾಗೆಯೇ ನೀರು ಸರಬರಾಜು ಮತ್ತು ಒಳಚರಂಡಿಗಳ ಕೊಳವೆ ಮಾರ್ಗಗಳ ಅಭಿವೃದ್ಧಿಗೆ 30 ಕೋಟಿ ಮೀಸಲಿಡಲಾಗಿದೆ.

ಪಾರಂಪರಿಕ ಶೌಚಾಲಯ: ನಗರದ ಪ್ರವಾಸಿ ತಾಣ ಹಾಗೂ ಜನನಿಬಿಡ ಪ್ರದೇಶದಲ್ಲಿ ಎರಡು ಸುಸಜ್ಜಿತವಾದ ಪಾರಂಪರಿಕ ಶೈಲಿಯ ಶೌಚಾಲಯ ನಿರ್ಮಾಣ ಮಾಡಲು ಉದ್ದೇಶಿಸಲಾಗಿದೆ.

ಮಾರುಕಟ್ಟೆ ನಿರ್ಮಾಣ: ಕೃಷ್ಣರಾಜ, ಚಾಮರಾಜ ಹಾಗೂ ನರಸಿಂಹರಾಜ ವಿಧಾನ ಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಹೆಚ್ಚಿನ ಜನಸಂದಣಿ ಇರುವ ಹಿನ್ನೆಲೆಯಲ್ಲಿ ಪ್ರಮುಖ ಸ್ಥಳಗಳಲ್ಲಿ PPP ಮಾದರಿಯಲ್ಲಿ ಮಾರುಕಟ್ಟೆ ನಿರ್ಮಾಣ ಮಾಡಲು ನಿರ್ಧರಿಸಲಾಗಿದೆ.

ಕಿರು ಅರಣ್ಯ ಅಭಿವೃದ್ಧಿ: ನಗರದ ದಟ್ಟಗಳ್ಳಿ ಜೋಡಿ ಬೇವಿನ ಮರದ ಉದ್ಯಾನವನದ ಮಾದರಿಯಲ್ಲಿ ನಗರದ ಮೂರು ಉದ್ಯಾನವನಗಳಲ್ಲಿ ಮಿಯಾವಾಕಿ ಮಾದರಿಯ ಕಿರು ಅರಣ್ಯವನ್ನು ಸಿಎಸ್‌ಆರ್ ಅನುದಾನದಲ್ಲಿ ಅಭಿವೃದ್ಧಿ ಮಾಡಲಾಗುವುದು.

ಪಾರ್ಕ್ ಸಂರಕ್ಷಣೆ: ನಗರ ಪಾಲಿಕೆಯ ಆಸ್ತಿಗಳನ್ನು ಸಂರಕ್ಷಣೆ ಮಾಡಿದಂತೆ ಎಲ್ಲಾ ಪಾರ್ಕ್‌ಗಳನ್ನು ಸಂರಕ್ಷಣೆ ಮಾಡಲಾಗುವುದು. ಅಲ್ಲದೆ ಪಾರ್ಕ್‌ಗಳಲ್ಲಿ ಮಾಹಿತಿ ಫಲಕಗಳನ್ನು ಅಳವಡಿಸಲು ಉದ್ದೇಶಿಸಲಾಗಿದ್ದು, ಇದಕ್ಕಾಗಿ 68 ಲಕ್ಷ ಮೀಸಲಿಡಲಾಗಿದೆ.

ಒಡೆಯರ್ ಎಕ್ಸ್‌ಪ್ರೆಸ್ ರಾಮನಗರದಲ್ಲಿ ನಿಲುಗಡೆ



ಮೈಸೂರು, ಮಾ.25– ಮೈಸೂರು–ಬೆಂಗಳೂರು ನಡುವೆ ಸಂಚರಿಸುವ ಒಡೆಯರ್ ಎಕ್ಸ್‌ಪ್ರೆಸ್ ರೈಲು ಇನ್ನು ಮುಂದೆ ರಾಮನಗರ ರೈಲ್ವೆ ನಿಲ್ದಾಣದಲ್ಲಿ ನಿಲುಗಡೆಯಾಗಲಿದೆ.

ರೈಲು ನಿಲುಗಡೆಗೆ ಅನುಮತಿ ನೀಡಿದ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರಿಗೆ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅಭಿನಂದನೆ ಸಲ್ಲಿಸಿದ್ದಾರೆ. ಇತ್ತೀಚೆಗೆ ರೈಲ್ವೆ ಸಚಿವರನ್ನು ಭೇಟಿ ಮಾಡಿದ್ದ ವೇಳೆ ರೇಷ್ಮೆನಾಡು ರಾಮನಗರ ಜಿಲ್ಲೆಯಲ್ಲಿ ಸಂಚರಿಸುವ ರೈಲ್ವೆ ಪ್ರಯಾಣಿಕರಿಗೆ ಬಹಳಷ್ಟು ಅನುಕೂಲವಾಗುವ ಕುರಿತು ಸಚಿವರಿಗೆ ಮನವರಿಕೆ ಮಾಡಿಕೊಟ್ಟ ಹಿನ್ನೆಲೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ.

ವ್ಯಕ್ತಿಯಿಂದ ಹಲ್ಲೆ: ಪೊಲೀಸರಿಗೆ ಮಹಿಳೆಯರ ದೂರು

ಮೈಸೂರು, ಮಾ.25– ಸರ್ಕಾರದ ಅನುಮತಿ ಇಲ್ಲದೇ ಅಕ್ರಮವಾಗಿ ನಡೆಸಲಾಗುತ್ತಿದ್ದ ಕರ್ನಾಟಕ ಒನ್ ಕೇಂದ್ರದ ಕುರಿತು ಪ್ರಶ್ನಿಸಿದ್ದ ಇಬ್ಬರು ಮಹಿಳೆಯರ ಮೇಲೆ ಹಲ್ಲೆ ಮಾಡಿದ್ದು, ಈ ಸಂಬಂಧ ವಿಜಯನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಕರ್ನಾಟಕ ಒನ್ ಕೇಂದ್ರದ ಮಾಲೀಕ ರವಿ ಎಂಬಾತನೇ ಹಲ್ಲೆ ಮಾಡಿದಾತ. ಈತ ಕರ್ನಾಟಕ ಒನ್ ಕೇಂದ್ರದ ಅಸ್ಥಿತ್ವದ ಕುರಿತು ಪ್ರಶ್ನೆ ಮಾಡಿದ್ದಕ್ಕೆ ಈ ಇಬ್ಬರು ಮಹಿಳೆಯರ ಮೇಲೆ ಹಲ್ಲೆ ನಡೆಸಿ, ಕೊಲೆ ಬೆದರಿಕೆ ಹಾಕಿದ್ದು, ವಿಜಯನಗರ ವಾಟರ್ ಟ್ಯಾಂಕ್ ಬಳಿಯ ಸಬ್ ರಿಜಿಸ್ಟ್ರಾರ್ ಕಚೇರಿ ಎದುರಿನ ಕರ್ನಾಟಕ ಒನ್ ಕೇಂದ್ರದಲ್ಲಿ ಈ ಘಟನೆ ನಡೆದಿದೆ. ಈತನ ವಿರುದ್ಧ ಗಗನ, ದೀಪಿಕಾ ಅವರು ವಿಜಯನಗರ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಮೈಸೂರು ಜಿಲ್ಲಾಡಳಿತದಿಂದ ಅನುಮತಿ ಪಡೆದು ಕರ್ನಾಟಕ ಒನ್ ಕೇಂದ್ರವನ್ನು ತೆರೆದಿದ್ದು, ಈ ಕೇಂದ್ರದ ಹತ್ತಿರದಲ್ಲಿಯೇ ರವಿ ಎಂಬಾತ ಅಕ್ರಮವಾಗಿ ಕರ್ನಾಟಕ ಒನ್ ಕೇಂದ್ರ ಹೆಸರಿನಲ್ಲಿ ಕೇಂದ್ರವನ್ನು ತೆರೆದಿದ್ದಾನೆ. ಈತ ನಮ್ಮನ್ನು ನಿಂದಿಸಿದ್ದಲ್ಲದೇ, ಎಳೆದಾಡಿ ಕೈ ಮುರಿದು ಹಲ್ಲೆ ನಡೆಸಿರುವುದಲ್ಲದೆ, ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದ್ದಾನೆ ಎಂದು ಮಹಿಳೆ ದೂರಿನಲ್ಲಿ ತಿಳಿಸಿದ್ದಾರೆ.

ಶಾಸಕ ಜಿ.ಟಿ.ದೇವೇಗೌಡರಿಂದ ಹೂಟಗಳ್ಳಿ ನಗರಸಭೆ ಅಧಿಕಾರಿಗಳ ವಿರುದ್ಧ ಹಕ್ಕುಚ್ಯುತಿ ಮಂಡನೆ

● ಜನಪ್ರತಿನಿಧಿ ಅಲ್ಲದ ವ್ಯಕ್ತಿಗಳೊಂದಿಗೆ ಕಾಮಗಾರಿಗಳ ವೀಕ್ಷಿಸಿದ ಆಯುಕ್ತರು ಸೇರಿ ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಒತ್ತಾಯ ● ಶಾಸಕ ಜಿ.ಟಿ.ದೇವೇಗೌಡರಿಗೆ ಪಕ್ಷಾತೀತವಾಗಿ ಶಾಸಕರ ಬೆಂಬಲ



ಶಾಸಕರ ಗೈರು ಹಾಜರಿಯಲ್ಲಿ ಚುನಾಯಿತ ಜನಪ್ರತಿನಿಧಿಗಳಲ್ಲದ ವ್ಯಕ್ತಿಗಳೊಂದಿಗೆ ಕಾಮಗಾರಿ ವೀಕ್ಷಣೆಗೆ ತೆರಳಿದ್ದ ಹೂಟಗಳ್ಳಿ ನಗರಸಭೆ ಅಧಿಕಾರಿಗಳು.



ಸದನದಲ್ಲಿ ಶಾಸಕ ಜಿ.ಟಿ.ದೇವೇಗೌಡರು ಮಾತನಾಡುತ್ತಿರುವುದು.

ಮೈಸೂರು,ಮಾ.25(ಪಿಎಂ)– ಜನಪ್ರತಿನಿಧಿ ಅಲ್ಲದ ವ್ಯಕ್ತಿಗಳೊಂದಿಗೆ ಸೇರಿಕೊಂಡು ಕಾಮಗಾರಿಗಳ ವೀಕ್ಷಣೆ ಮಾಡಿದ ಹೂಟಗಳ್ಳಿ ನಗರಸಭೆ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮಕ್ಕೆ ಆಗ್ರಹಿಸಿ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ವಿಧಾನಸಭೆಯಲ್ಲಿ ಇಂದು ಹಕ್ಕುಚ್ಯುತಿ ಮಂಡಿಸಿದ್ದು, ಇದಕ್ಕೆ ಪಕ್ಷಾತೀತ ಬೆಂಬಲ ವ್ಯಕ್ತವಾಯಿತು.

ಚುನಾಯಿತ ಜನಪ್ರತಿನಿಧಿಗಳಲ್ಲದ ವ್ಯಕ್ತಿಗಳೊಂದಿಗೆ ತಮ್ಮ ಕ್ಷೇತ್ರ ವ್ಯಾಪ್ತಿಯ ಹೂಟಗಳ್ಳಿ ನಗರಸಭೆಯ ವಿವಿಧ ವಾರ್ಡುಗಳಲ್ಲಿ ಸಂಚರಿಸಿ, ಕಾಮಗಾರಿ ಶುರು ಮಾಡಿಸಿದ್ದೇನೆಂದು ಹೇಳಿಕೊಂಡು ಸದರಿ ನಗರಸಭೆ ಆಯುಕ್ತರು ಸೇರಿದಂತೆ ಮತ್ತಿತರ ಅಧಿಕಾರಿಗಳು ಶಾಸಕರಾದ ತಮಗೆ ಅಗೌರವ ತೋರಿದ್ದಾರೆ ಎಂದು ಜಿ.ಟಿ.ದೇವೇಗೌಡರು ಕ್ರಮಕ್ಕೆ ಒತ್ತಾಯಿಸಿದರು.

ತಮ್ಮ ಘನತೆ, ಶಾಸಕ ಸ್ಥಾನಕ್ಕೆ ಅಗೌರವ ತೋರುವಂತೆ ವರ್ತಿಸಿರುವ ಅಧಿಕಾರಿಗಳನ್ನು ಸದನಕ್ಕೆ ಕರೆಯಿಸಿ, ಶಿಸ್ತು ಕ್ರಮಕ್ಕೆ ಗೊಳ್ಳುವಂತೆ ಗೌಡರು ಆಗ್ರಹಿಸಿದರು.

ನನ್ನ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಹೂಟಗಳ್ಳಿ ನಗರಸಭೆಗೆ ಸದ್ಯ ಜಿಲ್ಲಾಧಿಕಾರಿಗಳು ಅಧ್ಯಕ್ಷರಾಗಿದ್ದು, ನಗರಸಭೆ ಅನುದಾನದಡಿ ವಿವಿಧ ಕಾಮಗಾರಿಗೆ ಟೆಂಡರ್ ಕರೆದು, ಈಗಾಗಲೇ ಕಾರ್ಯಾದೇಶ ನೀಡಲಾಗಿದೆ. ಅಂತೆಯೇ ಕಾಮಗಾರಿ ಪ್ರಾರಂಭಿಸಬೇಕಾಗಿತ್ತು. ಆದರೆ, ವಿಧಾನಸಭೆ ಅಧಿವೇಶನದಲ್ಲಿ ಭಾಗವಹಿಸಬೇಕಾಗಿದ್ದ ಕಾರಣ ಸ್ವಲ್ಪ ತಡವಾಯಿತು. ನಾನು ಅಧಿವೇಶನದಲ್ಲಿ ಭಾಗವಹಿಸಿರುವ ಸಮಯ ನೋಡಿಕೊಂಡು ಮಾ.23 ಮತ್ತು 24ರಂದು ಆಯುಕ್ತ ಬಿ.ಎನ್.ಚಂದ್ರಶೇಖರ್, ಸಹಾಯಕ ಕಾರ್ಯಪಾಲಕ ಅಭಿಯಂತರ ಮಧು, ಕಿರಿಯ ಅಭಿಯಂತರ ಹರ್ಷ, ಇಂಜಿನಿಯರ್ ದಿಲೀಪ್ ಇತರರು ಹಿನಕಲ್‌ನ ಬೀದಿ ಬೀದಿಗಳಲ್ಲಿ ಜನಪ್ರತಿನಿಧಿಗಳಲ್ಲದ ವ್ಯಕ್ತಿಗಳೊಂದಿಗೆ ಸಂಚರಿಸಿ ವಿವಿಧ ಕಾಮಗಾರಿಗಳಿಗೆ ಟೆಂಡರ್ ಕರೆದು, ಶೀಘ್ರವೇ ಪ್ರಾರಂಭಿಸುವುದಾಗಿ ಹೇಳಿದ್ದಾರೆ.

ಈ ಬಗ್ಗೆ ಅಧಿಕಾರಿಗಳ ಮಾತನಾಡಿರುವುದು ಮತ್ತು ವೀಕ್ಷಣೆಯ ವಿಡಿಯೋಗಳನ್ನು ಸಂಗ್ರಹಿಸಲಾಗಿದೆ. ವಿಧಾನಸಭಾ ಅಧಿವೇಶನ ನಡೆಯುತ್ತಿರುವ ಸಂದರ್ಭದಲ್ಲೇ ಅಧಿಕಾರಿಗಳು, ಜನಪ್ರತಿನಿಧಿ ಅಲ್ಲದ ವ್ಯಕ್ತಿಗಳ ಜೊತೆಗೆ ತೆರಳಿ ಕಾಮಗಾರಿಗಳ ವೀಕ್ಷಣೆ ಮಾಡುವ ಮೂಲಕ ಶಾಸಕರ ಹಕ್ಕು ಮತ್ತು ಘನತೆಗೆ ಅಗೌರವ ತೋರಿದ್ದಾರೆ. ಹಾಗಾಗಿ ಅವರ ವಿರುದ್ಧ ಹಕ್ಕುಚ್ಯುತಿ ಮಂಡಿಸುತ್ತಿದ್ದೇನೆ. ಶಾಸಕರ ಘನತೆಗೆ ಚ್ಯುತಿ ತಂದಿರುವ ಅಧಿಕಾರಿ ಗಳನ್ನು ಕರೆಯಿಸಿ, ಶಿಸ್ತು ಕ್ರಮ ಜರುಗಿಸ ಬೇಕು ಎಂದು ಸಭಾಧ್ಯಕ್ಷರನ್ನು ಒತ್ತಾಯಿಸಿದರು.

ಶಾಸಕರ ಗಮನಕ್ಕೂ ತಾರದೆ ಅಧಿಕಾರಿಗಳೇ ಜನರ ಮುಂದೆ ಬಿಂಬಿಸಿಕೊಂಡು, ಸಾಂವಿಧಾನಿಕ ನಡಾವಳಿಕೆಗೆ ಚ್ಯುತಿ ತಂದಿದ್ದಾರೆ. ಇದನ್ನು ಗಂಭೀರವಾಗಿ ಪರಿಗಣಿಸಿ, ಕೂಡಲೇ ಅವರನ್ನು ಸದನಕ್ಕೆ ಕರೆಯಿಸಬೇಕು. ಶಾಸಕರೇ ಇಲ್ಲದೆ ಈ ರೀತಿ ಮಾಡಿದರೆ ಹೇಗೆ? ಆದ್ದರಿಂದ ಅಧ್ಯಕ್ಷರಾದ ನೀವು ಎಲ್ಲಾ ಶಾಸಕರ ರಕ್ಷಣೆಗೆ ಧಾವಿಸಬೇಕು. ಅವರ ವಿರುದ್ಧ ಕ್ರಮಕ್ಕೆ ಆದೇಶ ನೀಡಬೇಕು ಎಂದು ಆಗ್ರಹಿಸಿದರು.

ಜಿಟಿಡಿ ಬೆಂಬಲಕ್ಕೆ ನಿಂತ ಅಶೋಕ್: ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಮಾತನಾಡಿ, ಜಿ.ಟಿ.ದೇವೇಗೌಡರು ಈ ವಿಚಾರವಾಗಿ ತಮ್ಮೊಂದಿಗೆ ಬೆಳಿಗ್ಗೆ ಚರ್ಚಿಸಿದರು. ಯಾವ ಪಕ್ಷದ ಶಾಸಕರಾದರೂ ಸರಿ, ಈ ರೀತಿ ಅಗೌರವ ತೋರುವುದು ಸರಿಯಲ್ಲ. ಅಧಿಕಾರಿಗಳ ವಿರುದ್ಧ ಕ್ರಮವಾಗಬೇಕು ಎಂದು ಒತ್ತಾಯಿಸಿದರು.

ಅಧಿಕಾರಿಗಳ ವರ್ತನೆ ಖಂಡಿಸಿದ ಸುನೀಲ್ ಕುಮಾರ್: ವಿಧಾನಸಭೆ ವಿರೋಧ ಪಕ್ಷದ ಮುಖ್ಯ ಸಚೇತಕ ವಿ.ಸುನೀಲ್‌ಕುಮಾರ್ ಮಾತನಾಡಿ, ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಅಧಿಕಾರಿಗಳು ಶಾಸಕರಿಗೆ ಅಗೌರವ ತೋರಿದ್ದಾರೆ. ಹೀಗೆ ಶಾಸಕರ ಘನತೆಗೆ ಧಕ್ಕೆ ತರುವ ಅಧಿಕಾರಿಗಳಿಗೆ ಶಿಕ್ಷೆ ಆಗಬೇಕು. ಇದು ಒಂದು ಪಕ್ಷಕ್ಕೆ ಸೀಮಿತವಾಗಿಲ್ಲ. ಎಲ್ಲಾ ಪಕ್ಷದ ಶಾಸಕರಿಗೂ ಅಗೌರವ ತರುವ ಕೆಲಸಗಳು ನಡೆಯುತ್ತಿವೆ. ಶಾಸಕರ ಗೌರವಕ್ಕೆ ಧಕ್ಕೆ ತರುವ ಅಧಿಕಾರಿಗಳ ಮೇಲೆ ಮುಲಾಜಿಲ್ಲದೆ ಕ್ರಮ ಜರುಗಿಸಬೇಕು. ಅಧಿಕಾರಿಗಳು ರಾಜಕಾರಣ ಮಾಡುವುದಾದರೆ ಶಾಸಕರು ಯಾಕೆ ಇರಬೇಕು. ಅಧಿಕಾರಿಗಳನ್ನು ತಲೆ ಮೇಲೆ ಕೂರಿಸಿಕೊಳ್ಳುವ ಕೆಲಸ ಮಾಡಬಾರದು ಎಂದು ಚಾಟಿ ಬೀಸಿದರು.

ಶಿಸ್ತು ಕ್ರಮಕ್ಕೆ ಡಾ.ಅಶ್ವಥ್‌ನಾರಾಯಣ್ ಆಗ್ರಹ: ಡಾ.ಸಿ.ಎನ್.ಅಶ್ವಥ್‌ನಾರಾಯಣ್ ಮಾತನಾಡಿ, ಶಾಸಕರಿಗೆ ಅಗೌರವ ತೋರುವಂತಹ ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ಜರುಗಿಸಬೇಕು. ಅಧಿಕಾರಿಗಳೇ ಹೋಗಿ ಕಾಮಗಾರಿ ಪರಿಶೀಲನೆ ಮಾಡುವುದಾದರೆ ಶಾಸಕರ ಬೆಲೆ ಎಲ್ಲಿಗೆ ಹೋಗಬೇಕು. ಕಾನೂನು ಮೀರಿ ಹೋಗಿರುವ ಅಧಿಕಾರಿಗಳನ್ನು ಅಮಾನತುಪಡಿಸುವುದು ಅಥವಾ ಶಿಸ್ತು ಕ್ರಮ ಜರುಗಿಸುವ ಕೆಲಸವನ್ನು ಮಾಡಲೇಬೇಕು ಎಂದು ಒತ್ತಾಯಿಸಿದರು.

ಸರ್ಕಾರಕ್ಕೆ ಸ್ಪೀಕರ್ ಸೂಚನೆ: ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಮಾತನಾಡಿ, ಶಾಸಕರು ಆಡಳಿತ ಪಕ್ಷದಲ್ಲಿರಲಿ, ವಿರೋಧ ಪಕ್ಷದಲ್ಲಿರಲಿ ಶಾಸಕರಿಗೆ ಅಗೌರವ ತೋರುವ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಬೇಕು. ಶಾಸಕರಿಗೆ ಅಗೌರವ ತೋರುವುದು, ಅವರ ಘನತೆಗೆ ಧಕ್ಕೆ ತರುವಂತಹ ಕೆಲಸ ಮಾಡಿದ ಅಧಿಕಾರಿಗಳನ್ನು ಸಹಿಸಬಾರದು. ಈ ಬಗ್ಗೆ ಸರ್ಕಾರ ಪರಿಶೀಲಿಸಿ ಅಗತ್ಯ ಕ್ರಮವಹಿಸಬೇಕು. ಇದರ ಬಗ್ಗೆ ಸೂಕ್ತ ಆದೇಶವಾಗಬೇಕು ಎಂದು ಸರ್ಕಾರಕ್ಕೆ ಸೂಚಿಸಿದರು.

ರೈಲ್ವೆ ಎಂಪ್ಲಾಯೀಸ್ ಸಂಘದ ಕಚೇರಿ ಉದ್ಘಾಟನೆ



ಸೌತ್ ವೆಸ್ಟರ್ನ್ ರೈಲ್ವೆ ಎಂಪ್ಲಾಯೀಸ್ ಸಂಘದ ಕಚೇರಿಯನ್ನು ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಮುದಿತ್ ಮಿತ್ತಲ್ ಬುಧವಾರ ಉದ್ಘಾಟಿಸಿದರು.

ಮೈಸೂರು,ಮಾ.25(ಎಂಕೆ)– ನೈರುತ್ಯ ರೈಲ್ವೆ ಮೈಸೂರು ವಿಭಾಗದ ಸೌತ್ ವೆಸ್ಟರ್ನ್ ರೈಲ್ವೆ ಎಂಪ್ಲಾಯೀಸ್ ಸಂಘದ ಕಚೇರಿಯನ್ನು ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಮುದಿತ್ ಮಿತ್ತಲ್ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ನೈರುತ್ಯ ರೈಲ್ವೆ ಉನ್ನತಿಗೆ ಅಧಿಕಾರಿ–ಸಿಬ್ಬಂದಿಯ ಒಗ್ಗಟ್ಟು ಅವಶ್ಯವಾಗಿದೆ. ಎಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡುವ ಹಾಗೂ ಅಧಿಕಾರಿ–ಸಿಬ್ಬಂದಿಯ ಕಷ್ಟ–ಸುಖಗಳಿಗೆ ಸ್ಪಂದಿಸುವ ನಿಟ್ಟಿನಲ್ಲಿ ಸಂಘ ಅವಶ್ಯವಾಗಿದೆ. ಈ ನಿಟ್ಟಿನಲ್ಲಿ ಸಂಘದ ಕಚೇರಿ ಸ್ಥಾಪನೆ ಮಾಡಿರುವುದು ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸೌತ್ ವೆಸ್ಟರ್ನ್ ರೈಲ್ವೆ ಎಂಪ್ಲಾಯೀಸ್ ಸಂಘದ ವಲಯ ಕಾರ್ಯದರ್ಶಿ ಸಿ.ಆರ್.ಕಟ್ಟಿಮನಿ, ಕಾರ್ಯದರ್ಶಿ ಡಾ.ಶೇಕ್ ರೆಹಮಾನ್, ಮೈಸೂರು ವಿಭಾಗದ ಅಧ್ಯಕ್ಷ ಬಿ.ಆರ್.ರಾಮಕೃಷ್ಣ, ಕಾರ್ಯದರ್ಶಿ ಎಸ್.ಹರೀಶ್, ಉಪಾಧ್ಯಕ್ಷ ದೀಪಕ್, ಖಜಾಂಚಿ ಡಿ.ಎ.ಕುಮಾರ್ ಮತ್ತಿತರರಿದ್ದರು.

ಭಾನವಿ ಆಸ್ಪತ್ರೆಯಲ್ಲಿ 'ಭಾನವಿ ಸಂತಸ ಫರ್ಟಿಲಿಟಿ' ಘಟಕ ಆರಂಭ

ಮೈಸೂರು,ಮಾ.25(ಜಿಎ)–ಮೈಸೂರಿನ ಸಂತಸ ಫರ್ಟಿಲಿಟಿ ಸೆಂಟರ್, ಭಾನವಿ ಆಸ್ಪತ್ರೆ ಸಹಯೋಗದೊಂದಿಗೆ ಭಾನವಿ ಆಸ್ಪತ್ರೆಯಲ್ಲಿ 'ಭಾನವಿ ಸಂತಸ ಫರ್ಟಿಲಿಟಿ' ಘಟಕ ಆರಂಭಿಸಿದೆ ಎಂದು ಸಂತಸ ಫರ್ಟಿಲಿಟಿ ನಿರ್ದೇಶಕಿ ಡಾ.ಸೌಮ್ಯ ದಿನೇಶ್ ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿ, 18 ವರ್ಷಗಳಿಂದ ಸಂತಸ ಫರ್ಟಿಲಿಟಿ ಸೆಂಟರ್‌ನಿಂದ ಉತ್ತಮ ಸೇವೆ ನೀಡುತ್ತ ಬಂದಿದ್ದು, ಈಗ ಮತ್ತಷ್ಟು ಜನರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಭಾನವಿ ಆಸ್ಪತ್ರೆಯೊಂದಿಗೆ ಒಡಂಬಡಿಕೆ ಮಾಡಿಕೊಂಡು ಆಸ್ಪತ್ರೆಯಲ್ಲಿ ಘಟಕ ಆರಂಭಿಸಲಾಗಿದೆ ಎಂದರು.

ಈ ಘಟಕದಲ್ಲಿ ಎಲ್ಲ ವಿಧದ ಸಂತಾನ ಮತ್ತು ಐವಿಎಫ್ ಚಿಕಿತ್ಸೆಗಳು ಒಂದೇ ಸ್ಥಳದಲ್ಲಿ ಲಭ್ಯವಾಗುತ್ತವೆ. ನುರಿತ ವೈದ್ಯರು ಮತ್ತು ಆಧುನಿಕ ಯಂತ್ರೋಪಕರಣಗಳ ಸಹಾಯದಿಂದ ಎಐ ತಂತ್ರಜ್ಞಾನದೊಂದಿಗೆ ರೋಗಿಗಳಿಗೆ ಉತ್ತಮ ಸೇವೆ ನೀಡಲಾಗುವುದು. ಮಕ್ಕಳಾಗದ ಸಮಸ್ಯೆಗೆ ಪರೀಕ್ಷೆ ಸಲಹೆ ಮತ್ತು ಚಿಕಿತ್ಸೆ ಎಲ್ಲವೂ ಒಂದೇ ಸ್ಥಳದಲ್ಲಿ ಸುಲಭವಾಗಿ ಪಡೆಯಲು ವ್ಯವಸ್ಥೆ ಮಾಡಲಾಗಿದೆ. ಜನರಿಗೆ ಕೈಗೆಟಕುವ ದರದಲ್ಲಿ ಚಿಕಿತ್ಸೆ ನೀಡಲಾಗುವುದು ಎಂದರು.

ಗೋಷ್ಠಿಯಲ್ಲಿ ಭಾನವಿ ಆಸ್ಪತ್ರೆ ಪ್ರಧಾನ ವ್ಯವಸ್ಥಾಪಕ ಆರ್.ಪ್ರಶಾಂತ್, ಸಂತಸ ಫರ್ಟಿಲಿಟಿ ಸೆಂಟರ್ ಪ್ರಧಾನ ವ್ಯವಸ್ಥಾಪಕ ಜಗದೀಶ್, ಆಸ್ಪತ್ರೆಯ ಹಿರಿಯ ಸ್ತ್ರೀರೋಗ ತಜ್ಞೆ ಡಾ.ಆರ್.ಲತಾ, ವೈದ್ಯಕೀಯ ಅಧೀಕ್ಷಕ ಡಾ.ಚಂದನ್‌ಕುಮಾರ್, ನರ್ಸಿಂಗ್ ಅಧೀಕ್ಷಕ ನಿರಂಜನ್‌ಸ್ವಾಮಿ ಇದ್ದರು.

ಬಸವ ಜಯಂತಿ ಪ್ರಯುಕ್ತ ಮಾ.30; ಪೂರ್ವಭಾವಿ ಸಭೆ

ಮೈಸೂರು: ಅಪರ ಜಿಲ್ಲಾಧಿಕಾರಿ



ಅಧ್ಯಕ್ಷತೆಯಲ್ಲಿ ಏ.20 ರಂದು ಬಸವ ಜಯಂತಿಯನ್ನು ಆಚರಿಸುವ ಸಂಬಂಧ ಪೂರ್ವಭಾವಿ ಸಭೆಯನ್ನು ಮಾ.30 ರಂದು ಸಂಜೆ 4 ಗಂಟೆಗೆ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಕರೆಯಲಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ. ಎಂ.ಡಿ ಸುದರ್ಶನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ಇಂದು ಮಹಿಳಾ ವಿದ್ಯಾರ್ಥಿಗಳಿಗೆ, ವಿದ್ಯಾರ್ಥಿಯೇತರರಿಗೆ ಕ್ರೀಡಾ ಸ್ಪರ್ಧೆ

ಮೈಸೂರು,ಮಾ.25–ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಮಹಿಳಾ ವಿದ್ಯಾರ್ಥಿಗಳು ಮತ್ತು ವಿದ್ಯಾರ್ಥಿಯೇತರರಿಗೆ ಪೆನಾಲ್ಟಿ ಶೂಟ್ ಔಟ್ (ಹಾಕಿ), ಲೆಮನ್ ಅಂಡ್ ಸ್ಪೂನ್, ಮ್ಯೂಸಿಕಲ್ ಛೇರ್, ಬಾಲ್ ಇನ್ ದಿ ಬಾಸ್ಕೆಟ್, ಹಗ್ಗ–ಜಗ್ಗಾಟ ಕ್ರೀಡಾ ಸ್ಪರ್ಧೆಗಳನ್ನು ಮಾ.26ರಂದು ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಏರ್ಪಡಿಸಲಾಗಿರುತ್ತದೆ. ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸಿ ವಿಜೇತರಾದವರಿಗೆ ಮೆಡಲ್ಸ್ ಮತ್ತು ಪ್ರಶಸ್ತಿ ಪತ್ರಗಳನ್ನು ನೀಡಿ ಗೌರವಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಮೈಸೂರು ಇಲ್ಲಿನ ನೋಟಿಸ್ ಬೋರ್ಡ್ ಅಥವಾ ದೂರವಾಣಿ ಸಂಖ್ಯೆ: 0821–2564179 ಅನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಕೇಬಲ್ ಕಳ್ಳತನ

ಮೈಸೂರು,ಮಾ.25(ಪಿಎಂ)– ಶ್ಯಾದನಹಳ್ಳಿ ಗ್ರಾಮದ ನಾಗಾರ್ಜುನ ಬಡಾವಣೆಯಲ್ಲಿ ಇತ್ತೀಚೆಗಷ್ಟೇ ನಿರ್ಮಾಣ ಕಾಮಗಾರಿ ಪೂರ್ಣಗೊಂಡಿರುವ ಹೊಸ ಮನೆಯಲ್ಲಿ 98 ಸಾವಿರ ರೂ. ಮೌಲ್ಯದ ವಿದ್ಯುತ್ ಕೇಬಲ್‌ಗಳನ್ನು ಕಳ್ಳತನ ಮಾಡಿರುವ ಸಂಬಂಧ ಮೇಟಗಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಈ ಸಂಬಂಧ ಸದರಿ ಮನೆ ಮಾಲೀಕರಾದ ಎನ್.ಮಂಜುಳಾ ಅವರು ನೀಡಿರುವ ದೂರಿನನ್ವಯ ಪ್ರಕರಣ ದಾಖಲಾಗಿದೆ. ಮಾ.23ರಂದು ಬೆಳಗ್ಗೆ 1ನೇ ಮಹಡಿ ಹಾಗೂ 2ನೇ ಮಹಡಿಯಲ್ಲಿ ಅಳವಡಿಸಿದ್ದ ವೈರ್‌ಗಳನ್ನು ಕಳ್ಳರು ಕದ್ದಿರುವುದು ತಿಳಿಯಿತು ಎಂದು ದೂರಿನಲ್ಲಿ ಹೇಳಲಾಗಿದೆ.

ಹಿಂದೂ ಧರ್ಮಗುರುಗಳ ವಿರುದ್ಧ ಅವಹೇಳನ ಖಂಡಿಸಿ ಸೇವ್ ಹಿಂದೂ ಟೆಂಪಲ್ಸ್ ಟ್ರಸ್ಟ್ ವತಿಯಿಂದ ಪ್ರತಿಭಟನೆ



ಹಳೆ ಡಿಸಿ ಕಚೇರಿ ಎದುರು ಸೇವ್ ಹಿಂದೂ ಟೆಂಪಲ್ಸ್ ಟ್ರಸ್ಟ್ ವತಿಯಿಂದ ಬುಧವಾರ ಮೌನ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಮಾ.25(ಎಂಕೆ)– ಹಿಂದೂ ಧರ್ಮದ ಮಠಾಧಿಪತಿಗಳು ಹಾಗೂ ಧರ್ಮಗುರುಗಳ ಬಗ್ಗೆ ಅವಹೇಳನ ಖಂಡಿಸಿ ಸೇವ್ ಹಿಂದೂ ಟೆಂಪಲ್ಸ್ ಟ್ರಸ್ಟ್ ವತಿಯಿಂದ ಬುಧವಾರ ಮೌನ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಹಳೆ ಡಿಸಿ ಕಚೇರಿ ಎದುರು ಜಮಾವಣೆಗೊಂಡ ನೂರಾರು ಮಂದಿ 'ನಮ್ಮ ಧರ್ಮಗುರುಗಳು ನಮ್ಮ ಹೆಮ್ಮೆ' ಎಂಬಿತ್ಯಾದಿ ಘೋಷಣಾ ಫಲಕಗಳನ್ನು ಹಿಡಿದು ಹಿಂದೂ ಧಾರ್ಮಿಕ ಮೌಲ್ಯಗಳು, ಸಂಪ್ರದಾಯಗಳನ್ನು ಉಳಿಸಿ–ಬೆಳೆಸುತ್ತಿರುವ ಮಠಾಧಿಪತಿಗಳು ಮತ್ತು ಧರ್ಮಗುರುಗಳ ವಿರುದ್ಧ ಕೇಳಿಬರುತ್ತಿರುವ ಅವಹೇಳನಕಾರಿ ಹೇಳಿಕೆಗಳನ್ನು ಖಂಡಿಸಿದರು.

ಹಿಂದೂ ಧರ್ಮಗುರುಗಳು ಕೇವಲ ಆಧ್ಯಾತ್ಮಿಕ ಮಾರ್ಗದರ್ಶಕರು ಮಾತ್ರವಲ್ಲ. ಸಮಾಜದಲ್ಲಿ ಶಿಕ್ಷಣ, ಆರೋಗ್ಯ, ವಸತಿ ಮತ್ತು ದಾಸೋಹ ಕ್ಷೇತ್ರಗಳಲ್ಲಿ ಮಹತ್ವದ ಪಾತ್ರ ವಹಿಸುತ್ತಿದ್ದಾರೆ. ಗ್ರಾಮೀಣ ಮತ್ತು ಹಿಂದುಳಿದ ಪ್ರದೇಶಗಳಲ್ಲಿ ಮಠಗಳು ನೀಡುತ್ತಿರುವ ಸೇವೆ ಅನನ್ಯವಾಗಿದ್ದು, ಸರ್ಕಾರಗಳು ತಲುಪದ ಸ್ಥಳಗಳಿಗೆ ಮಠಗಳು ಸೇವೆಯನ್ನು ತಲುಪಿಸುತ್ತಿವೆ. ಈ ನಿಟ್ಟಿನಲ್ಲಿ ಮಠ ಮತ್ತು ಮಠಾಧೀಶರ ವಿರುದ್ಧ ಕೆಲ ಜನಪ್ರತಿನಿಧಿಗಳು ಅವಹೇಳನಕಾರಿ ಹೇಳಿಕೆಗಳನ್ನು ನೀಡುವುದು ಸರಿಯಲ್ಲ ಎಂದು ಕಿಡಿಕಾರಿದರು.

ಸೇವ್ ಹಿಂದೂ ಟೆಂಪಲ್ಸ್ ಟ್ರಸ್ಟ್ ಅಧ್ಯಕ್ಷ ಎಂ.ಎಂ.ನಿಖಿಲೇಶ್ ಮಾತನಾಡಿ, ಧರ್ಮಗುರುಗಳ ವಿರುದ್ಧ ನಿರಾಧಾರ ಆರೋಪಗಳು ಮತ್ತು ಅವಹೇಳನಕಾರಿ ಹೇಳಿಕೆಗಳು ಇತ್ತೀಚೆಗೆ ಹೆಚ್ಚಾಗಿ ಕೇಳಿಬರುತ್ತಿರುವುದು ಅತ್ಯಂತ ವಿಷಾದನೀಯ. ಇದು ಕೇವಲ ವ್ಯಕ್ತಿಗಳ ವಿರುದ್ಧದ ಅವಮಾನವಲ್ಲ, ಸಂಪೂರ್ಣ ಹಿಂದೂ ಸಮಾಜದ ಭಾವನೆಗಳಿಗೆ ಧಕ್ಕೆ ನೀಡುವುದಾಗಿದೆ. ಮುಂದಿನ ದಿನಗಳಲ್ಲಿ ಇಂತಹ ಘಟನೆಗಳು ಮರುಕಳಿಸಿದರೆ, ನಾವು ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸುತ್ತೇವೆ ಎಂದು ಎಚ್ಚರಿಸಿದರು. ಮಾಜಿ ಶಾಸಕ ಎಲ್.ನಾಗೇಂದ್ರ, ಮಾಜಿ ಉಪ ಮೇಯರ್ ಶೈಲೇಂದ್ರ, ಮುಖಂಡರಾದ ಸಚ್ಚಿದಾನಂದ, ಸತೀಶ್‌ಗೌಡ, ದಿನೇಶ್ ಗೌಡ, ಮಂಜು, ಶಿವು, ರಾಘವೇಂದ್ರ, ಪವನ್‌ಗೌಡ, ಮನು ಶೈವ, ಅಭಿ, ಸಂತೋಷ್‌ಕುಮಾರ್, ಅರ್ಜುನ್, ಸುನೀಲ್ ಜಯಪುರ ಮತ್ತಿತರರಿದ್ದರು.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಮಾ.25–ಆರ್ಕೋಲಾಜಿ ವಿದ್ಯುತ್ ಮಾರ್ಗದಲ್ಲಿ ಭೂಗತ ಕೇಬಲ್ ಕೆಲಸದ ನಿಮಿತ್ತ ನಾಳೆ (ಮಾ.26) ಬೆಳಗ್ಗೆ 10ರಿಂದ ಸಂಜೆ 5ರವರೆಗೆ ಎಂ.ಜಿ ಕೊಪ್ಪಲು, ಮಾದೇಗೌಡ ಸರ್ಕಲ್, 7ರಿಂದ 10ನೇ ಕ್ರಾಸ್, ಸ್ಮಶಾನ ಸುತ್ತಮುತ್ತ, ಯಲ್ಲಮ್ಮ ದೇವಸ್ಥಾನ ಸುತ್ತಮುತ್ತ, ಕಾವೇರಿ ಸರ್ಕಲ್ ಸುತ್ತಮುತ್ತ ವಿದ್ಯುತ್ ವ್ಯತ್ಯಯವಾಗಲಿದೆ. ಅಂತೆಯೇ ಮೇಗಳಾಪುರ ಐ.ಪಿ ಮತ್ತು ದುದ್ದಗೆರೆ–ಎನ್.ಜೆ.ವೈ ಫೀಡರ್‌ಗಳ ವ್ಯಾಪ್ತಿಯಲ್ಲಿ ದುದ್ದಗೆರೆ ಗೇಟ್‌ನಿಂದ ಲಕ್ಷ್ಮೀಪುರ ಗ್ರಾಮದವರೆಗೆ ರಸ್ತೆ ಅಗಲೀಕರಣ ಕಾಮ ಗಾರಿ ನಿಮಿತ್ತ ಮಾ.27 ಹಾಗೂ 29 ರಂದು ಬೆಳಿಗ್ಗೆ 10ರಿಂದ ಸಂಜೆ 6ರವರೆಗೆ ದುದ್ದಗೆರೆ, ಮಹಾದೇವಿ ಕಾಲೋನಿ, ಲಕ್ಷ್ಮೀಪುರ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಸಂಸದ ಯದುವೀರ್ ಒಡೆಯರ್ ಹುಟ್ಟುಹಬ್ಬ...



ಮೈಸೂರು–ಕೊಡಗು ಲೋಕಸಭಾ ಸದಸ್ಯರಾದ ಯದುವೀರ್ ಒಡೆಯರ್ ಅವರ ಹುಟ್ಟುಹಬ್ಬದ ಅಂಗವಾಗಿ ಕಾಡಾ ಕಚೇರಿ ಆವರಣದಲ್ಲಿ ರಕ್ತದಾನ ಶಿಬಿರ, ಆರೋಗ್ಯ ತಪಾಸಣೆ ನಡೆಯಿತು. ಈ ವೇಳೆ ಮೈಸೂರು ನಗರ ಬಿಜೆಪಿ ಅಧ್ಯಕ್ಷರೂ ಆದ ಮಾಜಿ ಶಾಸಕ ಎಲ್.ನಾಗೇಂದ್ರ ನಗರ ಕಾರ್ಯದರ್ಶಿ ಪುನೀತ್ ಗೌಡ, ಚಾಮರಾಜ ಕ್ಷೇತ್ರ ಪ್ರಧಾನ ಕಾರ್ಯದರ್ಶಿ ರಾಮೇಗೌಡ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ದೇಶ - ವಿದೇಶ

ಭಯೋತ್ಪಾದನೆ ನಂಟು: ಕರ್ನಾಟಕದ ಯುವಕ ಸೇರಿ 12 ಮಂದಿ ಬಂಧನ

ಅಮರಾವತಿ: ಭಯೋತ್ಪಾದಕರ ನಂಟು ಹೊಂದಿರುವ



ಶಂಕೆಯಡಿ ಕರ್ನಾಟಕದ ಯುವಕ ಸೇರಿದಂತೆ ವಿವಿಧ ರಾಜ್ಯಗಳ 12 ಮಂದಿಯನ್ನು ಆಂಧ್ರಪ್ರದೇಶ ಪೊಲೀಸರು ಬಂಧಿಸಿದ್ದಾರೆ. ಶಂಕಿತರನ್ನು ಸೆರೆ ಹಿಡಿಯುವ ಕಾರ್ಯಾಚರಣೆಗೆ ಬಿಹಾರ, ಕರ್ನಾಟಕ, ದೆಹಲಿ, ಮಹಾರಾಷ್ಟ್ರ, ಪಶ್ಚಿಮ ಬಂಗಾಳ, ತೆಲಂಗಾಣ ಮತ್ತು ರಾಜಸ್ಥಾನಗಳಲ್ಲಿ ವಿಶೇಷ ತಂಡಗಳನ್ನು ನಿಯೋಜಿಸಲಾಗಿತ್ತು ಎಂದು ಪೊಲೀಸರು ತಿಳಿಸಿದ್ದಾರೆ. ಬಂಧಿತರಲ್ಲಿ ಮೂವರು ಆಂಧ್ರಪ್ರದೇಶದ ವಿಜಯವಾಡದವರು. ಈ ಮೂವರು ಉಗ್ರಗಾಮಿ ಸಿದ್ಧಾಂತಗಳನ್ನು ಪ್ರಚುರಪಡಿಸುತ್ತಿದ್ದರು ಮತ್ತು ನಿಷೇಧಿತ ಭಯೋತ್ಪಾದಕ ಸಂಘಟನೆಗಳಿಗೆ ಸಂಬಂಧಿಸಿದ ಚಟುವಟಿಕೆಗಳನ್ನು ನಿರ್ವಹಿಸುತ್ತಿದ್ದರು. ಯುವಕರನ್ನು ಪ್ರೇರೇಪಿಸಲು, ಜಿಹಾದ್ ಚಟುವಟಿಕೆಗಳನ್ನು ಕೈಗೊಳ್ಳಲು ಮತ್ತು ತಮ್ಮ ಜಾಲವನ್ನು ದೇಶಾದ್ಯಂತ ವಿಸ್ತರಿಸಲು ಅವರು ಅಲ್ ಮಲಿಕ್ ಇಸ್ಲಾಮಿಕ್ ಯೂತ್ ಎಂಬ ಹೆಸರಿನಲ್ಲಿ ತಂಡವನ್ನು ಕಟ್ಟಿಕೊಂಡಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ. ಮೂವರು ಅಲ್ ಕೈದಾ ಮತ್ತು ಐಎಸ್ ಸಂಘಟನೆಗಳಿಗೆ ಸಂಬಂಧಿಸಿದ ವಿದೇಶಿ ನಿರ್ವಾಹಕರೊಂದಿಗೆ ಸಂಪರ್ಕದಲ್ಲಿದ್ದರು ಮತ್ತು ರಾಷ್ಟ್ರವಿರೋಧಿ ಚಟುವಟಿಕೆಗಳಲ್ಲಿ ಭಾಗಿಯಾಗುತ್ತಿದ್ದರು. ಘಜ್ವಾಇಹಿಂದ್(ಭಾರತದ ವಿರುದ್ಧದ ಯುದ್ಧ) ಎನ್ನುವ ಕಲ್ಪನೆಯೊಂದಿಗೆ ಕೆಲಸ ಮಾಡುತ್ತಿದ್ದರು ಎಂದು ತಿಳಿಸಿದ್ದಾರೆ.

ಲಂಡನ್ ಮೊದಲ ಮಹಿಳಾ ಆರ್ಚ್ ಬಿಷಪ್ ಆಗಿ ಸಾರಾ ನೇಮಕ



ಲಂಡನ್: ಬ್ರಿಟನ್‌ನ ಕ್ಯಾಂಟರ್‌ಬರಿಯಲ್ಲಿರುವ ಚರ್ಚ್ ಆಫ್ ಇಂಗ್ಲೆಂಡ್‌ನ ಮೊದಲ ಮಹಿಳಾ ಆರ್ಚ್ ಬಿಷಪ್ ಆಗಿ ಸಾರಾ ಮುಲ್ಲಾಲ್ಲಿ (63) ಅವರು ಬುಧವಾರದಿಂದ ಸೇವೆ ಆರಂಭಿಸಿದರು.

ಚರ್ಚ್ ಆಫ್ ಇಂಗ್ಲೆಂಡ್‌ನ ಮುಖ್ಯಸ್ಥೆ ಹಾಗೂ ವಿಶ್ವದಾದ್ಯಂತದ 'ಆಂಗ್ಲಿಕನ್ ಕಮ್ಯುನಿಯನ್'ನ ಆಧ್ಯಾತ್ಮಿಕ ನಾಯಕಿ ಆಗಿ ಇವರು ಕಾರ್ಯನಿರ್ವಹಿಸಲಿದ್ದಾರೆ.

ಅಮೆರಿಕದಲ್ಲಿರುವ ಎಪಿಸ್ಕೋಪಲ್ ಚರ್ಚ್ ಸೇರಿದಂತೆ ಸ್ವತಂತ್ರ ಚರ್ಚ್‌ಗಳ ಸಂಘವಾಗಿರುವ ಕಮ್ಯುನಿಯನ್, ಒಟ್ಟು 10 ಕೋಟಿ ಸದಸ್ಯರನ್ನು ಹೊಂದಿದೆ. ಈ ಹಿಂದೆ ಶುಶ್ರೂಷಕಿಯಾಗಿ, ಕ್ಯಾನ್ಸರ್ ರೋಗಿಗಳ ಆರೈಕೆ ಮಾಡಿದ್ದ ಸಾರಾ, 40ನೇ ವಯಸ್ಸಿಗೆ ಪಾದ್ರಿಯಾದರು. ಜನವರಿಯಲ್ಲಿ ಇವರನ್ನು ಆರ್ಚ್‌ಬಿಷಪ್ ಆಗಿ ಅಧಿಕೃತವಾಗಿ ಆಯ್ಕೆ ಮಾಡಲಾಗಿತ್ತು. ಬುಧವಾರ ನಡೆದ ಕಾರ್ಯಕ್ರಮದಲ್ಲಿ ಅವರು ಅಧಿಕೃತವಾಗಿ ಸೇವೆ ಆರಂಭಿಸಿದರು. ರಾಜಕುಮಾರ ವಿಲಿಯಂ, ರಾಜಕುಮಾರಿ ಕ್ಯಾಥರೀನ್, ಬ್ರಿಟನ್ ಪ್ರಧಾನಿ ಕಿಯರ್ ಸ್ಟಾರ್ಮರ್ ಹಾಗೂ ಕಮ್ಯುನಿಯನ್‌ನ 42 ಸದಸ್ಯ ಚರ್ಚ್‌ಗಳ ಪ್ರತಿನಿಧಿಗಳು ಹಾಜರಿದ್ದರು.

ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ ಆರೋಪ: ಬಿಜೆಪಿ ನಾಯಕನ ಪುತ್ರ ಅರೆಸ್ಟ್

ಪಣಜಿ: 25 ರಿಂದ 30 ಅಪ್ರಾಪ್ತ ಬಾಲಕಿಯರಿಗೆ



ಲೈಂಗಿಕ ದೌರ್ಜನ್ಯ ಎಸಗಿದ ಆರೋಪಕ್ಕೆ ಸಂಬಂಧಿಸಿ ದಕ್ಷಿಣ ಗೋವಾ ಪೊಲೀಸರು ಬಿಜೆಪಿ ನಾಯಕ ನೋರ್ವನ ಪುತ್ರನನ್ನು ಬಂಧಿಸಿದ್ದಾರೆ. ಮಡಗಲ್–ಕಾಕೋರಾದ ನಿವಾಸಿ ಮತ್ತು ಕರ್ಚೋರೆಮ್ ಪುರಸಭೆಯ ಬಿಜೆಪಿ ಕೌನ್ಸಿಲರ್ ಪುತ್ರ ಸೋಹಮ್ ನಾಯಕ್ ಬಂಧಿತ ಆರೋಪಿಯಾಗಿದ್ದು, ಪೋಕ್ಸೋ ಕೇಸ್ ದಾಖಲಾಗಿದೆ.

ಲೈಂಗಿಕ ದೌರ್ಜನ್ಯದ ಆರೋಪಕ್ಕೆ ಸಂಬಂಧಿಸಿ ವ್ಯಾಪಕ ಆಕ್ರೋಶ ವ್ಯಕ್ತವಾದ ಬೆನ್ನಲ್ಲೇ ಆರೋಪಿಯನ್ನು ಬಂಧಿಸಲಾಗಿದೆ. ತನಿಖೆ ವೇಳೆ ಆರೋಪಿ ಕಳೆದ 3 ವರ್ಷಗಳಿಂದ ಅಪ್ರಾಪ್ತ ಬಾಲಕಿಯರ ಮೇಲೆ ನಿರಂತರವಾಗಿ ಲೈಂಗಿಕ ದೌರ್ಜನ್ಯ ಎಸಗಿದ್ದ. ತನ್ನ ಕೃತ್ಯದ ವಿಡಿಯೋ ಮಾಡಿ, ಬಳಿಕ ಬ್ಲ್ಯಾಕ್‌ಮೇಲ್ ಮಾಡುತ್ತಿದ್ದ ಎನ್ನುವುದು ಬಹಿರಂಗವಾಗಿದೆ. ಈ ಕುರಿತು ಪ್ರತಿಕ್ರಿಯಿಸಿದ ಗೋವಾ ರಾಜ್ಯ ಕಾಂಗ್ರೆಸ್ ಅಧ್ಯಕ್ಷ ಅಮಿತ್ ಪಾಟ್ಕರ್, ಸರ್ಕಾರ ಈ ಪ್ರಕರಣದಲ್ಲಿ ಮಧ್ಯಪ್ರವೇಶಿಸಿ ನಿಷ್ಪಕ್ಷಪಾತ ತನಿಖೆ ನಡೆಸಬೇಕು ಎಂದು ಒತ್ತಾಯಿಸಿದ್ದಾರೆ. ಕಳೆದ ವಾರ ಪಾರ್ಟಿಯೊಂದರಲ್ಲಿ ಆರೋಪಿ ತನ್ನ ಸ್ನೇಹಿತರಿಗೆ ಕೃತ್ಯದ ಬಗ್ಗೆ ಹೇಳುತ್ತಾ ವಿಡಿಯೋ ತೋರಿಸಿದ ಬಳಿಕ ಲೈಂಗಿಕ ದೌರ್ಜನ್ಯ ನಡೆಸಿದ ಬಗ್ಗೆ ಬಹಿರಂಗಗೊಂಡಿತ್ತು.

ಮದುವೆ ಹೊಸ್ತಿಲಲ್ಲಿದ್ದ ಇಸ್ರೇಲ್ ಯೋಧೆ ಧಾರುಣ ಹತ್ಯೆ

ಟೆಲ್ ಅವೀವ್: ಮದುವೆ ಹೊಸ್ತಿಲಲ್ಲಿದ್ದ ಇಸ್ರೇಲ್‌ನ



ಯೋಧೆ ಹಿಜ್ಬುಲ್ಲಾ ಬಂಡುಕೋರರ ದಾಳಿಗೆ ಧಾರುಣವಾಗಿ ಬಲಿಯಾಗಿದ್ದಾರೆ. ನುರಿಯಲ್ ಡುಬಿನ್ (27) ಮೃತ ಯೋಧೆ. ಉತ್ತರ ಇಸ್ರೇಲ್‌ನಲ್ಲಿ ಹಿಜ್ಬುಲ್ಲಾ ಬಂಡುಕೋರರು ನಡೆಸಿದ ದಾಳಿಗೆ ಡುಬಿನ್ ತುತ್ತಾಗಿದ್ದರು. ಭಯೋತ್ಪಾದಕ ಸಂಘಟನೆಯು ಲೆಬನಾನಿನ ಪ್ರದೇಶದಿಂದ ಉತ್ತರ ಇಸ್ರೇಲ್‌ನಲ್ಲಿರುವ ಸಮುದಾಯಗಳ ಮೇಲೆ 38 ರಾಕೆಟ್‌ಗಳ ಭಾರಿ ದಾಳಿ ನಡೆಸಿದ ನಂತರ ಮೊಶಾವ್ ಮಾರ್ಗಲಿಯೊಟ್‌ನ ಡುಬಿನ್ ಹತ್ಯೆಗೀಡಾಗಿದ್ದಾರೆ. ಮಚನಾಯಿಮ್ ಜಂಕ್ಷನ್ ಪ್ರದೇಶದಲ್ಲಿ ರಾಕೆಟ್‌ಗಳ ದಾಳಿ ನಡೆಸಲಾಯಿತು. ದಾಳಿಗೆ ಯೋಧೆ ಬಲಿಯಾಗಿದ್ದಾರೆ. ಇತರ ಇಬ್ಬರಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಮ್ಯಾಗೆನ್ ಡೇವಿಡ್ ಆಡಮ್ ತಂಡಗಳು ಘಟನಾ ಸ್ಥಳಕ್ಕೆ ಧಾವಿಸಿ ಡುಬಿನ್‌ಗೆ ಜೀವ ಉಳಿಸುವ ವೈದ್ಯಕೀಯ ಚಿಕಿತ್ಸೆ ನೀಡಲು ಮುಂದಾದವು. ಆದರೆ, ಅಷ್ಟೊತ್ತಿಗೆ ಯೋಧೆ ಮೃತಪಟ್ಟಿದ್ದರು.

ಇದಕ್ಕೂ ಮುನ್ನ ಇರಾನ್‌ನಿಂದ ಹಾರಿಸಿದ ಕ್ಷಿಪಣಿಯಿಂದ ಬೆಡೋಯಿನ್ ಸಮುದಾಯದ ವೈದ್ಯರೊಬ್ಬರು ಗಂಭೀರವಾಗಿ ಗಾಯಗೊಂಡಿದ್ದರು. ಅವರ ಪತ್ನಿ ಮತ್ತು ಇಬ್ಬರು ಮಕ್ಕಳಿಗೂ ಗಾಯಗಳಾಗಿದ್ದವು. ಘಟನಾ ಸ್ಥಳಕ್ಕೆ ಕರೆಸಿಕೊಂಡ ಎಂಡಿಎ ತಂಡಗಳು ಗಾಯಾಳುಗಳಿಗೆ ಚಿಕಿತ್ಸೆ ನೀಡಿ ಬೀರ್‌ಶೆವಾದಲ್ಲಿರುವ ಸೊರೊಕಾ ಆಸ್ಪತ್ರೆಗೆ ಸ್ಥಳಾಂತರಿಸಿದವು. ನೆಗೆವ್, ಗಾಜಾ ಸುತ್ತಮುತ್ತ ಸೈರನ್‌ಗಳು ಸದ್ದು ಮಾಡುತ್ತಿವೆ.

ರಷ್ಯಾದಿಂದ ಮತ್ತೆ 6 ಬ್ಯಾರಲ್ ಕಚ್ಚಾ ತೈಲ ಖರೀದಿಸಿದ ಭಾರತ

ನವದೆಹಲಿ: ಹಾರ್ಮುಜ್ ಜಲಸಂಧಿಯ ಬಿಕ್ಕಟ್ಟು ಪೂರ್ಣ ಪ್ರಮಾಣದಲ್ಲಿ ಇನ್ನೂ ಬಗೆಹರಿಯದ ಹಿನ್ನೆಲೆ ಭಾರತ, ರಷ್ಯಾದಿಂದ ತೈಲ ಖರೀದಿ



ಮುಂದುವರಿಸಿದೆ. ತೈಲ ಪೂರೈಕೆಯಲ್ಲಿ ವ್ಯತ್ಯಯವಾಗದಂತೆ ನೋಡಿಕೊಳ್ಳಲು ಮುಂದಿನ ತಿಂಗಳು ವಿತರಣೆಗಾಗಿ ಭಾರತ ಸುಮಾರು 6 ಕೋಟಿ ಬ್ಯಾರಲ್ ಕಚ್ಚಾ ತೈಲವನ್ನು ರಷ್ಯಾದಿಂದ ಖರೀದಿಸಿದೆ ಎಂದು ವರದಿಯಾಗಿದೆ.

ವರದಿಗಳ ಪ್ರಕಾರ, ಬ್ರೆಂಟ್ ಕಚ್ಚಾ ತೈಲಕ್ಕಿಂತ ಪ್ರತಿ ಬ್ಯಾರಲ್‌ಗೆ 5 ರಿಂದ 15 ಡಾಲರ್‌ವರೆಗಿನ ಪ್ರೀಮಿಯಂನಲ್ಲಿ ಬುಕ್ ಮಾಡಲಾಗಿದೆ. ಇದು ಕಳೆದ ಫೆಬ್ರವರಿಯಲ್ಲಿ ಭಾರತ ಖರೀದಿಸಿದ ತೈಲಕ್ಕಿಂತ 2 ಪಟ್ಟು ಹೆಚ್ಚಾಗಿದೆ. ಈಗ ಬುಕಿಂಗ್ ಮಾಡಲಾದ 60 ಮಿಲಿಯನ್ ಬ್ಯಾರಲ್ ಕಚ್ಚಾತೈಲವು ಮುಂದಿನ ತಿಂಗಳು ಭಾರತವನ್ನ ತಲುಪಲಿದೆ. ಇದರಿಂದ ದೇಶದಲ್ಲಿ ಬಹುತೇಕ ತೈಲ ಕೊರತೆ ಸರಿದೂಗಲಿದೆ ಎಂದು ಅಂದಾಜಿಸಲಾಗಿದೆ. ಇನ್ನೂ ಇದಕ್ಕೂ ಮುನ್ನವೇ ಅಮೆರಿಕವು ತೈಲ ಖರೀದಿ ಮೇಲಿನ ನಿರ್ಬಂಧ ವನ್ನ ತಾತ್ಕಾಲಿಕ ವಾಗಿ ತೆಗೆದುಹಾಕಿದ ಹಿನ್ನೆಲೆ ವಿಶ್ವದ ಅತಿದೊಡ್ಡ ಸಂಸ್ಕರಣಾ ಘಟಕ ಹೊಂದಿರುವ ಭಾರತದ ರಿಲಯನ್ಸ್ ಇಂಡಸ್ಟ್ರೀಸ್ ಇರಾನ್‌ನಿಂದ 50 ಲಕ್ಷ ಬ್ಯಾರಲ್ ಕಚ್ಚಾ ತೈಲ ಖರೀದಿಸಿದೆ.

ಖಾಸಗಿ ಗ್ಯಾಸ್ ಸಂಸ್ಥೆ ಮುಂದೆ ಉದ್ದನೆಯ ಸಾಲು



ಖಾಸಗಿ ಅಡುಗೆ ಅನಿಲದ ಏಜೆನ್ಸಿ ಮುಂದೆ ಸಿಲಿಂಡರ್‌ಗಳ ಸರತಿ ಸಾಲೇ ನಿರ್ಮಾಣವಾಗಿತ್ತು.

ಮಾಲೀಕರ ಮನವಿಗೂ ಓಗೊಡದ ಗ್ರಾಹಕರು

ಮಡಿಕೇರಿ, ಮಾ.25–ಮಧ್ಯಪ್ರಾಚ್ಯ ದೇಶಗಳಲ್ಲಿ ಯುದ್ಧ ಪರಿಸ್ಥಿತಿ ಮುಂದುವರೆದಿರುವ ನಡುವೆಯೇ ನಗರದಲ್ಲಿ ಅಡುಗೆ ಅನಿಲ ಸಿಲಿಂಡರ್ ಅಭಾವ ಎಂದಿನಂತೆ ಮುಂದುವರೆದಿದೆ. ಖಾಸಗಿ ಗ್ಯಾಸ್ ಪೂರೈಕೆ ಸಂಸ್ಥೆಯೊಂದು ನಗರದ ಕರಗ ಪಂಪ್‌ಕೆರೆ ಸಮೀಪ ಗ್ಯಾಸ್ ಸಿಲಿಂಡರ್ ವಿತರಣೆ ಕಚೇರಿ ಮತ್ತು ಗೋಡೌನ್ ಹೊಂದಿದ್ದು, ಈ ಸಂಸ್ಥೆಯ ಗ್ರಾಹಕರು ಅಡುಗೆ ಅನಿಲ ಪಡೆ ಯಲು ಸರತಿ ಸಾಲಿನಲ್ಲಿ ನಿಂತು ಕೊಂಡಿದ್ದು ಕಂಡು ಬಂತು. ಹಲವು ದಿನಗಳ ಬಳಿಕ ಬುಧವಾರ ಈ ಸಂಸ್ಥೆಯ ಅನಿಲ ಪೂರೈಕೆ ಮಾಡುವ ಲಾರಿ ಒಟ್ಟು 300 ಸಿಲಿಂಡರ್‌ಗಳನ್ನು ಹೊತ್ತು ಆಗಮಿಸಿತ್ತು. ಈ ಮಾಹಿತಿ ಅರಿತ ಗ್ರಾಹಕರು ಕಚೇರಿ ಬಾಗಿಲು ತೆಗೆಯುವ ಮುನ್ನವೇ ರಸ್ತೆ ಉದ್ದಕ್ಕೂ ಖಾಲಿ ಸಿಲಿಂಡರ್‌ಗಳನ್ನು ಇಟ್ಟು ಸರತಿ ಸಾಲಿನಲ್ಲಿ ಕಾದು ನಿಂತಿದ್ದರು.

9.30ರ ಸಮಯದಲ್ಲಿ ಕಚೇರಿ ತೆರೆದಾಗ ನಿಂತಿದ್ದ ಕೆಲವು ಗ್ರಾಹಕರು ಅನಿಲ ಸಿಲಿಂಡರ್‌ಗಳನ್ನು ಪಡೆದುಕೊಂಡು ನೆಮ್ಮದಿಯ ನಿಟ್ಟುಸಿರಿನ ಸಹಿತ ಮನೆಗಳಿಗೆ ಮುಖ ಮಾಡಿದರು. ತಡವಾಗಿ ಬಂದ ಗ್ರಾಹಕರು ಅಡುಗೆ ಅನಿಲ ಸಿಲಿಂಡರ್ ಲಭ್ಯವಾಗದೆ ಖಾಲಿ ಸಿಲಿಂಡರ್ ನೊಂದಿಗೆ ಮನೆಯ ದಾರಿ ಹಿಡಿದರು. ಶುಕ್ರವಾರ ಮತ್ತೊಂದು ಲೋಡ್ ತುಂಬಿದ ಸಿಲಿಂಡರ್ ನಗರಕ್ಕೆ ಬರಲಿದ್ದು, ಇಂದು ಸಿಲಿಂಡರ್ ಸಿಗದವರು ಅಂದು ಪಡೆದುಕೊಳ್ಳುವಂತೆ ಸಂಸ್ಥೆಯ ಪ್ರತಿನಿಧಿಗಳು ಗ್ರಾಹಕರ ಮನವೊಲಿಸಿದರು.

ನಗರದ ಬೇರಾವ ಅಧಿಕೃತ ಕಂಪನಿಗಳ ಏಜೆನ್ಸಿಗಳಲ್ಲಿ ಅಡುಗೆ ಅನಿಲದ ಅಭಾವ ಮೂಡಿಲ್ಲ. ನಿಯಮದಂತೆ 25 ದಿನಕ್ಕೊಮ್ಮೆ ಗ್ರಾಹಕರಿಗೆ ಸಿಲಿಂಡರ್ ವಿತರಣೆಯಾಗುತ್ತಿದೆ ಎಂದು ಪ್ರಮುಖ ಅನಿಲ ಏಜೆನ್ಸಿ ಮಾಲೀಕರು 'ಮೈಸೂರು ಮಿತ್ರ' ನಿಗೆ ತಿಳಿಸಿದರು.

ಇಬ್ನಿವಳವಾಡಿ ಗ್ರಾಮದಲ್ಲಿ ಹುಲಿ ಪ್ರತ್ಯಕ್ಷ

ಜೀವ ಭಯದಲ್ಲಿ ಕಾರ್ಮಿಕರು



ಮಡಿಕೇರಿ, ಮಾ.25–ನಗರಕ್ಕೆ ಹೊಂದಿಕೊಂಡಂತಿರುವ ಇಬ್ನಿವಳವಾಡಿ ಗ್ರಾಮದಲ್ಲಿ ಹುಲಿ ಪ್ರತ್ಯಕ್ಷವಾಗಿದೆ. ಗ್ರಾಮದ ಪೊನ್ನಚೆಟ್ಟಿರ ಸಂದೀಪ್ ಎಂಬವರ ತೋಟದಲ್ಲಿ ಹುಲಿ ಕಂಡು ಬಂದಿದ್ದು, ಕಾಫಿ ತೋಟದಲ್ಲಿ ಅಳವಡಿಸಿದ್ದ ಸಿ.ಸಿ ಕ್ಯಾಮರಾದಲ್ಲಿ ಹುಲಿ ಸಂಚಾರ ಸೆರೆಯಾಗಿದೆ. ಇದರಿಂದ ಇಬ್ನಿವಳವಾಡಿ ಗ್ರಾಮಸ್ಥರು, ಗ್ರಾಮದಂಚಿನ ನಗರ ಪ್ರದೇಶದ ನಿವಾಸಿಗಳಲ್ಲಿ ತೀವ್ರ ಆತಂಕ ಮನೆ ಮಾಡಿದೆ. ಈ ಪ್ರದೇಶ ಕಾಫಿ ತೋಟ ಮತ್ತು ಸಂರಕ್ಷಿತ ಅರಣ್ಯ ಪ್ರದೇಶವನ್ನು ಹೊಂದಿದ್ದು, ಹುಲಿಯ ಯಾವಕಡೆ ಹೋಗಿದೆ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ.

ತೋಟದ ಮಾಲೀಕರು ನೀಡಿದ ದೂರಿನ ಮೇರೆಗೆ ಸ್ಥಳಕ್ಕೆ ಅರಣ್ಯ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈ ಭಾಗದ 7–8 ಕಿ.ಮಿ ವ್ಯಾಪ್ತಿಯಲ್ಲಿ ಹುಲಿಯನ್ನೇ ಹೋಲುವ ಕಾಡು ಪ್ರಾಣಿಯ ಓಡಾಟದ ಬಗ್ಗೆ ಸಂಶಯವಿದ್ದು, ಆದರೆ ಅದು ಹುಲಿಯೋ ಅಥವಾ ಚಿರತೆಯನ್ನೇ ಹೋಲುವ ಪರ್ಪಣವೋ ಎಂಬ ಬಗ್ಗೆ ಗೊಂದಲ ಇತ್ತು. ಆದರೆ ಸಿ.ಸಿ. ಕ್ಯಾಮರಾದಲ್ಲಿ ಹುಲಿ ಎಂಬುದು ಖಚಿತವಾಗಿದೆ ಎಂದು ಅಲ್ಲಿನ ಗ್ರಾಮಸ್ಥರು ತಿಳಿಸಿದ್ದಾರೆ. ತೋಟದಲ್ಲಿ ಕಾಳು ಮೆಣಸು ಕುಯ್ಲು ಕೂಡ ನಡೆಯುತ್ತಿದ್ದು, ಜೀವ ಭಯದಿಂದ ಕಾರ್ಮಿಕರು ಕೆಲಸಕ್ಕೆ ಬರಲು ಹಿಂದೇಟು ಹಾಕುತ್ತಿದ್ದಾರೆ.

ಇಂದು ಬೆಳಗ್ಗೆ ಹುಲಿ ಸಂಚರಿಸಿದ ಮಾಹಿತಿಯನ್ನು ತೋಟದ ಮಾಲೀಕರು ನಮಗೆ ನೀಡಿದ್ದು, ಇದೀಗ ಆತಂಕ ಹುಟ್ಟಿಸಿದೆ. ಮಕ್ಕಳಿಗೆ ಪರೀಕ್ಷೆಗಳು ನಡೆಯುತ್ತಿದ್ದು, ಇಲ್ಲಿಂದ ನಡೆದುಕೊಂಡೇ ಮಕ್ಕಳು ನಗರದ ಶಾಲೆಗಳಿಗೆ ಹೋಗಬೇಕು. ಗ್ರಾಮದಲ್ಲಿ ಹಬ್ಬಗಳು ಕೂಡ ಇದ್ದು, ಹಗಲು ರಾತ್ರಿ ಹಬ್ಬಾಚರಣೆ ನಡೆಯುತ್ತದೆ. ಇಂತಹ ಸಂದರ್ಭದಲ್ಲಿ ಯಾವ ಕಡೆಗೂ ತೆರಳಲು ಭಯಪಡುವಂತಾಗಿದೆ. ಅರಣ್ಯ ಇಲಾಖೆ ತಕ್ಷಣವೇ ಹುಲಿ ಸೆರೆಗೆ ಕ್ರಮ ಕೈಗೊಳ್ಳಬೇಕು ಎಂದು ತೋಟದ ಕಾರ್ಮಿಕ ಚಂದ್ರು ಒತ್ತಾಯಿಸಿದರು.

ಸ್ಥಳಕ್ಕೆ ಸಿಸಿಎಫ್ ಸೋನಲ್ ವೃಷ್ಣಿ, ಡಿಸಿಎಫ್ ಅಭಿಷೇಕ್, ಅರಣ್ಯ ಅಧಿಕಾರಿ ಕನ್ನಂಡ ರಂಜನ್, ಆರ್.ಆರ್.ಟಿ ಮತ್ತು ಇಟಿಎಫ್ ಸಿಬ್ಬಂದಿಗಳು ಆಗಮಿಸಿ, ಹುಲಿ ಜಾಡು ಪತ್ತೆಗೆ ಕೂಂಬಿಂಗ್ ಕಾರ್ಯಾಚರಣೆ ಆರಂಭಿಸಿದ್ದಾರೆ. ಸಂಜೆ ವೇಳೆ ಹುಲಿ ಜಾಡು ಪತ್ತೆ ಮಾಡಲು ಥರ್ಮಲ್ ಡ್ರೋಣ್ ಬಳಕೆ ಮಾಡಲು ನಿರ್ಧರಿಸಲಾಗಿದೆ. ಸುತ್ತಮುತ್ತಲಿನ ಗ್ರಾಮಸ್ಥರು ಎಚ್ಚರಿಕೆಯಿಂದ ಇರುವಂತೆ ಅರಣ್ಯಾಧಿಕಾರಿಗಳು ಮನವಿ ಮಾಡಿದ್ದಾರೆ. ಕಾಫಿ ತೋಟದಲ್ಲಿ ಪ್ರತ್ಯಕ್ಷವಾಗಿರುವ ಹುಲಿಯನ್ನು ತಕ್ಷಣವೇ ಸೆರೆ ಹಿಡಿದು ಬೇರೆಡೆಗೆ ಸ್ಥಳಾಂತರಿಸುವಂತೆ ಅರಣ್ಯಾಧಿಕಾರಿಗಳಿಗೆ ಶಾಸಕ ಡಾ.ಮಂತರ್ ಗೌಡ ಆದೇಶಿಸಿದ್ದಾರೆ.

ಮಳಿಗೆಗಳ ಹರಾಜಿನಲ್ಲಿ ಪುರಸಭೆಗೆ 18 ಲಕ್ಷ ನಷ್ಟ



ಪುರಸಭೆಗೆ ಸೇರಿದ ಮಳಿಗೆಗಳ ಹರಾಜಿನ ಕಾರ್ಯ ಬುಧವಾರ ನಡೆಯಿತು.

ವಿರಾಜಪೇಟೆ, ಮಾ.25–ಪುರಸಭೆಗೆ ಸೇರಿದ ಮಳಿಗೆಗಳ ಹರಾಜಿನ ಕಾರ್ಯ ಮೂರು ಹಂತಗಳಲ್ಲಿ ನಡೆದರೂ ಸಹ ಈ ಬಾರಿ ಪುರಸಭೆಗೆ 18 ಲಕ್ಷಕ್ಕೂ ಹೆಚ್ಚು ರೂಗಳಷ್ಟು ನಷ್ಟವಾಗಿದೆ

ಪುರಸಭೆ ಮುಖ್ಯಾಧಿಕಾರಿ ನಾಚಪ್ಪ ನೇತೃತ್ವದಲ್ಲಿ ಮೂರು ಹಂತದಲ್ಲಿ ನಡೆದ ವಾರ್ಷಿಕ ಹರಾಜು ಮುಕ್ತಾಯವಾಗಿದ್ದು, ಪ್ರಸ್ತುತ ಸಾಲಿನ ವಾರ್ಷಿಕ ಹರಾಜಿನಲ್ಲಿ 19,97,500 ರೂ, ಆದಾಯ ಬಂದಿದೆ. ಕಳೆದ ಸಾಲಿನ ಹರಾಜಿನಲ್ಲಿ 38,34,000 ರೂಗಳಷ್ಟು ಒಟ್ಟಾರೆ ಆದಾಯ ಪಡೆದಿತ್ತು. ಇದರಿಂದಾಗಿ ಈ ಸಾಲಿನಲ್ಲಿ 18,36,500 ರೂ.ಗಳಷ್ಟು ನಷ್ಟವಾಗಿದೆ.

ವಿರಾಜಪೇಟೆ ಪುರಸಭೆಯಾದ ಬಳಿಕ ಪಟ್ಟಣ ವಿಸ್ತಾರಗೊಂಡಿದ್ದರೂ ಪಟ್ಟಣದ ಅಂಚಿನಲ್ಲಿ ಹಲವು ಭಾಗಗಳು ಆಯಾ ಗ್ರಾಪಂ ವ್ಯಾಪ್ತಿಗೆ ಬರುತ್ತದೆ. ಅಲ್ಲಿ ಪರವಾನಿಗೆ ಶುಲ್ಕ ನೀಡಿ ಹಸಿ ಮೀನು ಮಾಂಸವನ್ನು ಕಡಿಮೆ ಬೆಲೆಯಲ್ಲಿ ಮಾರಾಟ ಮಾಡುತ್ತಾರೆ. ಆದರೆ ಪುರಸಭೆ ವ್ಯಾಪ್ತಿಯಲ್ಲಿ ಸರಕಾರಿ ದರ ಹೆಚ್ಚಿಸಿರುವ ಕಾರಣ ಕಡಿಮೆ ಬೆಲೆಯಲ್ಲಿ ಮಾರಾಟ ಮಾಡಲು ಸಾಧ್ಯವಾಗುವುದಿಲ್ಲ. ಬೆಲೆ ಹೆಚ್ಚಿಸುವುದರಿಂದ ತಾವು ನಷ್ಟ ಅನುಭವಿಸುತ್ತಿರುವುದಾಗಿ ವರ್ತಕರು ಹೇಳಿಕೊಳ್ಳುತ್ತಿದ್ದಾರೆ. ಈ ಕಾರಣಕ್ಕೆ ಕಡಿಮೆ ಬೆಲೆಯಲ್ಲಿ ಮಳಿಗೆಯನ್ನು ಪಡೆದುಕೊಂಡಿದ್ದಾರೆ.

ತಮ್ಮ ಅಧಿಕಾರದ ಅವಧಿಯಲ್ಲಿ ಮೀನು ಮಾರುಕಟ್ಟೆ ಸಂಕಿರಣದ ಶೌಚಾಲಯ ದುರಸ್ಥಿ, ವಿದ್ಯುತ್ ಮೀಟರ್ ಅಳವಡಿಕೆ, ಸುಣ್ಣ ಬಣ್ಣ ಸೇರಿದಂತೆ ಆಗತ್ಯ ಮೂಲಭೂತ ವೃದ್ಧಿ ಕೆಲಸ ಮಾಡಿದ್ದೇನೆ, ಮುಂದೆ ಪುರಸಭೆ ವಾಣಿಜ್ಯ ಮಳಿಗೆ ಸೇರಿದಂತೆ ವಿವಿಧ ಕಡೆ ಮಳಿಗೆ ಹರಾಜು ಕಾರ್ಯ ಶೀಘ್ರದಲ್ಲಿ ನಡೆಯಲಿದ್ದು, ಪುರಸಭೆಗೆ ಆದಾಯ ಕ್ರೋಢೀಕರಣಕ್ಕೆ ಒತ್ತು ನೀಡಲಾಗುತ್ತದೆ ಎಂದು ಪುರಸಭೆ ಮುಖ್ಯಾಧಿಕಾರಿ ತಿಳಿಸಿದರು.

ಇಂದು ಅರೆಭಾಷೆ ವಿಚಾರ ಸಂಕಿರಣ; ಪದ ಕಟ್ಟುವ ಕಾರ್ಯಾಗಾರ

ಮಡಿಕೇರಿ ಮಾ.25–ರಾಜ್ಯ ಮಟ್ಟದ ಅರೆಭಾಷೆ ವಿಚಾರ ಸಂಕಿರಣ ಮತ್ತು ಪದ ಕಟ್ಟುವ ಕಾರ್ಯಾಗಾರದ ಉದ್ಘಾಟನಾ ಕಾರ್ಯಕ್ರಮವು ಮಾ. 26 ರಂದು ಬೆಳಗ್ಗೆ 10 ಗಂಟೆಗೆ ನಗರದ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜು ಸಭಾಂಗಣದಲ್ಲಿ ನಡೆಯಲಿದೆ.

ಕೊಡಗು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಅಶೋಕ ಸಂಗಪ್ಪ ಆಲೂರ, ಕರ್ನಾಟಕ ಅರೆಭಾಷೆ ಸಾಹಿತ್ಯ ಮತ್ತು ಸಂಸ್ಕೃತಿ ಅಕಾಡೆಮಿ ಅಧ್ಯಕ್ಷ ಸದಾನಂದ ಮಾವಜಿ, ಅರೆಭಾಷೆ ಅಕಾಡೆಮಿ ಗೌರವ ಪ್ರಶಸ್ತಿ ಪುರಸ್ಕೃತರು ಮತ್ತು ಸಮಾಜ ಸೇವಕ ಚಂಡೀರ ಕೆ.ಬಸಪ್ಪ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜಿನ ಪ್ರಾಂಶುಪಾಲ ಪ್ರೊ ಬಿ.ರಾಘವ ಲೇಖಕಿ ಸುಶೀಲಾ ಕುಶಾಲಪ್ಪ ಅಂಬೆಕಲ್ಲು ಇತರರು ಪಾಲ್ಗೊಳ್ಳಲಿದ್ದಾರೆ.

ಬೆಳಗ್ಗೆ 11 ಗಂಟೆಗೆ ವಿಚಾರಗೋಷ್ಠಿ ನಡೆಯಲಿದೆ. ಅರೆಭಾಷಿಕರ ಹಬ್ಬಗ ಮತ್ತೆ ಅದರ ಸಾಂಸ್ಕೃತಿಕ ಮಹತ್ವ ಕುರಿತು ಮೈಸೂರು ಯುವರಾಜ ಮತ್ತು ಮಹಾರಾಜ ಕಾಲೇಜಿನ ವಿಶ್ರಾಂತ ಪ್ರಾಂಶುಪಾಲ ಡಾ.ಚೆರಿಯಮನೆ ಬೆಳ್ಯಪ್ಪ ರಾಮಚಂದ್ರ, ಅರೆಭಾಸೆ ನೆಲೆಗ ಮತ್ತೆ ಅದರ ಬೆಳವಣಿಗೆ ಸಾಧ್ಯತೆ ಕುರಿತು ಮೈಸೂರು ಶೇಷಾದ್ರಿಪುರಂ ಪದವಿ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥೆ ಡಾ.ಸಿ.ಪಿ. ಲಾವಣ್ಯ ಉಪನ್ಯಾಸ ನೀಡಲಿದ್ದಾರೆ. ಮಧ್ಯಾಹ್ನ 1 ಗಂಟೆಗೆ ಅರೆಭಾಷೆ ಕತೆ ಮತ್ತು ಲಲಿತ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ವಿತರಣೆ ನಡೆಯಲಿದೆ. ಬಳಿಕ ಮಧ್ಯಾಹ್ನ 2 ಗಂಟೆಯಿಂದ ಪದ ಕಟ್ಟುವ ಕಾರ್ಯಾಗಾರ ನಡೆಯಲಿದೆ. ಸುಳ್ಯ ನೆಹರು ಮೆಮೋರಿಯಲ್ ಕಾಲೇಜಿನ ವಿಶ್ರಾಂತ ಪ್ರಾಧ್ಯಾಪಕ ಸಂಜೀವ ಕುದ್ಪಾಜೆ, ಕವಿಯತ್ರಿ ಲೀಲಾವತಿ ದಾಮೋದರ ಕುಂದಲ್ಪಾಡಿ ಇತರರು ಪಾಲ್ಗೊಳ್ಳಲಿದ್ದಾರೆ.

ನಾಳೆ ನಗರಸಭೆ ಕೌನ್ಸಿಲ್‌ನ ಸಾಮಾನ್ಯ ಸಭೆ



ಮಡಿಕೇರಿ, ಮಾ.25 –ನಗರಸಭೆ ಕೌನ್ಸಿಲ್‌ನ ಸಾಮಾನ್ಯ ಸಭೆಯು ನಗರಸಭೆ ಅಧ್ಯಕ್ಷೆ ಪಿ.ಕಲಾವತಿ ಅಧ್ಯಕ್ಷತೆಯಲ್ಲಿ ಮಾ. 27ರ ಬೆಳಗ್ಗೆ 11.30 ಗಂಟೆಗೆ ನಗರಸಭಾ ಕೌನ್ಸಿಲ್ ಸಭಾಂಗಣದಲ್ಲಿ ನಡೆಯಲಿದೆ ಎಂದು ನಗರಸಭೆ ಪೌರಾಯುಕ್ತರಾದ ಎಚ್.ಆರ್.ರಮೇಶ್ ತಿಳಿಸಿದ್ದಾರೆ.

ಏ.29, ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ನಿರ್ಧಾರ

ಸುಂಟಿಕೊಪ್ಪ, ಮಾ.25– ಜಿಲ್ಲಾ 17ನೇ ಕನ್ನಡ ಸಾಹಿತ್ಯ ಸಮ್ಮೇಳನ ಏ.29, 30 ರಂದು ಇಲ್ಲಿನ ಜಿಎಂಪಿ ಶಾಲಾ ಮೈದಾನದಲ್ಲಿ ನಡೆಸಲು ನಿರ್ಧರಿಸಲಾಗಿದೆ. ಕೊಡವ ಸಮಾಜದ ಸಭಾಂಗಣದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಕೇಶವ್ ಕಾಮತ್ ಅಧ್ಯಕ್ಷತೆಯಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ.

ಪರಿಷತ್‌ನ ಮಾಜಿ ಅಧ್ಯಕ್ಷ ಟಿ.ಪಿ. ರಮೇಶ್, ಮಾತನಾಡಿ, ಜಿಲ್ಲೆಯಲ್ಲಿ ತನ್ನದೆಯಾದ ವೈಶಿಷ್ಟ್ಯತೆ, ಪರಂಪರೆಯನ್ನು ಹೊಂದಿರುವ ಸುಂಟಿಕೊಪ್ಪ ಹೋಬಳಿಯಲ್ಲಿ 2 ದಿನಗಳ ಕಾಲ ಸಮ್ಮೇಳನ ನಡೆಯಲಿದ್ದು, ಏ.29ರ ಸಂಜೆ ಸಮ್ಮೇಳನಾಧ್ಯಕ್ಷರ ಮೆರವಣಿಗೆ ಮತ್ತು ಏ.30ರಂದು ಸಮ್ಮೇಳನದ ಅಂಗವಾಗಿ ವಿವಿಧ ಕಾರ್ಯಕ್ರಮಗಳು ನಡೆಯಲಿವೆ.

ಸಮ್ಮೇಳನದ ಯಶಸ್ವಿಗಾಗಿ ಅಂದಾಜು 18 ರಿಂದ19 ಲಕ್ಷ ರೂ. ವೆಚ್ಚವಾಗಲಿದ್ದು ಸಮ್ಮೇಳನವನ್ನು ಅರ್ಥಪೂರ್ಣವಾಗಿ ನಡೆಸಲು 11 ಉಪ ಸಮಿತಿಗಳ ಅಗತ್ಯವಿದೆ. ಈ ಹಿನ್ನಲೆಯಲ್ಲಿ ಎಲ್ಲರೂ ಕನ್ನಡ ಭಾಷೆ ಮತ್ತು ಸಾಹಿತ್ಯದ ದೃಷ್ಟಿಕೋನದಿಂದ ಒಂದಾಗಿ ದುಡಿಯೋಣ ಎಂದರು.



ಸಮ್ಮೇಳನದ ಪೂರ್ವಭಾವಿ ಸಭೆಯಲ್ಲಿ ಪರಿಷತ್ತಿನ ಪದಾಧಿಕಾರಿಗಳು ಭಾಗವಹಿಸಿದ್ದರು.

5 ಲಕ್ಷ ಅನುದಾನ ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ ನೀಡುತ್ತದೆ. ಆದರೆ ಈಗಾಗಲೇ ಸರಕಾರದ ನೀತಿ ನಿಯಮಗಳಿಗೆ ಅನುಗುಣವಾಗಿ ಅರ್ಥಿಕ ವರ್ಷ ಮುಗಿದಿದ್ದು ಏ.30 ರೊಳಗೆ ಲೆಕ್ಕಪತ್ರ ಮಂಡಿಸಬೇಕಾದ ಹಿನ್ನೆಲೆಯಲ್ಲಿ ಏಪ್ರಿಲ್ ತಿಂಗಳಿನಲ್ಲೇ ಸಮ್ಮೇಳನವನ್ನು ಮಾಡಬೇಕಾಗಿದೆ ಎಂದು ಮಾಹಿತಿ ನೀಡಿದರು.

ಎಸ್‌ಎಸ್‌ಎಲ್‌ಸಿ ಪರೀಕ್ಷೆ, ಪಿಯುಸಿ ಪರೀಕ್ಷಾ ಮೌಲ್ಯಮಾಪನ ಹಾಗೂ ತಿಂಗಳ ಕಾಲ ನಡೆಯುವ ಜನಗಣತಿ ಇರುವುದರಿಂದ ಸಮ್ಮೇಳನದ ಯಶಸ್ಸಿಗೆ ಪೂರ್ಣ ಪ್ರಮಾಣದಲ್ಲಿ ತೊಡಗಿಸಿಕೊಳ್ಳುವುದು ಅಸಾಧ್ಯ ಈ ವಿಚಾರವನ್ನು ಜಿಲ್ಲಾಧಿಕಾರಿಗಳ ಗಮನಕ್ಕೆ ತಂದು ಶಿಕ್ಷಣ ಇಲಾಖೆಯ ಮೂಲಕ ಸಮ್ಮೇಳನ ನಡೆಯುವ 2 ದಿನಗಳ ಮಟ್ಟಿಗೆ ಅನುಮತಿ ನೀಡುವ ನಿಟ್ಟಿನಲ್ಲಿ ಪ್ರಯತ್ನಿಸುವುದಾಗಿ ಜಿಲ್ಲಾಡಳಿತದ ಕಾನೂನು ಸಲಹೆಗಾರ ಎ.ಲೋಕೇಶ್ ಕುಮಾರ್ ಭರವಸೆ ನೀಡಿದ್ದಾರೆ ಎಂದು ಟಿ.ಪಿ.ರಮೇಶ್ ಮಾಹಿತಿ ನೀಡಿದರು. ಇದೇ ಸಂದರ್ಭದಲ್ಲಿ ಸಮ್ಮೇಳನದ ಯಶಸ್ವಿಗಾಗಿ ವಿವಿಧ ಉಪ ಸಮಿತಿಗಳನ್ನು ರಚಿಸಲಾಯಿತು.

ವೇದಿಕೆಯಲ್ಲಿ ಸುಂಟಿಕೊಪ್ಪ ಹೋಬಳಿ ಕ.ಸಾ.ಪ. ಅಧ್ಯಕ್ಷ ಪಿ.ಎಫ್. ಸಬಾಸ್ಟೀನ್, ಕುಶಾಲನಗರ ತಾಲೂಕು ಕಸಾಪ ಅಧ್ಯಕ್ಷ ಕೆ.ಎಸ್.ನಾಗೇಶ್, ಜಿಲ್ಲಾ ಗೌರವ ಕಾರ್ಯದರ್ಶಿಗಳಾದ ಎಸ್.ಎ.ಮುನೀರ್ ಅಹ್ಮದ್, ರೇವತಿ ರಮೇಶ್, ಗೌರವ ಕೋಶಾಧಿಕಾರಿ ಎಸ್.ಎಸ್.ಸಂಪತ್‌ಕುಮಾರ್, ಸುಂಟಿಕೊಪ್ಪ ಗ್ರಾಪಂ ಮಾಜಿ ಅಧ್ಯಕ್ಷ ಪಿ.ಆರ್. ಸುನಿಲ್‌ಕುಮಾರ್, ಜಿಲ್ಲಾ ಸಂಘಟನಾ ಕಾರ್ಯದರ್ಶಿ ಕೆ.ಎನ್.ದೇವರಾಜ್, ಸುಂಟಿಕೊಪ್ಪ ಹೋಬಳಿ ಪ್ರಧಾನ ಕಾರ್ಯದರ್ಶಿ ಕೆ.ಎಸ್.ಅನಿಲ್‌ಕುಮಾರ್, ಮಹಿಳಾ ಕಾರ್ಯದರ್ಶಿ ಲೀಲಾ ಮೇದಪ್ಪ, ಗ್ರಾ.ಪಂ. ಅಭಿವೃದ್ಧಿ ಅಧಿಕಾರಿ ವಿ.ಜಿ.ಲೋಕೇಶ್, 7ನೇ ಹೊಸಕೋಟೆ ಗ್ರಾ.ಪಂ. ಅಭಿವೃದ್ಧಿ ಅಧಿಕಾರಿ ನಂದೀಶ್, ಕೊಡಗರಹಳ್ಳಿ ಗ್ರಾ.ಪಂ. ಅಭಿವೃದ್ಧಿ ಅಧಿಕಾರಿ ರವೀಶ್, ನಾಕೂರು ಶಿರಂಗಾಲ ಗ್ರಾಪಂ ಕಾರ್ಯದರ್ಶಿ ಸೇರಿದಂತೆ ಜಿಲ್ಲಾ ಮತ್ತು ತಾಲೂಕು ಹಾಗೂ ಹೋಬಳಿ ಕಸಾಪ ವಿವಿಧ ಪದಾಧಿಕಾರಿಗಳು ಕಸಾಪ ಸದಸ್ಯರುಗಳು ವಿವಿಧ ಸಂಘಟನೆಗಳ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಕಾಸ್ಮೋಪಾಲಿಟನ್ ಕ್ಲಬ್‌ಗೆ ಪದಾಧಿಕಾರಿಗಳ ಆಯ್ಕೆ

ಮಡಿಕೇರಿ, ಮಾ.25– ಜಿಲ್ಲೆಯ ಪ್ರತಿಷ್ಠಿತ ಕ್ಲಬ್‌ಗಳಲ್ಲಿ ಒಂದಾದ ಕಾಸ್ಮೋಪಾಲಿಟನ್ ಕ್ಲಬ್‌ನ ನೂತನ ಅಧ್ಯಕ್ಷರಾಗಿ ಕಿರಿಯಮಾಡ ರತನ್ ತಮ್ಮಯ್ಯ ಆಯ್ಕೆಯಾಗಿದ್ದಾರೆ. ಮಾ.21ರಂದು ನಡೆದ ಆಡಳಿತ ಮಂಡಳಿ ಸಭೆಯಲ್ಲಿ 2 ವರ್ಷಗಳ ಅವಧಿಗೆ ರತನ್ ತಮ್ಮಯ್ಯ ಅವರನ್ನು ಅಧ್ಯಕ್ಷರನ್ನಾಗಿ ಮುಕ್ಕಾಟೀರ ಸಂಜು ಪೊನ್ನಪ್ಪ ಅವರನ್ನು ಪ್ರಧಾನ ಕಾರ್ಯದರ್ಶಿಯನ್ನಾಗಿ ಮತ್ತು ಸಂಜಯ್ ಹೆಚ್.ಎಲ್ ಅವರನ್ನು ಉಪಾಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಯಿತು. 121 ವರ್ಷಗಳ ಸುದೀರ್ಘ ಇತಿಹಾಸವಿರುವ ಕಾಸ್ಮೋಪಾಲಿಟನ್ ಕ್ಲಬ್‌ನಲ್ಲಿ 240 ಸದಸ್ಯರಿದ್ದಾರೆ. ರತನ್ ತಮ್ಮಯ್ಯ ರೋಟರಿ ಸಂಸ್ಥೆಯ ವಿವಿಧ ಹುದ್ದೆಗಳಲ್ಲಿಯೂ ಕಾರ್ಯನಿರ್ವಹಿಸಿದ್ದಾರೆ.


ಜಪಾನ್ ತರಬೇತಿಗೆ ಕೊಡಗಿನ ಯುವತಿ ಆಯ್ಕೆ



ಮಡಿಕೇರಿ: ಜಪಾನ್ ದೇಶದಲ್ಲಿ ಆದಿವಾಸಿಗಳ ಗ್ರಾಮೀಣ ಅಭಿವೃದ್ಧಿ ಕುರಿತು ನಡೆಯುತ್ತಿರುವ ತರಬೇತಿ ಹಾಗೂ ಅಧ್ಯಯನ ಪ್ರವಾಸಕ್ಕೆ ಸೋಮವಾರಪೇಟೆಯ ಸಾಮಾಜಿಕ ಹೋರಾಟಗಾರ್ತಿ ಡಾ.ಕಾವೇರಿ ಆಯ್ಕೆಯಾಗಿದ್ದಾರೆ. ಈ ತರಬೇತಿಯು 9 ತಿಂಗಳ ಕಾರ್ಯಕ್ರಮವಾಗಿದ್ದು, ಇದರ ಮೂಲಕ ಗ್ರಾಮೀಣ ಅಭಿವೃದ್ಧಿ ಹಾಗೂ ಪಾರಂಪರಿಕ ಜ್ಞಾನ ವ್ಯವಸ್ಥೆಗಳ ಬಗ್ಗೆ ಜಾಗತಿಕ ಅನುಭವವನ್ನು ಪಡೆಯುವ ಅವಕಾಶ ದೊರೆಯಲಿದೆ. ಶಾಸಕ ಎ.ಎಸ್.ಪೊನ್ನಣ್ಣ ಡಾ.ಕಾವೇರಿಗೆ ಶುಭ ಹಾರೈಸಿದ್ದಾರೆ.

ಸಿಲಿಂಡರ್ ಸಿಗದೆ ಚಾ.ನಗರದಲ್ಲಿ ಪರದಾಟ

ಡೀಲರ್‌ಗಳಿಗೂ ತಲೆನೋವಾಗಿರುವ ಗೃಹಬಳಕೆ, ಕಮರ್ಷಿಯಲ್ ಸಿಲಿಂಡರ್‌ಗಳ ಸಮಸ್ಯೆ



ಚಾಮರಾಜನಗರ: ಮಧ್ಯಪ್ರಾಚ್ಯದ ಯುದ್ಧದ ಪರಿಣಾಮದಿಂದ ಜಿಲ್ಲೆಯಲ್ಲಿ ವಾಣಿಜ್ಯ ಬಳಕೆಯ ಸಿಲಿಂಡರ್ ಅಭಾವ ಮುಂದುವರಿದ್ದು, ಹೋಟೆಲ್, ಫಾಸ್ಟ್‌ಫುಡ್ ಸೇರಿದಂತೆ ವಾಣಿಜ್ಯ ಬಳಕೆ ಸಿಲಿಂಡರ್‌ಗಳನ್ನೇ ಅವಲಂಬಿಸಿರುವ ಉದ್ಯಮಿಗಳು ಹಾಗೂ ಜನರು ಪರಿತಪಿಸುತ್ತಿದ್ದರೇ ಮತ್ತೊಂದೆಡೆ ನಿಗದಿತ ಅವಧಿಯಲ್ಲಿ ಗೃಹಬಳಕೆಯ ಸಿಲಿಂಡರ್ ಸಿಗದೆ ಜನರು ಪರದಾಡುವಂತಾಗಿದೆ.

ಚಾಮರಾಜನಗರ ಜಿಲ್ಲಾ ಕೇಂದ್ರ ಸೇರಿದಂತೆ ಸುತ್ತಮುತ್ತ ಹಾಗೂ ಜಿಲ್ಲೆಯಲ್ಲಿ ಸುಮಾರು ಸಾವಿರಾರು ಹೋಟೆಲ್‌ಗಳು, ಟೀ–ಕ್ಯಾಂಟೀನ್, ಬೇಕರಿ, ಫಾಸ್ಟ್‌ಫುಡ್ ಸೆಂಟರ್‌ಗಳಿದ್ದು, ನಿತ್ಯ ಲಕ್ಷಾಂತರ ಮಂದಿಗೆ ಆಹಾರ ಉಣಬಡಿಸುತ್ತಿವೆ. ಪುಟ್ಟ ಗೂಡಂಗಡಿಯಿಂದ ಹಿಡಿದು ಸ್ಟಾರ್ ಹೋಟೆಲ್‌ಗಳವರೆಗೆ ಎಲ್ಲವೂ ಅಡುಗೆಯಾಗಿ ವಾಣಿಜ್ಯ ಸಿಲಿಂಡರ್‌ಗಳನ್ನೇ ಬಳಕೆ ಮಾಡುತ್ತ ಬಂದಿವೆ. ಆದರೆ ಕಳೆದ ಹದಿನೈದು ದಿನಗಳಿಂದ ಇವುಗಳ ಪೂರೈಕೆಯಲ್ಲಿ ವ್ಯತ್ಯಯವಾಗುತ್ತಿದೆ.

ಜಿಲ್ಲೆಯಲ್ಲಿ ಕಳೆದ ಎರಡು ವಾರದಿಂದ ವಾಣಿಜ್ಯ ಸಿಲಿಂಡರ್ ಬುಕಿಂಗ್ ಆಗುತ್ತಿಲ್ಲ. ಇದರಿಂದ ಸಿಲಿಂಡರ್ ಪೂರೈಕೆಯಲ್ಲಿ ವ್ಯತ್ಯಯವಾಗುತ್ತಿದ್ದು, ಜಿಲ್ಲೆಯಲ್ಲಿ ಬಹುತೇಕ ಹೋಟೆಲ್‌ಗಳು ಬಂದ್ ಆಗಿವೆ. ಇದರಿಂದ ಉದ್ಯಮದಾರರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಇನ್ನೂ ಕೆಲವು ಹೋಟೆಲ್ ಮಾಲೀಕರು ಸೌದೆ ಒಲೆ ಮೊರೆ ಹೋಗಿದ್ದು, ಹೋಟೆಲ್ ಮೆನು ಕಾರ್ಡ್‌ನಲ್ಲಿ ಬದಲಾವಣೆಯಾಗಿದೆ.

ಗೃಹ ಬಳಕೆ ಸಿಲಿಂಡರ್‌ಗೆ ತೊಂದರೆ ಇಲ್ಲ: ಜಿಲ್ಲೆಗೆ ಗೃಹ ಬಳಕೆ ಅಡುಗೆ ಅನಿಲ ಪೂರೈಕೆಯಲ್ಲಿ ಯಾವುದೇ ತೊಂದರೆ ಇಲ್ಲ. ಜನ ಆತಂಕಗೊಳ್ಳುವುದು ಬೇಡ ಎಂದು ಜಿಲ್ಲಾಡಳಿತ ಸ್ಪಷ್ಟಪಡಿಸಿದೆ. ಆದರೆ, ಜನ ಗಾಬರಿಗೊಂಡು ಹೆಚ್ಚಿನ ಸಂಖ್ಯೆಯಲ್ಲಿ ಬುಕ್ಕಿಂಗ್ ಪ್ರಾರಂಭಿಸಿದ್ದಾರೆ. ಇದರಿಂದ ಗ್ಯಾಸ್ ಏಜೆನ್ಸಿಗಳಲ್ಲಿ ದಿನಕ್ಕೆ 100–200 ಸಂಖ್ಯೆಯಲ್ಲಿ ಬುಕ್ಕಿಂಗ್ ಆಗುತ್ತಿದ್ದ ಸಿಲಿಂಡರ್ ಈಗ 600–700ಕ್ಕೆ ಹೆಚ್ಚು ಆಗುತ್ತಿದೆ. ಇದರಿಂದ ವಿತರಣೆಯಲ್ಲಿ ಕೊಂಚ ವ್ಯತ್ಯಯ ಉಂಟಾಗುತ್ತಿದೆ ಎನ್ನುತ್ತಾರೆ ಅನಿಲ ವಿತರಣಾ ಡೀಲರ್‌ಗಳು.

ಜಿಲ್ಲೆಯಲ್ಲಿ ಒಟ್ಟು ಬೇರೆ ಬೇರೆ ಕಂಪನಿಯ ಒಟ್ಟು 24 ಗ್ಯಾಸ್ ಏಜೆನ್ಸಿಗಳಿದ್ದು, 3,32,433 ಸಂಪರ್ಕಗಳಿವೆ. ವಾಣಿಜ್ಯ ಬಳಕೆ ಸಂಪರ್ಕ 3,136 ಇದೆ. ಇನ್ನು 5 ಕೆ.ಜಿ. ಸಿಲಿಂಡರ್ ಸಂಪರ್ಕ 1038 ಇವೆ. ಈ ಪೈಕಿ ಸದ್ಯ 5,240 ಮನೆ ಸಂಪರ್ಕದ ಸಿಲಿಂಡರ್‌ಗಳು ದಾಸ್ತಾನಿದೆ. ವಾಣಿಜ್ಯ ಬಳಕೆಯ 451 ಸಿಲಿಂಡರ್ ದಾಸ್ತಾನು ಇದೆ ಎಂದು ಆಹಾರ ಇಲಾಖೆ ತಿಳಿಸಿದೆ.

ಡೀಲರ್‌ಗಳ ಮೇಲೆ ಒತ್ತಡ: ವಾಣಿಜ್ಯ ಸಿಲಿಂಡರ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗುತ್ತಿರುವುದು ಕೇವಲ ಹೋಟೆಲ್, ಕ್ಯಾಂಟೀನ್ ಮಾಲೀಕರ ಸಮಸ್ಯೆಯಲ್ಲ, ಜೊತೆಗೆ ಗ್ಯಾಸ್ ಕಂಪನಿ ಡೀಲರ್‌ಗಳಿಗೂ ತಲೆನೋವಾಗಿ ಪರಿಣಮಿಸಿದೆ. ಇಷ್ಟು ದಿನಗಳ ಕಾಲ ಸಿಲಿಂಡರ್ ಪೂರೈಕೆ ಸುಗಮವಾಗಿತ್ತು. ಆದರೆ, ದಿಢೀರ್ ಎದುರಾದ ಅನಿಲ ಪೂರೈಕೆ ಯಲ್ಲಿನ ವ್ಯತ್ಯಯದಿಂದ ನಿತ್ಯ ಡೀಲರ್‌ಗಳು ಸಮಸ್ಯೆಗೆ ಸಿಲುಕಿದ್ದಾರೆ. ನಿತ್ಯವೂ ನೂರಾರು ಕರೆಗಳ ಮೂಲಕ ಅವರಿಗೆ ಗ್ಯಾಸ್ ವಿತರಿಸುವಂತೆ ಒತ್ತಾಯಗಳು ಕೇಳಿ ಬರುತ್ತಿವೆ. ಇದರಿಂದ ಯಾವಾಗ ಈ ಸಮಸ್ಯೆ ಬಗೆಹರಿಯಲಿದೆಯೋ ಎಂದು ಪ್ರಾರ್ಥಿಸುವಂತಾಗಿದೆ.



ಜಿಲ್ಲೆಯಲ್ಲಿ ಮನೆ ಬಳಕೆಯ ಗ್ಯಾಸ್ ಸಿಲಿಂಡರ್‌ಗೆ ಯಾವುದೇ ಸಮಸ್ಯೆಗಳಿಲ್ಲ. ಜನರು ಆತಂಕ ಪಡುವ ಅವಶ್ಯಕತೆ ಇಲ್ಲ. ಸರ್ಕಾರದ ಮಾರ್ಗಸೂಚಿಯಂತೆ ಸಿಲಿಂಡರ್ ವಿತರಿಸಲು ಗ್ಯಾಸ್ ಏಜೆನ್ಸಿಯವರಿಗೆ ಸೂಚನೆ ನೀಡಲಾಗಿದೆ. ವಾಣಿಜ್ಯ ಬಳಕೆ ಗ್ಯಾಸ್ ಸಿಲಿಂಡರ್ ಸಮಸ್ಯೆ ಈಗಷ್ಟೇ ಪ್ರಾರಂಭವಾಗುತ್ತಿದ್ದು, ಗ್ರಾಹಕರು ಇತಿಮಿತಿಯಲ್ಲಿ ಗ್ಯಾಸ್ ಬಳಸುವುದು ಉತ್ತಮ.

– ಶ್ರೀರೂಪಾ, ಜಿಲ್ಲಾಧಿಕಾರಿ

ತುಟ್ಟಿ ಭತ್ಯೆ ನಿಲ್ಲಿಸುವುದನ್ನು ಖಂಡಿಸಿ ನಿವೃತ್ತ ಸರ್ಕಾರಿ ನೌಕರರ ಸಂಘದಿಂದ ಮೌನ ಪ್ರತಿಭಟನೆ

ಚಾಮರಾಜನಗರ: ಕೇಂದ್ರ ಸರ್ಕಾರದ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು ನಿವೃತ್ತ ನೌಕರರಿಗೆ ಹಾಗೂ ಕುಟುಂಬ ಪಿಂಚಣಿದಾರರಿಗೆ ಸಂಬಂಧಪಟ್ಟಂತೆ ಮುಂದಿನ ದಿನಗಳಲ್ಲಿ ನಿವೃತ್ತಿ ವೇತನ ಮತ್ತು ಕುಟುಂಬ ಪಿಂಚಣಿಯನ್ನು ಪರಿಷ್ಕರಣೆ ಮಾಡಲು ಹಾಗೂ ವಾರ್ಷಿಕವಾಗಿ ನೀಡುತ್ತಿದ್ದ ತುಟ್ಟಿ ಭತ್ಯೆಯನ್ನು ನೀಡಲು ಸಾಧ್ಯವಾಗುವುದಿಲ್ಲ ಎಂದು ನೀಡಿರುವ ಹೇಳಿಕೆಯನ್ನು ಖಂಡಿಸಿ ಕರ್ನಾಟಕ ರಾಜ್ಯ ನಿವೃತ್ತ ಸರ್ಕಾರಿ ನೌಕರರ ಸಂಘದ ಜಿಲ್ಲಾ ಶಾಖೆಯ ಪದಾಧಿಕಾರಿಗಳು, ಸದಸ್ಯರು ಕಪ್ಪು ಪಟ್ಟಿ ಧರಿಸಿ ಮೌನ ಪ್ರತಿಭಟನೆ ನಡೆಸಿದರು.

ನಗರದ ಜಿಲ್ಲಾಡಳಿತ ಭವನದ ಮುಂಭಾಗದಲ್ಲಿ ಸಂಘದ ಜಿಲ್ಲಾಧ್ಯಕ್ಷ ಎನ್.ನಾಗೇಶ್ ಅವರ ನೇತೃತ್ವದಲ್ಲಿ ಸಮಾವೇಶಗೊಂಡ ಪ್ರತಿಭಟನಾನಿರತರು ತೋಳಿಗೆ ಕಪ್ಪು ಪಟ್ಟಿ ಧರಿಸಿ ಮೌನಪ್ರತಿಭಟನೆ ನಡೆಸಿದರು.

ಪ್ರತಿಭಟನೆ ನೇತೃತ್ವ ವಹಿಸಿದ್ದ ಸಂಘದ ಜಿಲ್ಲಾಧ್ಯಕ್ಷ ಎನ್.ನಾಗೇಶ್ ಮಾತನಾಡಿ, ಕೇಂದ್ರ ಸರ್ಕಾರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು ನಿವೃತ್ತ ನೌಕರರಿಗೆ ಹಾಗೂ ಕುಟುಂಬ ಪಿಂಚಣಿದಾರರಿಗೆ ಸಂಬಂಧಪಟ್ಟಂತೆ, ಮುಂದಿನ ದಿನಗಳಲ್ಲಿ ನಿವೃತ್ತಿ ವೇತನ ಮತ್ತು ಕುಟುಂಬ ಪಿಂಚಣಿಯನ್ನು ಪರಿಷ್ಕರಣೆ ಮಾಡಲು ಹಾಗೂ ವಾರ್ಷಿಕವಾಗಿ ನೀಡುತ್ತಿದ್ದ ತುಟ್ಟಿ ಭತ್ಯೆಯನ್ನು ನೀಡಲು ಸಾಧ್ಯವಾಗುವುದಿಲ್ಲ ಎಂದು ನೀಡಿರುವ ಹೇಳಿಕೆ ಖಂಡಿಸಿ ನಮ್ಮ ಸಂಘದ ಪದಾಧಿಕಾರಿಗಳು, ಸದಸ್ಯರು ಕಪ್ಪು ಬಟ್ಟೆಯನ್ನು ಧರಿಸಿ ಸಾಂಕೇತಿಕವಾಗಿ ಪ್ರತಿಭಟನೆ ನಡೆಸಿ, ನರೇಂದ್ರ ಮೋದಿಯವರಿಗೆ ಜಿಲ್ಲಾಧಿಕಾರಿಗಳ ಮುಖಾಂತರ ಮನವಿ ಸಲ್ಲಿಸಿದರು.



ಸಾಂಕೇತಿಕವಾಗಿ ಪ್ರತಿಭಟನೆ ನಡೆಸಿ, ಪ್ರಧಾನಿಗೆ ಅಧಿಕಾರಿಗಳ ಮೂಲಕ ಮನವಿ ಸಲ್ಲಿಸಲಾಯಿತು.

ಕೇಂದ್ರ ಸರ್ಕಾರ ನಿವೃತ್ತ ನೌಕರಿಗೆ ಜನವರಿ, ಜುಲೈ ತಿಂಗಳಲ್ಲಿ ಆರು ತಿಂಗಳಿಗೊಮ್ಮೆ ವರ್ಷಕ್ಕೆ 2 ಬಾರಿ ತುಟ್ಟಿಭತ್ಯೆ ನೀಡುತ್ತಿದ್ದು ಈಗ ಕೊಡಲು ಸಾಧ್ಯವಾಗುತ್ತಿಲ್ಲ ಎಂದು ವಿತ್ತಸಚಿವೆ ನಿರ್ಮಲಾ ಸೀತಾರಾಮನ್ ಹೇಳಿಕೆ ನೀಡುವುದು ಸರಿಯಲ್ಲ ನಿವೃತ್ತ ನೌಕರರ ಇಳಿ ವಯಸ್ಸಿನಲ್ಲಿ ತುಟ್ಟಿ ಭತ್ಯೆಗಳ ಅವಶ್ಯಕತೆ ಇರುತ್ತದೆ. ಹಾಗಾಗಿ ಕೇಂದ್ರ ಸರ್ಕಾರ ಯಾವುದೇ ಕಾರಣಕ್ಕೂ ತುಟ್ಟಿ ಭತ್ಯೆ ನಿಲ್ಲಿಸದೇ ಮುಂದುವರೆಸಿ, ನಿವೃತ್ತ ನೌಕರರ ಹಿತ ಕಾಯಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾ ಉಪಾಧ್ಯಕ್ಷರಾದ ಹೊನ್ನೂರಯ್ಯ, ಎಲ್.ದೇವಣ್ಣ, ಜಂಟಿ ಕಾರ್ಯದರ್ಶಿ ಜಿ.ರಾಘವೇಂದ್ರ, ಸಂಘಟನಾ ಕಾರ್ಯದರ್ಶಿ ಎ.ಸಿದ್ದಯ್ಯ, ಲೆಕ್ಕ ಪರಿಶೋಧಕ ಬಿ.ರಾಮು, ನಿರ್ದೇಶಕರರಾದ ಹೆಚ್.ಬಿ.ಕೃಷ್ಣ ನಾಯಕ, ಶ್ರೀಕಂಠ ಸ್ವಾಮಿ ಮತ್ತಿತರರು ಭಾಗವಹಿಸಿದ್ದರು.

ಅಕ್ರಮ ಪಡಿತರ ಅಕ್ಕಿ ವಶ: ಪ್ರಕರಣ ದಾಖಲು



ಅಕ್ಕಿಯನ್ನು ಸಾಗಿಸುತ್ತಿದ್ದ ವಾಹನ ಹಾಗೂ ಆರೋಪಿಗಳನ್ನು ವಶಕ್ಕೆ ಪಡೆದಿರುವುದು.

ಯಳಂದೂರು, ಮಾ.25– ತಾಲೂಕಿನ ಯರಿಯೂರು ಗ್ರಾಮದಿಂದ ಕೆಸ್ತೂರು ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಮಾರ್ಗದಲ್ಲಿರುವ ಶನೇಶ್ವರ ದೇಗುಲವ ಬಳಿ ಅಕ್ರಮವಾಗಿ ಪಡಿತರ ಅಕ್ಕಿಯನ್ನು ಸಾಗಾಟ ಮಾಡುತ್ತಿದ್ದ ಬಗ್ಗೆ ಖಚಿತ ಮಾಹಿತಿ ಮೇರೆಗೆ ಕಂದಾಯ ಇಲಾಖೆ ಅಧಿಕಾರಿಗಳು ಹಾಗೂ ಪೊಲೀಸರು ಜಂಟಿ ಕಾರ್ಯಾಚರಣೆ ನಡೆಸಿ ಅಕ್ಕಿ ಯನ್ನು ವಾಹನ ಸಮೇತ ವಶಪಡಿಸಿಕೊಂಡಿದ್ದಾರೆ.

ಮೈಸೂರು ಜಿಲ್ಲೆಯ ತಲಕಾಡು ಹೋಬಳಿ ವ್ಯಾಪ್ತಿಯ ಕುಕ್ಕೂರು ಗ್ರಾಮದ ಮಖ್ಸೂದ್ ಪಾಷಾ, ನಯಿಮ್ ಪಾಷ ಹಾಗೂ ಕುಮಾರಸ್ವಾಮಿ ಎಂಬ ಮೂವರು ತಾಲೂಕಿನ ಬೂದಿತಿಟ್ಟು ಮದ್ದೂರು ಗ್ರಾಮಗಳಲ್ಲಿ ಆಹಾರ ಪಡಿತದಾರರಿಂದ ಅಕ್ರಮವಾಗಿ ಅಕ್ಕಿಯನ್ನು ಖರೀದಿಸಿ ಇದನ್ನು ಪ್ಲಾಸ್ಟಿಕ್ ಚೀಲಗಳಲ್ಲಿ ಸಂಗ್ರಹಿಸಿ ತಮ್ಮ ಓಮ್ನಿ ಕಾರಿನ ಮೂಲಕ ಸಾಗಾಟ ಮಾಡುತ್ತಿದ್ದರು. ಈ ಬಗ್ಗೆ ಖಚಿತ ಮಾಹಿತಿ ಆಧಾರದ ಮೇಲೆ ದಾಳಿ ಮಾಡಿ ಸುಮಾರು 460 ಕೆ.ಜಿ ತೂಕದ ಪಡಿತರ ಅಕ್ಕಿಯನ್ನು ವಶಪಡಿಸಿಕೊಳ್ಳಲಾಗಿದ್ದು. ಪ್ರಕರಣ ದಾಖಲಿಸಿ ಮುಂದಿನ ಕ್ರಮ ವಹಿಸಲಾಗಿದೆ.

ಈ ದಾಳಿಯಲ್ಲಿ ಪಿಎಸ್‌ಐ ಆಕಾಶ್, ಆಹಾರ ನಿರೀಕ್ಷಕ ಬಿಲಸಯ್ಯ, ಹೆಡ್ ಕಾನ್ಸ್ ಸ್ಟೇಬಲ್ ಕೆ.ಪಿ.ನಾಗೇಂದ್ರ ಪೇದೆಗಳಾದ ಜಡೇಸ್ವಾಮಿ, ಸಂಪತ್ ಭಾಗವಹಿಸಿದ್ದರು.

ನವೋದಯ ಶಾಲೆಗೆ ಆಯ್ಕೆ



ಯಳಂದೂರು: ಜವಾಹರ್ ನವೋದಯ ವಿದ್ಯಾಲಯದ ಪ್ರವೇಶ ಪರೀಕ್ಷೆಯಲ್ಲಿ ಗ್ರಾಮೀಣ ಭಾಗದ ದೀಕ್ಷಾ ಎಂಬ ವಿದ್ಯಾರ್ಥಿನಿಯು ಜಿಲ್ಲೆಯ ಪಿಎಂಶ್ರೀ ನವೋದಯ ಶಾಲೆಗೆ ಆಯ್ಕೆಯಾಗಿದ್ದಾರೆ. ತಾಲೂಕಿನ ಕಟ್ನವಾಡಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿನಿ ಹಾಗೂ ಮಹೇಶ್ ಹಾಗೂ ವೀಣಾ ಎಂಬುವರ ಪುತ್ರಿ.

ಮತ್ತೆ ಮುಂದುವರೆದ ಟಿಪ್ಪರ್‌ಗಳ ರ್‍ಯಾಶ್ ಡ್ರೈವಿಂಗ್

ಕೂದಲೆಳೆ ಅಂತರದಿಂದ ಪಾರಾದ ಶಾಲಾ ಮಕ್ಕಳ ವಾಹನ

ಗುಂಡ್ಲುಪೇಟೆ, ಮಾ.25– ತಾಲೂಕಿನಲ್ಲಿ ಓವರ್ ಲೋಡ್ ಟಿಪ್ಪರ್‌ಗಳ ಹಾವಳಿ ಮತ್ತೆ ಶುರುವಾಗಿದೆ. ಶಾಲೆ ಪ್ರಾರಂಭ ಮತ್ತು ಶಾಲಾ ಮುಕ್ತಾಯದ ಅವಧಿಯಲ್ಲಿ ಟಿಪ್ಪರ್‌ಗಳ ಸಂಚಾರವನ್ನು ನಿಷೇಧಿಸುವಂತೆ ಶಾಸಕ ಗಣೇಶ್ ಪ್ರಸಾದ್ ಅಧಿಕಾರಿಗಳಿಗೆ ಸೂಚನೆ ನೀಡಿದ್ದರೂ ಸಹ ಯಾವುದೇ ಪ್ರಯೋಜನವಾಗಿಲ್ಲ.

ತಾಲೂಕಿನ ಚಿಕ್ಕತುಪ್ಪೂರು ಸಮೀಪ ಓವರ್ ಲೋಡ್ ಕಲ್ಲು ತುಂಬಿಸಿಕೊಂಡು ಅತಿವೇಗವಾಗಿ ಬಂದ ಟಿಪ್ಪರ್ ಶಾಲಾ ಮಕ್ಕಳನ್ನು ಕರೆದೊಯ್ಯುತ್ತಿದ್ದ ಟೆಂಪೋಗೆ ಡಿಕ್ಕಿ ಹೊಡೆದಿದ್ದ ಘಟನೆ ಮರೆಯುವ ಮುನ್ನವೇ ಅಂಥದೇ ಘಟನೆ ಬೊಮ್ಮನಹಳ್ಳಿ ರಸ್ತೆಯ ಕಂಪನ ಮಹದೇಶ್ವರ ದೇವಾಲಯದ ಸಮೀಪ ನಡೆದಿದ್ದು ಶಾಲಾ ವಾಹನ ಚಾಲಕನ ಸಮಯಪ್ರಜ್ಞೆಯಿಂದ ಅನಾಹುತ ತಪ್ಪಿದೆ.

ಮಾ.24ರಂದು ಮಧ್ಯಾಹ್ನ 3 ಗಂಟೆ ಸಮಯದಲ್ಲಿ ಕಂಪನ ಮಹದೇಶ್ವರ ದೇವಾಲಯದ ಬಳಿ ಅತಿವೇಗವಾಗಿ ಬರುತ್ತಿದ್ದ ಕಲ್ಲುತುಂಬಿದ ಟಿಪ್ಪರ್ ತೆರಕಣಾಂಬಿಯ ಖಾಸಗಿ ಕಾನ್ವೆಂಟ್‌ನಿಂದ ಮಕ್ಕಳನ್ನು ಕಿಲಗೆರೆಗೆ ಕರೆದೊಯ್ಯುತಿದ್ದ ಟೆಂಪೋವಿನ ತೀರಾ ಹತ್ತಿರಕ್ಕೆ ಬರುತ್ತಿರುವುದನ್ನು ಕಂಡ ಮಕ್ಕಳು ಜೋರಾಗಿ ಕೂಗಿಕೊಂಡರು. ಕೂಡಲೇ ಎಚ್ಚತ್ತ ಚಾಲಕ ಟೆಂಪೋವನ್ನು ರಸ್ತೆಯ ತೀರಾ ಎಡಕ್ಕೆ ಚಲಿಸುವ ಮೂಲಕ ಭಾರೀ ಅನಾಹುತ ತಪ್ಪಿಸಿದ್ದಾನೆ.

ಘಟನೆ ನಂತರ ಟಿಪ್ಪರ್ ಚಾಲಕ ಅಲ್ಲಿಂದ ಪರಾರಿಯಾಗಿದ್ದು ಅದರ ನೋಂದಣಿ ಸಂಖ್ಯೆ ತಿಳಿದುಬಂದಿಲ್ಲ. ಇದನ್ನು ಪತ್ತೆಹಚ್ಚಿ ಕ್ರಮಕೈಗೊಳ್ಳಬೇಕು ಎಂದು ಕಿಲಗೆರೆ ಗ್ರಾಮದ ಮಹೇಂದ್ರಕುಮಾರ್ ಎಂಬುವರು ತೆರಕಣಾಂಬಿ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಮಾ.17ರಂದು ಚಿಕ್ಕತುಪ್ಪೂರು ಗೇಟ್ ಸಮೀಪ ರಸ್ತೆಯ ಗುಂಡಿ ತಪ್ಪಿಸಲು ಬಲಕ್ಕೆ ಬಂದ ಟಿಪ್ಪರ್ ಎದುರಿನಿಂದ ಬರುತ್ತಿದ್ದ ಶಾಲಾ ಮಕ್ಕಳಿದ್ದ ಟೆಂಪೋಗೆ ಡಿಕ್ಕಿಹೊಡೆದು 8 ಮಕ್ಕಳಿಗೆ ತೀವ್ರ ಪೆಟ್ಟು ಬಿದ್ದಿತ್ತು. ಟೆಂಪೋ ಚಾಲಕನ ಕಾಲು ಮುರಿದಿತ್ತು. ಇದರಿಂದ ರೊಚ್ಚಿಗೆದ್ದ ಸಾರ್ವಜನಿಕರು ಹಾಗೂ ಸಂಘಟನೆಯವರು ಬೀದಿಗಿಳಿದು ಪ್ರತಿಭಟನೆ ನಡೆಸಿ ಅಕ್ರಮ ಕಲ್ಲು ಸಾಗಾಣಿಕೆಯಲ್ಲಿ ತೊಡಗಿರುವ ಟಿಪ್ಪರ್‌ಗಳ ವಿರುದ್ಧ ಪ್ರತಿಭಟನೆ ನಡೆಸಿದ್ದರು. ಶಾಸಕ ಗಣೇಶ್ ಪ್ರಸಾದ್ ಸುದ್ದಿಗೋಷ್ಠಿ ನಡೆಸಿ ನಿಯಮಬಾಹಿರವಾಗಿ ಕಲ್ಲು ಸಾಗಾಣೆ ಮಾಡುವ ಟಿಪ್ಪರ್ ವಶಕ್ಕೆ ಪಡೆಯಲು ಹಾಗೂ ಶಾಲಾ ಸಮಯಗಳಲ್ಲಿ ಸಂಚಾರ ಬಂದ್ ಮಾಡಲಾಗುವುದು ಎಂದು ತಿಳಿಸಿದ್ದರು.



ಚಿಕ್ಕತುಪ್ಪೂರು ಘಟನೆ ನಂತರ ಕೆಲವು ದಿನಗಳಿಂದ ಸ್ಥಗಿತಗೊಂಡಿದ್ದ ಟಿಪ್ಪರ್ ಹಾವಳಿ ಮತ್ತೆ ಜೋರಾಗಿದೆ. ತಾಲೂಕಿನ ಗ್ರಾಮಾಂತರ ಪ್ರದೇಶಗಳಲ್ಲಿ ಓವರ್ ಲೋಡ್ ಟಿಪ್ಪರುಗಳ ಸಂಚಾರಕ್ಕೆ ಅವಕಾಶವಿಲ್ಲದಿದ್ದರೂ ನಿಯಮ ಬಾಹಿರವಾಗಿ ಸಂಚರಿಸುತ್ತಿವೆ. ಶಾಸಕರ ಸೂಚನೆಗಳನ್ನೂ ಲೆಕ್ಕಿಸದೆ ಹಿಂದಿನಂತೆಯೇ ಬೆಳಗಿನಿಂದ ರಾತ್ರಿಯವರೆಗೂ ಕಲ್ಲುಸಾಗಾಣಿಕೆಯಲ್ಲಿ ತೊಡಗಿವೆ. ಈ ಬಗ್ಗೆ ಸಂಬಂಧಿಸಿದವರು ಕ್ರಮಕೈಗೊಳ್ಳದಿದ್ದರೆ ಗ್ರಾಮಸ್ಥರೇ ಬೀದಿಗಿಳಿಯಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದ್ದಾರೆ.

ಕೊಳ್ಳೆಗಾಲದಲ್ಲೂ ನಿವೃತ್ತ ನೌಕರರ ಸಂಘದಿಂದ ಕಪ್ಪು ಪಟ್ಟಿ ಧರಿಸಿ ಪ್ರತಿಭಟನೆ



ಹೆಚ್ಚುವರಿ ತಹಸೀಲ್ದಾರ್ ಕುಮಾರ್ ಅವರ ಮೂಲಕ ಮನವಿ ಸಲ್ಲಿಸಲಾಯಿತು.

ಕೊಳ್ಳೇಗಾಲ, ಮಾ.25– ನಿವೃತ್ತ ನೌಕರರಿಗೆ ಹಾಗೂ ಕುಟುಂಬ ಪಿಂಚಣಿದಾರರಿಗೆ ಸಂಬಂಧಪಟ್ಟಂತೆ ಮುಂದಿನ ದಿನಗಳಲ್ಲಿ ನಿವೃತ್ತಿ ವೇತನ ಮತ್ತು ಕುಟುಂಬ ಪಿಂಚಣಿಯನ್ನು ಪರಿಷ್ಕರಣೆ ಮಾಡಲು ಹಾಗೂ ವಾರ್ಷಿಕವಾಗಿ ನೀಡುತ್ತಿದ್ದ 2 ತುಟ್ಟಿ ಭತ್ಯೆಯನ್ನು ನೀಡಲು ಸಾಧ್ಯವಿಲ್ಲ ಎಂಬ ಕೇಂದ್ರ ಸರ್ಕಾರದ ನೀತಿಯನ್ನು ಖಂಡಿಸಿ ಕರ್ನಾಟಕ ನಿವೃತ್ತ ನೌಕರರ ಸಂಘ ತಾಲೂಕು ಘಟಕದ ಪದಾಧಿಕಾರಿಗಳು ತಮ್ಮ ತೋಳಿಗೆ ಕಪ್ಪು ಪಟ್ಟಿ ಧರಿಸಿ ಪ್ರತಿಭಟನೆ ನಡೆಸಿದರು.

ಪಟ್ಟಣದ ತಾಲೂಕು ಕಚೇರಿ ಮುಂಭಾಗದಲ್ಲಿ ಜಮಾವಣೆಗೊಂಡ ನಿವೃತ್ತ ನೌಕರರು ತೋಳಿಗೆ ಕಪ್ಪು ಪಟ್ಟಿಯನ್ನು ಧರಿಸಿ ಕೇಂದ್ರ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ, ಪ್ರಧಾನಮಂತ್ರಿ ಮೋದಿ ಅವರು ನ್ಯಾಯಯುತ ಬೇಡಿಕೆಗೆ ಸ್ಪಂದಿಸಬೇಕು, ಕೇಂದ್ರ ಸರ್ಕಾರ ಈ ವಿಚಾರದಲ್ಲಿ 2 ತುಟ್ಟಿ ಭತ್ಯೆ ನೀಡಲು ಸಾಧ್ಯವಿಲ್ಲ ಎಂಬ ನಿರ್ಣಯವನ್ನು ಮರು ಪರಿಶೀಲಿಸಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು

ಇದೇ ವೇಳೆ ಹೆಚ್ಚುವರಿ ತಹಸೀಲ್ದಾರ್ ಕುಮಾರ್ ಅವರ ಮೂಲಕ ಮನವಿ ಸಲ್ಲಿಸಲಾಯಿತು. ಈ ವೇಳೆ ಕರ್ನಾಟಕ ನಿವೃತ್ತ ನೌಕರರ ತಾಲೂಕು ಘಟಕದ ಅಧ್ಯಕ್ಷ ಶೇಖರ್, ಕಾರ್ಯದರ್ಶಿ ಶಿವಸ್ವಾಮಿ, ಗೌರವಾಧ್ಯಕ್ಷ ಚನ್ನಮಾದೇಗೌಡ, ಕೆಂಚೇಗೌಡ, ಅಣ್ಣಾದ್ರೆಯ್ಯ, ಎಂ.ಬಸವರಾಜು, ಗೌಡಪ್ಪ, ಇಂದ್ರಕುಮಾರ್, ಸಿದ್ದಯ್ಯ, ಶ್ರೀನಿವಾಸ್, ವೀರಪ್ಪ ಇನ್ನಿತರಿದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ವಧು ಬೇಕಾಗಿದ್ದಾರೆ
ಅಯ್ಯಂಗಾರ್ ಜಾತಿಯ 39 ವರುಷದ ಡೈವೋರ್ಸ್ ಆಗಿರುವ ವರನಿಗೆ ತ್ರಿಮತಸ್ಥ ಬ್ರಾಹ್ಮಣರಲ್ಲಿ ವಧು ಬೇಕಾಗಿದ್ದಾರೆ. ವರನು ಒಳ್ಳೆಯ ಕೆಲಸದಲ್ಲಿದ್ದಾರೆ. ಮಧ್ಯವರ್ತಿಗಳಿಗೆ ಅವಕಾಶವಿರುವುದಿಲ್ಲ. ಸಂಪರ್ಕಿಸಿ
9341946820
8050720592

ಬೇಕಾಗಿದ್ದಾರೆ
ಸೇಲ್ಸ್ ಬಾಯ್ಸ್ ಮತ್ತು ಗರ್ಲ್ಸ್ ಪಯೋನೀರ್ ಸ್ಪೋರ್ಟ್ಸ್, ಮೈಸೂರು
9980151488
9886324288

ಸೈಟು ಮಾರಾಟಕ್ಕಿದೆ
30x50(ರೆವಿನ್ಯೂ)
ವಿಜಯನಗರ 2ನೇ ಹಂತ (ವಿದ್ಯಾವರ್ಧಕ ಇಂಜಿನಿಯರ್ ಕಾಲೇಜ್ ಹಿಂಭಾಗ)
9886651605

ಛತ್ರ ಖಾಲಿ ಇದೆ
26, 27- April -2026
GLN Convention Hall, Bogadi, Mysuru
9845129666
7411250999

NOTICE
JCK INFRASTRUCTURE DEVELOPMENT LTD. (PREVIOUS NAME KAP CHEM LTD.) IS ONE OF THE RESPONDENT IN PARTITION SUIT 108 OF 2003 IN KOLKATA HIGH COURT. NO INTERIM ORDER HAS BEEN GRANTED. PARTIES ARE CAUTIONED AGAINST PURCHASE OF LAND ETC. WHICH WILL BE AT THEIR OWN RISK.
Sd/- (DILIP KAPUR) PLAINTIF

MYSURU RETINA CARE STAFF REQUIRED
[FRESHER OR EXPERIENCE]
1. OPTOMETRIST,
2. RECEPTIONIST,
3. OT STAFF,
CONTACT NUMBER
7338369364/ 0821-2543244
#22A, SRI GURU KRUPAM, 1ST FLOOR, NIVEDITHA NAGAR, MYSORE-570022

ಬೋಳು ತಲೆಯ ಸಮಸ್ಯೆಯೇ?

SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

WANTED
E-Commerce Experience Telecaller, (Hindi, Tamil, Telugu) Ladies Only, Salary : 20,000/-
Contact
9916739611
8050031593
8197193138

COMMERCIAL SPACE FOR RENT
Commercial Space Attached to Ring Road opposite to APMC For Rent, Mysore. Contact
7975437956
9886386698

ನಿವೇಶನ ಮಾರಾಟಕ್ಕಿದೆ
ಪೂರ್ವದಿಕ್ಕು– ಹಳೇ R.T. ನಗರ
50x80ರ ಅಳತೆ
Owner 8971611927

ಮೈಸೂರಿನಾದ್ಯಂತ ಕಂಪನಿಗಳಿಗೆ
ಮನೆಯಿಂದಲೇ ಕೆಲಸ ಡೇಟಾ ಎಂಟ್ರಿ ಪ್ಯಾಕಿಂಗ್ ಕೆಲಸಗಳಿಗೆ ನೇರ ಆಯ್ಕೆ 20,000 ದಿಂದ ಕೊರಿಯರ್ ಲಭ್ಯವಿದೆ.
9964322833

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
ರೂ. 900. ಸಂಪರ್ಕಿಸಿ:
Mob: 9108048064

SITE FOR SALE
SHREE SAPTHAMATHRUKA LAYOUT
30X40 West Facing @ 32 Lacks
30X42 South Facing @ 34 Lacks
Next to SAHA MEADOWS & JSS LAYOUT STAGE -4, Before JSS INTERNATIONAL UNIVERSITY & UP-Coming PHERIPHERAL RING ROAD
Ready to Register E-Khata & Bank Loan Available
7795 609 173

REQUIRED
Security Supervisor with Experience and Also Security Guards.
9535162076
8951212305

APARTMENT FLAT FOR SALE
Single BHK Near Devegowda Circle Alanahalli
27 Lakhs - Neg
9986924777

ತಕ್ಷಣ ಬೇಕಾಗಿದ್ದಾರೆ
ವೆಲ್ಡರ್ಸ್ ಮತ್ತು ಫಿಟ್ಟರ್ಸ್ 2 Years Experience ITI Holder or Diploma Holder
A.N. ಇಂಜಿನಿಯರಿಂಗ್ ವರ್ಕ್ಸ್, ರಾಜೀವ್‌ನಗರ, ಮೈಸೂರು
9845718152
7892529528

30x50 ಅಳತೆಯ ಸೈಟ್ ಬಾಡಿಗೆಗೆ ಲಭ್ಯವಿದೆ
(ಗೋಡಾನು ಅಥವಾ ಇತರೆ ವಾಣಿಜ್ಯ ಉದ್ದೇಶಗಳಿಗೆ, ನೀರು ವಿದ್ಯುತ್ ಸೌಲಭ್ಯವಿದೆ) ಸ್ಥಳ: ಕಾರ್ತೀಕ ಲೇಔಟ್, ರಿಂಗ್ ರೋಡ್ ಪಕ್ಕ (500 meter ದೂರ) ರಾಮಕೃಷ್ಣ ನಗರ I block, ಮೈಸೂರು
9901936133

ಬೇಕಾಗಿದ್ದಾರೆ
ಮೈಸೂರು ಸಿಟಿ ಏರಿಯಾದಲ್ಲಿ ಕೆಲಸ ಮಾಡಲು ಪುರುಷ ಸೆಕ್ಯೂರಿಟಿ ಗಾರ್ಡ್ ಮಹಿಳಾ ಸೆಕ್ಯೂರಿಟಿ ಗಾರ್ಡ್, ಪುರುಷ ಮತ್ತು ಮಹಿಳಾ ಹೌಸ್‌ಕೀಪಿಂಗ್, ಗನ್‌ಮ್ಯಾನ್ ಮತ್ತು ಅನುಭವ ಇರುವ ಫೀಲ್ಡ್ ಆಫೀಸರ್ ಬೇಕಾಗಿದ್ದಾರೆ. ಆಕರ್ಷಕ ವೇತನ ಜೊತೆ ESI & PF ಇರುತ್ತದೆ. ವಾರ್ಷಿಕ ಬೋನಸ್ ಕೂಡ ಲಭ್ಯವಿರುತ್ತದೆ. ತಕ್ಷಣ ಸಂಪರ್ಕಿಸಿ
Contact : 8884204612
7019378337, 9483076815

SITE FOR SALE
30X40 South Face in Kenchalgud
6366440444

ಬೇಕಾಗಿದ್ದಾರೆ
ಮೈಸೂರಿನ ಪ್ರಸಿದ್ಧ ಆಟೋಮೊಬೈಲ್ ಕಂಪನಿಗೆ ಬೇಕಾಗಿದ್ದಾರೆ,
* Bike Showroom ಸೇಲ್ಸ್ ಎಕ್ಸಿಕ್ಯೂಟಿವ್ ಕೂಡಲೇ ಸಂಪರ್ಕಿಸಿ–
9980751999

SITES FOR SALE
In Mysore Kergalli MUDA Approved Sites for Sale 30x40, 30x50 E/N facing Corner Sites also Available 5500/-sqft Slightly Negotiable
9380142389

NADIG'S ACADEMY
Srirampura , 2nd Stage, Mysore. Contact us for 9th and 10th std State/ CBSE Crash Courses
9945983598

ಶ್ರೀ ಗೌರಿಶಂಕರ ಟ್ರಾವೆಲ್ಸ್
30–4–26(6 ದಿನ) – ಅಯೋಧ್ಯ, ದೆಹಲಿ, ಆಗ್ರಾ, ಮಥುರ, ಪ್ರಯಾಗ್‌ರಾಜ್, ಕಾಶಿ
15–5–26(4 ದಿನ) – ಉಜ್ಜಯಿನಿ, ಓಂಕಾರೇಶ್ವರ, ಇಂದೋರ್,
29–5–26(12 ದಿನ) – ಗಂಗೋತ್ರಿ, ಯಮುನೋತ್ರಿ, ಕೇದಾರನಾಥ್, ಬದರೀನಾಥ್, ಹರಿದ್ವಾರ್, ಮಸ್ಸೂರಿ(ವಿಮಾನ, ಬಸ್, ಊಟ, ರೂಂ)
Ph: 9620002114

ಸದ್ಗುರು ಮ್ಯಾರೇಜಸ್
ಎಲ್ಲಾ ಜಾತಿಯ ವಧುವರರು ವಿಧುರರು ವಿಧವೆಯರು ವಿಚ್ಛೇದಿತರು ನೇರ ಸಂಪರ್ಕಿಸಿ, ಪ್ರತಿದಿನ ವಧುವರರ ನೇರ ಸಂದರ್ಶನ ಇರುತ್ತದೆ.
9448229184
7899625268

ತಕ್ಷಣ ಬೇಕಾಗಿದ್ದಾರೆ
ಸರಸ್ವತಿಪುರಂ ಕುವೆಂಪುನಗರ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ
ವಿದ್ಯಾರ್ಹತೆ : SSLC ಮೇಲ್ಪಟ್ಟು
ಸಂಬಳ : 21,000/-
ವಿದ್ಯಾರ್ಹತೆ : 50 ವರ್ಷದೊಳಗೆ ESI & PF ಊಟ ತಿಂಡಿ ಸೌಲಭ್ಯವಿರುತ್ತದೆ.
9620777819

WANTED WELDERS & HELPERS
ಕೆಲಸಕ್ಕೆ ಬೇಕಾಗಿದ್ದಾರೆ ಫ್ಯಾಬ್ರಿಕೇಟರ್ಸ್
9482584809

ಬೇಕಾಗಿದ್ದಾರೆ
ಹ್ಯಾಂಡ್ ಪ್ರೆಸ್ ಕೆಲಸಕ್ಕೆ SSLCವರೆಗಿನ ವಿದ್ಯಾರ್ಹತೆಯ ಹುಡುಗರು ಬೇಕಾಗಿದ್ದಾರೆ.
ಸಂಪರ್ಕಿಸಿ : ಲಕ್ಷ್ಮೀ
Yogik Engineering Metagalli, Mysore
9945161738

WANTED
Ladies Employee for Voltage Stabilizer Company Qualification : ITI Electronics
Contact
9880204106

JOB VACANCY
curehood life Science Company, HQ: Mysore, Medical Representative post Qualification : Any Degree Both Freshers & Experienced are Preferable
Contact: Adarsh
7259762385

ಸೈಟ್ ಬೇಕಾಗಿದೆ
30x40
ವಿಜಯನಗರ 4ನೇ ಹಂತ
6362920139
ಮಧ್ಯವರ್ತಿಗಳು ಕ್ಷಮಿಸಿ

ದೇವಸ್ಥಾನಕ್ಕೆ ಮ್ಯಾನೇಜರ್ ಕೆಲಸಕ್ಕೆ ಬೇಕಾಗಿದ್ದಾರೆ
ಆಸಕ್ತಿಯುಳ್ಳಪುರುಷರು ಶ್ರೀ ಆದಿಶಕ್ತಿ ಶ್ರೀ ಬಂದಂತಮ್ಮ ಶ್ರೀ ಕಾಳಮ್ಮ ದೇವಸ್ಥಾನ ನ್ಯೂ ಕಾಂತರಾಜಅರಸು ರಸ್ತೆ ಕೆ. ಜಿ ಕೊಪ್ಪಲು. ಕುವೆಂಪುನಗರ, ಮೈಸೂರ್ ಇಲ್ಲಿಗೆ ಮಿಮ್ಮಾಂಕ ದಿನಾಂಕ 29–3–2026ರ ಭಾನುವಾರ ಸಂಜೆ 5–00ರೊಳಗೆ ಸಂದರ್ಶನಕ್ಕೆ ಹಾಜರಾಗಲು ತಿಳಿಸಲಾಗಿದೆ
ಅಧ್ಯಕ್ಷರು: 9880839777
ಕಾರ್ಯದರ್ಶಿ C ಯೋಗೇಶ್: 8073674058

ತಕ್ಷಣ ಬೇಕಾಗಿದ್ದಾರೆ
ಹೆಬ್ಬಾಳ್ ಮೇಟಗಳ್ಳಿ ಮತ್ತು ಕೂರ್ಗಳ್ಳಿ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ
ವಿದ್ಯಾರ್ಹತೆ : SSLC ಮತ್ತು ಮೇಲ್ಪಟ್ಟು
ಸಂಬಳ : 20,000+W/o(8 hrs)
ಊಟ ತಿಂಡಿ ಸೌಲಭ್ಯವಿರುತ್ತದೆ.
9880727819
9620667819

ಮಾರಾಟಕ್ಕೆ ಇವೆ
ಸಿಮೆಂಟ್ ಇಟ್ಟಿಗೆ ಮಾಡುವ ಪ್ಯಾಕ್ಟರಿ
ಲೀಜ್ ಅಥವಾ ಬಾಡಿಗೆಗೆ ದೂರಯುತ್ತದೆ
ಹಾಗೂ
ಸಿಮೆಂಟ್ ಇಟ್ಟಿಗೆ ಮಾಡುವ ಮಿಷನ್‌ಗಳು ಮಾರಾಟಕ್ಕೆ ಇವೆ
ಸಿಮೆಂಟ್ ಕಾಂಕ್ರೀಟ್ ಮಾಡುವ ಮಿಕ್ಸರ್ ಮಿಷನ್‌ಗಳು ಮಾರಾಟಕ್ಕೆ ಇವೆ
ಸಂಪರ್ಕಿಸಿ: 83108 14289

ಡ್ರೈವರ್ ಬೇಕಾಗಿದ್ದಾರೆ
ಸಂಬಳ 15000–20000
ಉಚಿತ ಊಟ– ವಸತಿ ಸೌಲಭ್ಯವಿದೆ.
8884179981

ಮನೆ ಮಾರಾಟಕ್ಕಿದೆ
ಮೈಸೂರು ನಗರದ ವಿಜಯನಗರ 4ನೇ ಹಂತ, 3ನೇ ಫೇಸ್ ಸಮೀಪ ಪರ್ಲ್ ಹ್ಯಾಬಿಟಾಟ್ ಲೇಔಟ್ ನಲ್ಲಿ ಸುಂದರ ಮನೆ ಮಾರಾಟಕ್ಕೆ ಲಭ್ಯ.
ಮನೆಯ ವಿವರಗಳು: 30X50 ಅಡಿ ಸೈಟು. ಊ+2 ಮಹಡಿ ನಿವಾಸಿ ಮನೆ ಪಶ್ಚಿಮ ಮುಖಿ ಸೈಟ್, ಉತ್ತರ ಮುಖಿ ಮುಖ್ಯ ಬಾಗಿಲು ಉತ್ತಮ ಸ್ಥಳ, ಶಾಂತ ವಾತಾವರಣ, ಎಲ್ಲಾ ಸೌಲಭ್ಯಗಳಿಗೆ ಹತ್ತಿರ
9986621579

IMMEDIATE REQUIREMENT
Accountant (Tally ERP 9)
Auditor (Expert in MS-Office)
Data Entry Operator with MS-Office (Kannada and English Typing)
Minimum 2 Years of Experience)
(Attractive salary with ESI and EPF)
0821-2543527
0821-4148888
https://maps.app.goo.gl/1v3kQyFCGjfEyUn1A

ಬೇಕಾಗಿದ್ದಾರೆ
ಸೂಪರ್‌ವೈಸರ್
ಡ್ರೈವರ್(EICHER)
9731356002
9606349136

ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ
1) ಹೂಟಗಳ್ಳಿ ಇಂಡಸ್ಟ್ರಿಯಲ್ ಏರಿಯಾ
2) ಪಂಪ್‌ಹೌಸ್ (ಕೆಆರ್‌ಎಸ್ ರಸ್ತೆ)
9686422400
9242406261

ಬೇಕಾಗಿದ್ದಾರೆ
Xerox ಅಂಗಡಿಯಲ್ಲಿ ಕೆಲಸ ಮಾಡಲು Computer Knowledge ಇರುವ Lady ಬೇಕಾಗಿದ್ದಾರೆ.
CSC ಸೆಂಟರ್‌ನಲ್ಲಿ ಕೆಲಸ ಮಾಡಿ ಅನುಭವ ಇರಬೇಕು.
Vivek
9686891690

ತಕ್ಷಣ ಬೇಕಾಗಿದ್ದಾರೆ
ನಂಜನಗೂಡಿನ ಕಡಕೊಳ ಏರಿಯಾದಲ್ಲಿನ TVS ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ
ವಿದ್ಯಾರ್ಹತೆ : SSLC ಮೇಲ್ಪಟ್ಟು
ವಯೋಮಿತಿ : 50 ವರ್ಷದೊಳಗೆ
ಸಂಬಳ : 18000 (8 hrs, 26 ದಿನಗಳು)
ಊಟ, ತಿಂಡಿ, ವಸತಿ ಸೌಲಭ್ಯವಿರುತ್ತದೆ.
9620777819

PRAKRUTHI PROPERTIES
FOR SALE
Future Commercial Sites
30x40, 30x50, 50x80.
@ 50 feet Road New RT Nagar, Near Defence Apartments
BANK LOAN UP TO 80%
95386 90359, 90359 90359

ತಕ್ಷಣ ಕೆಲಸಕ್ಕೆ ಬೇಕಾಗಿದ್ದಾರೆ
ರಿಯಲ್ ಎಸ್ಟೇಟ್ ಆಫೀಸ್‌ಗೆ ಮಹಿಳಾ ಸಿಬ್ಬಂದಿ ಬೇಕಾಗಿದ್ದಾರೆ. ವಿಜಯನಗರ 4ನೇ ಹಂತದ ಸಮೀಪ ವಾಸಿಸುವವರಿಗೆ ಆದ್ಯತೆ ನೀಡಲಾಗುತದೆ. ಅನುಭವಿಗಳಿಗೂ ಹಾಗೂ ಫ್ರೆಶರ್‌ಗೂ ಅವಕಾಶ ಇದೆ.
9008598883
7019997191

ಬೇಕಾಗಿದ್ದಾರೆ
ಕಂಪ್ಯೂಟರ್ ಆಪರೇಟರ್
(ಆಸ್ತಿ ಪತ್ರ ಬರಹಗಾರರು ಆಫೀಸ್)
ಸಿದ್ಧಾರ್ಥ ನಗರ, ಮೈಸೂರು
8971936090
9686071750

ಮನೆ ಬಾಡಿಗೆಗೆ ಇದೆ
2 ಬೆಡ್‌ರೂಮ್ ಕೆಳಗಡೆ ಸಸ್ಯಹಾರಿಗಳಿಗೆ ರಮಾಬಾಯಿನಗರ No 342 ಮೈಸೂರು–8
9845110842

ವರ ಬೇಕಾಗಿದೆ
ಶ್ರೀಮಂತ, ಸುಸಂಸ್ಕೃತ, ಉನ್ನತ ಸರ್ಕಾರಿ ಉದ್ಯೋಗಿ ಹೆಣ್ಣು ಮಕ್ಕಳಿಗೆ 30 ವರ್ಷದ ಮೇಲ್ಪಟ್ಟು (5 ಅಡಿ 10 ಅಂಗುಲದ ಮೇಲ್ಪಟ್ಟು) ನಾಯಕ ಉಪ ಜಾತಿಯ ವರ ಬೇಕಾಗಿದ್ದಾರೆ.
9845696776
8152803438

ಬಾಡಿಗೆಗೆ
NEW 2 BHK with Attach & Solar 6No ಮನೆಗಳು ಮತ್ತು 1800 sqft Ground floor off or Godown Space near ಗೋಪಾಲಸ್ವಾಮಿ ಶಿಶುವಿಹಾರ, CKC, SDM College & JSS Hospital 6th cross ಬಸವೇಶ್ವರ ರಸ್ತೆ, ಸುರಲೊಂದು ಗಣಪತಿ ದೇವಸ್ಥಾನ ಹಿಂಭಾಗ
9606063966

ಉಚಿತ ಸಾಮೂಹಿಕ ವಿವಾಹ
26/04/2026 ಭಾನುವಾರ ಮೈಸೂರಿನ ಗೀತಾ ಮಂದಿರದಲ್ಲಿ ಚಿನ್ನದ ತಾಳಿ ಹಾಗೂ ಬಟ್ಟೆಗಳನ್ನು ನೀಡಲಾಗುವುದು
ಅಧ್ಯಕ್ಷರು ಕಸ್ತೂರಿ ಚಂದ್ರು
8867688676

ಬೇಕಾಗಿದ್ದಾರೆ
ಮೆಡಿಕಲ್ ಸ್ಟೋರ್‌ಗಳಲ್ಲಿ ಕೆಲಸ ಮಾಡಿ ಅನುಭವ ಇರುವ ಹುಡುಗರು Sales man ಕೆಲಸಕ್ಕೆ ಬೇಕಾಗಿದ್ದಾರೆ, ಮೈಸೂರು
9663022650
8310848018

ಗೋಡನ್ ಅಥವಾ ಆಫೀಸಿಗೆ
ಯೋಗ್ಯವಳ್ಳ ಮಳಿಗೆ ಖಾಲಿಯಿದೆ. ಭೀಮ ಬ್ರದರ್ಸ್ ಹಿಂಭಾಗ, ಡಿ.ದೇವರಾಜ ಅರಸು ರಸ್ತೆ, ಸಂಪರ್ಕಿಸಿ
9945758599
ಆಗಲ 12 ಉದ್ದ 26 ಮಧ್ಯವರ್ತಿಗಳಿಗೆ ಅವಕಾಶವಿರುವುದಿಲ್ಲ

WANTED
Experienced Lady Telecallers Mysore Properties (Properties Marketing Office) Hootagally
9448958332

ಸೈಟು ಮಾರಾಟಕ್ಕಿದೆ
30x40 E/F 38 ಲಕ್ಷ ಸುವರ್ಣನಗರ, ಬೋಗಾದಿ
20x42 East Notrth Corner,. 55 ಲಕ್ಷ ವಿಜಯನಗರ, 4ನೇ ಹಂತ ಪಕ್ಕ, ಮೈಸೂರು
9845765573
9986856999

ಬೇಕಾಗಿದ್ದಾರೆ ಹಾಗೂ ಬೇಕಾಗಿದೆ
ಕೊರಿಯರ್ ಸಂಸ್ಥೆಯಲ್ಲಿ ಆಫೀಸ್ ಕೆಲಸಕ್ಕೆ ಕಂಪ್ಯೂಟರ್ ಜ್ಞಾನ ಹೊಂದಿರುವ ಮಹಿಳೆಯರು ಬೇಕಾಗಿದ್ದಾರೆ, ಹಾಗೂ ಪಾರ್ಸೆಲ್ ಡೆಲಿವರಿ ಮಾಡಲು ಸ್ವಂತ ವಾಹನ ಹೊಂದಿರುವ TATA-ACE, or ZEP ಗಾಡಿ ಬೇಕಾಗಿದೆ. ಸ್ಥಳ: ಮೈಸೂರು, ದಿನಾಂಕ: 25–03–2026
9449871790

ಹೊಸ ಮನೆ ಮಾರಾಟಕ್ಕಿದೆ
20x30 E/F-Duplex ಮನೆ ಕಡಿಮೆ ಬೆಲೆಗೆ
(Offer Best Price)
ಲಲಿತಾದ್ರಿನಗರ–ಬಾಲಾಜಿ ಲೇಔಟ್‌ನಲ್ಲಿ ಒಮ್ಮೆ ಭೇಟಿ ನೀಡಿ– ಕೊಳ್ಳಿರಿ ಬೇಗ ಕರೆಮಾಡಿ
9480222708
7760065890

ಮಳಿಗೆ ಬಾಡಿಗೆಗೆ ಇದೆ
11x8 sqft No 842/A ಲೋಕ ರಂಜನ್ ಮಹಲ್ ರಸ್ತೆ, ಇಟ್ಟಿಗೆಗೂಡು (ಇಂದಿರಾ ನಗರ) Mysore-10
V.S ಪದ್ಮನಾಭನ್
9844623669

ಶ್ರೀ ಗುರು ರಾಘವೇಂದ್ರಾಯ
ನಮ್ಮಲ್ಲಿ–ಎಲ್ಲ ತರಹದ ಅಂಗಡಿ– Office Bank -20-40 ಜನರುಗಳಿಗೆ (ಸಸ್ಯಹಾರಿ) ಊಟವನ್ನು ಮನೆಯಿಂದ ಶುಚಿಯಾಗಿ ಮಾಡಿಕೊಡಲಾಗುವುದು. ಬೇಕೆನ್ನುವವರು ಈ ನಂ.ಗೆ ಕರೆಮಾಡಿ
7795320056

SITE FOR SALE
30x40 West Facing good location at Prashanth Chaya Layout, PHES 1 DTCP approved ready to Registration document,
Near Lal Bahadur Shastri Nagar, Mysore.
MORE DETAILS CONTACT :
9845311775

ಕಮರ್ಷಿಯಲ್ ಸೈಟ್ ಮಾರಾಟಕ್ಕಿದೆ
ಉತ್ತರ ಪೂರ್ವ ಕಾರ್ನರ್ ಕಮರ್ಷಿಯಲ್ ಸೈಟ್ ಮಾರಾಟಕ್ಕಿದೆ. ಸಪ್ತಮಾತೃಕ ಹಂತ–01 ಮಹಾವೀರ್ ನಗರ, ಮೈಸೂರು.
9448601655

PRAKRUTHI PROPERTIES
FOR SALE
20x30 Ground 45lakhs
20x30 duplex 60 lakhs
20x30 G+1 62 lakhs
Complete Interiors With Registration.
Only few sites left
Bogadi, Rainbow School
BANK LOAN UP TO 80%
READY TO REGISTRATION
READY TO CONSTRUCTION
95386 90359, 90359 90359

SITE FOR SALE
MUDA APPROVED 30X50 NORTH-EAST CORNER. ANANDSAGAR/PRAGATHI layout BEHIND ST JOSEPH CENTRAL SCHOOL ILWALA.
9972399939

PRAKRUTHI PROPERTIES
FOR SALE
2 BHK 3 BHK APARTMENTS @ RAMAKRISHNA NAGAR
Near Andholana circle
ON GOING PROJECT
Bookings Open
INCLUDING GST, LIMITED OFFER
95386 90359, 90359 90359

TV ಕೆಟ್ಟಿದೆಯೇ ?
LED, LCD TV ಗಳನ್ನು ರಿಪೇರಿ ಮಾಡಿಕೊಡಲಾಗುತ್ತದೆ. ನಮ್ಮಲ್ಲಿ Seconds LED TV ಗಳು ದೊರೆಯುತ್ತದೆ.
Teju Electronics, ಅಗ್ರಹಾರ
Mob: 9342114069

ತಕ್ಷಣ ಬೇಕಾಗಿದ್ದಾರೆ
ಅನುಭವವುಳ್ಳ ಸೆಕ್ಯೂರಿಟಿ ಫೀಲ್ಡ್ ಆಫೀಸರ್ & ಸೆಕ್ಯೂರಿಟಿ ಮಾರ್ಕೆಟಿಂಗ್ ಮ್ಯಾನೇಜರ್ ಬೇಕಾಗಿದ್ದಾರೆ. ಆಕರ್ಷಕ ಸಂಬಳ+W/o+ಬೋನಸ್ ವಸತಿ ಸೌಲಭ್ಯವಿರುತ್ತದೆ.
7259624713

ಮನೆ ಬಾಡಿಗೆಗೆ
ಸಣ್ಣ ಕುಟುಂಬಕ್ಕೆ #2/A ಸೆಂಟ್ ಥಾಮಸ್ ಸ್ಕೂಲ್ ಹತ್ತಿರ (ಸರ್ಲಿಂಗ್ ಚಾಟೀಸ್ ರಸ್ತೆ) ವಿಶ್ವೇಶ್ವರನಗರ, 19ನೇ ಕ್ರಾಸ್, ಮೈಸೂರು ಉತ್ತರ ದಿಕ್ಕು (North Face)
Ground Floor RCC 12 ½ x50
1 BHK ಮನೆ Visiting Time ಬೆಳಗ್ಗೆ 10:00 ರಿಂದ ಸಂಜೆ 6.00(ಪ್ರತಿದಿನ)
9845393364

ಜಮೀನು ಮಾರಾಟಕ್ಕಿದೆ
20 ಗುಂಟೆ ಜಮೀನು ಮಾರಾಟಕ್ಕಿದೆ ಬಿಳ್ಳಹಳ್ಳಿ ಬೀರಿಹುಂಡಿ ಡಾಂಬರ್ ಮೇನ್ ರೋಡ್‌ಗೆ ಅಟ್ಯಾಚ್ 40 ಫೀಟ್ ರೋಡ್ ಇದೆ. ಬೋಗಾದಿ ರಿಂಗ್ ರಸ್ತೆಯಿಂದ 8 ಕಿ.ಮೀ. ಆಸಕ್ತರು ಮಾತ್ರ ಸಂಪರ್ಕಿಸಿ
Mob: 9986629393

AGM ACADEMY TUITIONS
Admission open For -2026-27 8th, 9th & 10th (CBSE, ICSE & State)Regular and Summer Crash Course
Call: 9880217461
8660557233

DTCP SITES FOR SALE
30×40 SITE, BILIKERE, HUNSUR ROAD.
₹1200/- per Sft.
9611110601

WANTED
Experienced Field Executives (Must Know Car Driving) Mysore Properties, Hootagalli, (Properties Marketing Office)
9448958332

ಬೇಕಾಗಿದ್ದಾರೆ
ಅನುಭವವುಳ್ಳ ಮಹಿಳಾ ಕಂಪ್ಯೂಟರ್ ಆಪರೇಟರ್, ಮೈಸೂರು ಪ್ರಾಪರ್ಟೀಸ್ ಹೂಟಗಳ್ಳಿ (ಆಸ್ತಿಗಳ ಕಾಗದ ಪತ್ರಗಳ ಕಛೇರಿ)
9448958332

DTCP SITES FOR SALE
THALUR CIRCLE, OFF SRIRAMPURA RING ROAD, HD KOTE ROAD, MYSURU.
₹1900/- per Sft.
9606966006

ಬೇಕಾಗಿದ್ದಾರೆ
ಹಿನಕಲ್, ಸಿದ್ಧಾರ್ಥನಗರ ರಾಮಸ್ವಾಮಿ ಸರ್ಕಲ್ ಸಿಟಿ ಸುತ್ತಮುತ್ತ ಹಗಲು, ರಾತ್ರಿ ಪಾಳಿಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ಸಂಪರ್ಕಿಸಿ
9380990535

ಬೇಕಾಗಿದ್ದಾರೆ
ಬನ್ನಿಮಂಟಪ ಲಾಡ್ಜ್‌ನಲ್ಲಿ ರಿಸೆಪ್ಷನಿಸ್ಟ್(ಹುಡುಗರು)
08214006024

ಕಳೆದಿದೆ
ಲೇಟ್ ಎಸ್.ಚಂದ್ರು ಇವರ ಹೆಸರಿನಲ್ಲಿರುವ ಮನೆ ನಂ. 981 ಎಫ್, 1ನೇ ಮೇನ್, ವಿವೇಕಾನಂದ ನಗರ, ಮೈಸೂರು ಈ ಸ್ವತ್ತು ಹೆಚ್.ಕೆ.ಕೃಷ್ಣಮೂರ್ತಿ ರವರಿಗೆ ಮುಡಾ ದಿಂದ ಮಂಜೂರಾಗಿದ್ದು, ಸದರಿ ಮಂಜೂರಾದ ಸ್ವಾಧೀನ ಪತ್ರವು ಕಳೆದು ಹೋಗಿದ್ದು, ಸಿಕ್ಕವರು ದಯವಿಟ್ಟು ಸಂಪರ್ಕಿಸಿ
9035824007

ಕೆಲಸಕ್ಕೆ ಬೇಕಾಗಿದ್ದಾರೆ
ನಿಮ್ಮ ಬಿಡುವಿನ ವೇಳೆಯಲ್ಲಿ ಕುಳಿತು ಮನೆಯಿಂದಲೇ ಪ್ಯಾಕಿಂಗ್ ಕೆಲಸ ಮತ್ತು ಬರವಣಿಗೆ, ಹಾಗೂ ಟೈಪಿಂಗ್ ಕೆಲಸಗಳನ್ನು ಮಾಡಿ ಗಳಿಸಿ ತಿಂಗಳಿಗೆ 25,000/– ದಿಂದ 30,000/–ವರೆಗೆ
9380675221

ಉತ್ತರ ಭಾರತ ಪ್ರವಾಸ
5–6–2026 ರಿಂದ 18 ದಿನಗಳ ವಿಮಾನ, A.C. ರೈಲಿನಲ್ಲಿ 2+2 AC ಬಸ್ಸು ಅಯೋಧ್ಯ, ಕಾಶಿ, ಯಮುನೋತ್ರಿ, ಗಂಗೋತ್ರಿ ಕೇದಾರನಾಥ್, ಬದರೀನಾಥ್ ಮತ್ತು ಕಾಶ್ಮೀರ, ಕತ್ರ ಪ್ರವಾಸ ಕೆಲವೇ ಸೀಟುಗಳು ಬಾಕಿ ಇದೆ. ಸಂಪರ್ಕಿಸಿ, ಮೈಸೂರು
9481819973/ 7676167667

ಮೈಸೂರು ಮಿತ್ರ ಓದುಗರ ಗಮನಕ್ಕೆ
46
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 11 ರಲ್ಲಿ

ನಾಳೆ ಹೆಚ್.ಡಿ.ಕೋಟೆಯಲ್ಲಿ ಜನರೊಂದಿಗೆ ಜನತಾದಳ

ಸದಸ್ಯತ್ವ ನೋಂದಣಿಗೆ ನಿಖಿಲ್ ಕುಮಾರಸ್ವಾಮಿ ಚಾಲನೆ



ಸುದ್ದಿಗೋಷ್ಠಿಯಲ್ಲಿ ಜೆಡಿಎಸ್ ಮುಖಂಡ ಕೆ.ಎಂ.ಕೃಷ್ಣನಾಯಕ ಮಾತನಾಡಿದರು.

ಹೆಚ್.ಡಿ.ಕೋಟೆ, ಮಾ.25– ಪಟ್ಟಣದಲ್ಲಿ ಮಾ.27 ರಂದು 'ಜನರೊಂದಿಗೆ ಜನತಾದಳ ಮತ್ತು ಸದಸ್ಯತ್ವ ನೋಂದಣಿ ಅಭಿಯಾನ' ನಡೆಯಲಿದ್ದು, ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಉದ್ಘಾಟಿಸಲಿದ್ದಾರೆ ಎಂದು ಜೆಡಿಎಸ್ ಮುಖಂಡ ಕೆ.ಎಂ.ಕೃಷ್ಣನಾಯಕ ತಿಳಿಸಿದರು.

ಪಟ್ಟಣದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪಟ್ಟಣದ ಸಂತೇಮಾಳ ಮೈದಾನದಲ್ಲಿ ಅಂದು ಬೆಳಗ್ಗೆ ನಡೆಯುವ ಕಾರ್ಯಕ್ರಮದಲ್ಲಿ ಶಾಸಕ ಜಿ.ಡಿ.ಹರೀಶ್‌ಗೌಡ, ವಿಧಾನಪರಿಷತ್ ಸದಸ್ಯರಾದ ಸಿ.ಎನ್.ಮಂಜೇಗೌಡ, ವಿವೇಕಾನಂದ, ಮಾಜಿ ಸಚಿವ ಸಾ.ರಾ.ಮಹೇಶ್, ಮಾಜಿ ಶಾಸಕರಾದ ಕೆ.ಮಹದೇವು, ಅಶ್ವಿನ್ ಕುಮಾರ್ ಸೇರಿದಂತೆ ರಾಜ್ಯ, ಜಿಲ್ಲಾ ಮಟ್ಟದ ನಾಯಕರು ಸೇರಿದಂತೆ ಅನೇಕ ಗಣ್ಯರು ಭಾಗವಹಿಸಲಿದ್ದಾರೆ.

ಅಂದು ಬೆಳಗ್ಗೆ 11 ಗಂಟೆಗೆ ಬಿಜಿಎಸ್ ಸಮುದಾಯ ಭವನದಿಂದ ಸಂತೇಮಾಳದವರೆಗೆ ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಶಾಸಕ ಜಿ.ಡಿ.ಹರೀಶ್‌ಗೌಡ, ಮಾಜಿ ಸಚಿವ ಸಾ.ರಾ.ಮಹೇಶ್ ಸೇರಿದಂತೆ ಗಣ್ಯರನ್ನು ತೆರೆದ ವಾಹನದಲ್ಲಿ ಮೆರವಣಿಗೆಯಲ್ಲಿ ಸಾವಿರಾರು ಜೆಡಿಎಸ್ ಕಾರ್ಯಕರ್ತರು, ಮುಖಂಡರು ಹಾಗೂ ಅಭಿಮಾನಿಗಳೊಂದಿಗೆ ಕರೆತರಲಾಗುವುದು. ಈ ವೇಳೆ ಹ್ಯಾಂಡ್‌ಪೋಸ್ಟ್ ವೃತ್ತ ಹಾಗೂ ಹೆಚ್.ಡಿ.ಕೋಟೆ ಪಟ್ಟಣದಲ್ಲಿ ಕ್ರೇನ್ ಮೂಲಕ ನಿಖಿಲ್ ಕುಮಾರಸ್ವಾಮಿ ಅವರಿಗೆ ಸೇಬಿನ ಹಾರ ಹಾಕಿ, ಹೂ ಮಳೆಗರೆಯಲಾಗುವುದು. ಮಧ್ಯಾಹ್ನ 12 ಗಂಟೆಗೆ ವೇದಿಕೆ ಕಾರ್ಯಕ್ರಮ ಆರಂಭವಾಗಲಿದ್ದು, ಸದಸ್ಯತ್ವ ನೋಂದಣಿಗೆ ನಿಖಿಲ್ ಚಾಲನೆ ನೀಡಲಿದ್ದಾರೆ ಎಂದರು.

ಇದುವರೆಗೂ ರಾಜ್ಯದ 60 ತಾಲೂಕಿನಲ್ಲಿ ಜನರೊಂದಿಗೆ ಜನತಾದಳ ಮತ್ತು ಸದಸ್ಯತ್ವ ನೋಂದಣಿ ಅಭಿಯಾನ ಕಾರ್ಯಕ್ರಮ ನಡೆದಿದ್ದು, 61ನೇ ಕಾರ್ಯಕ್ರಮ ನಮ್ಮ ತಾಲೂಕಿನಲ್ಲಿ ಅದ್ದೂರಿಯಾಗಿ ನಡೆಯಲಿದೆ ಎಂದ ಅವರು ತಾಲೂಕು ಜೆಡಿಎಸ್ ಅಧ್ಯಕ್ಷ ಗಾದಿ ಚರ್ಚೆಗಳು ನಡೆಯುತ್ತಿದ್ದು, ಮುಂದಿನ ದಿನಗಳಲ್ಲಿ ರಾಜ್ಯ ಮತ್ತು ಜಿಲ್ಲಾ ಮಟ್ಟದ ನಾಯಕರ ಸಮ್ಮುಖದಲ್ಲಿ ಅಧ್ಯಕ್ಷರ ಆಯ್ಕೆಯಾಗಲಿದೆ. ಹೀಗಾಗಿ ಪಕ್ಷದ ಮುಖಂಡರು, ಕಾರ್ಯಕರ್ತರು ಯಾವುದೇ ಊಹಾಪೋಹಗಳಿಗೆ ಕಿವಿಗೊಡಬಾರದು ಎಂದು ಮನವಿ ಮಾಡಿದರು.

ಕಾರ್ಯಕ್ರಮದ ಬಳಿಕ ಆಗಮಿಸಿದ ಎಲ್ಲರಿಗೂ ಊಟದ ವ್ಯವಸ್ಥೆ ಮಾಡಲಾಗಿದ್ದು, ತಾಲೂಕಿನ ಜೆಡಿಎಸ್ ಮುಖಂಡರು, ಕಾರ್ಯಕರ್ತರು ಹಾಗೂ ನಿಖಿಲ್ ಕುಮಾರಸ್ವಾಮಿ ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕು ಎಂದು ಅವರು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಕೋಟೆ, ಸರಗೂರು ಜೆಡಿಎಸ್ ತಾಲೂಕು ಅಧ್ಯಕ್ಷರಾದ ಗೋಪಾಲಸ್ವಾಮಿ, ರಾಜೇಂದ್ರ, ಮಾಜಿ ಅಧ್ಯಕ್ಷರಾದ ಸಿ.ವಿ.ನಾಗರಾಜು, ನರಸಿಂಹೇಗೌಡ, ಟೌನ್ ಅಧ್ಯಕ್ಷ ಮಹೇಶ್, ಕಾರ್ಯದರ್ಶಿ ಶಿವಕುಮಾರ್, ಒಕ್ಕಲಿಗರ ಸಂಘದ ತಾಲೂಕು ಅಧ್ಯಕ್ಷ ಹರೀಶ್‌ಗೌಡ, ಮುಖಂಡರಾದ ಯೋಗನರಸಿಂಹೇಗೌಡ, ಶಿವಯ್ಯ, ಉದಯ ಕುಮಾರ್, ಶಾಂತರಾಜು, ಓ.ಕೆ.ಮಹೇಂದ್ರ, ಶಿವಲಿಂಗೇಗೌಡ, ನಾಗರಾಜು, ರಘು, ಕಾಳಪ್ಪಾಜಿ, ಭಾಸ್ಕರ್, ಶಿವು, ರಾಜು, ಶಿವಾಜಿ, ಡಿ.ನಾಗರಾಜು, ರಾಜು, ಸುರೇಶ್, ಕೇಶವ, ರವಿ, ತಮ್ಮಣ್ಣ ಇದ್ದರು.

ಕಾಂಗ್ರೆಸ್ ಮುಖಂಡರು ಜೆಡಿಎಸ್ ಸೇರ್ಪಡೆ

ಕಾಂಗ್ರೆಸ್ ಪಕ್ಷದ ದುರಾಡಳಿತದಿಂದ ಬೇಸತ್ತಿರುವ ತಾಲೂಕಿನ 18 ಗ್ರಾಮಗಳ ಸಾವಿರಾರು ಮುಖಂಡರು, ನಿಖಿಲ್ ಕುಮಾರಸ್ವಾಮಿ ಸಮ್ಮುಖ ದಲ್ಲಿ ಕಾಂಗ್ರೆಸ್ ತೊರೆದು ಜೆಡಿಎಸ್ ಪಕ್ಷ ಸೇರ್ಪಡೆ ಗೊಳ್ಳಲಿದ್ದಾರೆ.

– ಕೆ.ಎಂ.ಕೃಷ್ಣನಾಯಕ, ಜೆಡಿಎಸ್ ಮುಖಂಡ.

ಪಿಂಚಣಿ ರದ್ದುಪಡಿಸಲು ಮುಂದಾಗಿರುವ

ಕೇಂದ್ರ ಸರ್ಕಾರದ ವಿರುದ್ಧ ನಿವೃತ್ತ ನೌಕರರ ಪ್ರತಿಭಟನೆ



ನಿವೃತ್ತ ಸರ್ಕಾರಿ ನೌಕರರು ತಹಸೀಲ್ದಾರ್ ಮೋಹನಕುಮಾರಿ ಅವರಿಗೆ ಮನವಿ ಸಲ್ಲಿಸಿದರು.

ಸರಗೂರು, ಮಾ.25– ಪಿಂಚಣಿ ರದ್ದುಪಡಿಸಲು ಮುಂದಾಗಿರುವ ಕೇಂದ್ರ ಸರ್ಕಾರದ ಕ್ರಮ ಖಂಡಿಸಿ ನಿವೃತ್ತ ಸರ್ಕಾರಿ ನೌಕರರು ಪಟ್ಟಣದಲ್ಲಿ ಕಪ್ಪು ಪಟ್ಟಿ ಧರಿಸಿ ಪ್ರತಿಭಟನೆ ನಡೆಸಿದರು.

ಪಟ್ಟಣದ ತಹಸೀಲ್ದಾರ್ ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಅವರು ನಿವೃತ್ತ ಸರ್ಕಾರಿ ನೌಕರರ ಪಿಂಚಣಿ ರದ್ದುಗೊಳಿಸಲು ಮುಂದಾಗಿದ್ದಾರೆ ಎಂದು ಆರೋಪಿಸಿ ಕಪ್ಪು ಪಟ್ಟಿ ಧರಿಸಿ ಘೋಷಣೆ ಕೂಗುವ ಮೂಲಕ ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು.

ನಿವೃತ್ತ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಾಂಬಮೂರ್ತಿ ಮಾತನಾಡಿ, ಸರ್ಕಾರದಿಂದ ಬರುವ ಪಿಂಚಣಿ ಹಣದಿಂದ ನಮ್ಮ ಜೀವನ ನಡೆಯುತ್ತಿದ್ದು, ಇದನ್ನು ರದ್ದುಗೊಳಿಸಿದರೆ ಬದುಕು ಬೀದಿಗೆ ಬರಲಿದೆ. ಅಲ್ಲದೇ ಜೀವನ ನಡೆಸುವುದು ತುಂಬಾ ಕಷ್ಟಕರವಾಗಲಿದೆ. ಹೀಗಾಗಿ ಪಿಂಚಣಿ ರದ್ದುಪಡಿಸಲು ಮುಂದಾಗಿರುವುದನ್ನು ಕೈ ಬಿಡಬೇಕು ಎಂದು ಆಗ್ರಹಿಸಿದರು.

ಇದೇ ವೇಳೆ ಪ್ರತಿಭಟನಾಕಾರರಿಂದ ಮನವಿ ಸ್ವೀಕರಿಸಿ ಮಾತನಾಡಿದ ತಹಸೀಲ್ದಾರ್ ಮೋಹನ ಕುಮಾರಿ, ನಿಮ್ಮ ಮನವಿ ಪತ್ರವನ್ನು ಸರ್ಕಾರಕ್ಕೆ ಕಳುಹಿಸಲಾಗುವುದು ಎಂದು ಭರವಸೆ ನೀಡಿದರು.

ಪ್ರತಿಭಟನೆಯಲ್ಲಿ ನಿವೃತ್ತ ಸರ್ಕಾರಿ ನೌಕರರ ಸಂಘದ ಉಪಾಧ್ಯಕ್ಷ ಹೆಚ್.ಸಿ.ರಾಮಲಿಂಗಪ್ಪ, ಕಾರ್ಯದರ್ಶಿ ವಿಶ್ವೇಂದ್ರ, ಸದಸ್ಯರಾದ ಜವರನಾಯಕ, ಮಲ್ಲೇಶ್, ವೆಂಕಟರಾಮು, ಚಿಕ್ಕ ಚನ್ನನಾಯಕ, ಬಿ.ಎನ್.ನಂಜಯ್ಯ, ಶಿವಣ್ಣ, ಎಸ್.ಸಿ.ಮಹದೇವು, ಸುಬ್ಬರಾಮು ಸೇರಿದಂತೆ ಇನ್ನಿತರರಿದ್ದರು.

ವೇಷಭೂಷಣ ಸ್ಪರ್ಧೆಯಿಂದ ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ವೃದ್ಧಿ



ನಂಜನಗೂಡಿನಲ್ಲಿ ವೇಷಭೂಷಣ ಸ್ಪರ್ಧೆ ನಡೆಯಿತು.

ನಂಜನಗೂಡು, ಮಾ.25– ವೇಷಭೂಷಣ ಸ್ಪರ್ಧೆ ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ಹೆಚ್ಚಿಸಿ, ಸಭಾ ಕಂಪನವನ್ನು ಹೋಗಲಾಡಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ ಎಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ಎಂ.ಶಂಕರ್ ತಿಳಿಸಿದರು.

ಗರಳಪುರಿ ಉತ್ಸವದ ಅಂಗವಾಗಿ ನಗರದ ಗುರುಭವನದಲ್ಲಿ ನಡೆದ ವೇಷ ಭೂಷಣ ಸ್ಪರ್ಧೆ ಮತ್ತು ಕೇಶ ಅಲಂಕಾರ ಸ್ಪರ್ಧೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ವಿದ್ಯಾರ್ಥಿಗಳ ಸಮಗ್ರ ಬೆಳವಣಿಗೆಗೆ ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳು ಅವಶ್ಯಕ. ವೇಷ ಭೂಷಣ ಸ್ಪರ್ಧೆಗಳಲ್ಲಿ ಪೌರಾಣಿಕ ಕಥೆಗಳಲ್ಲಿ ಬರುವ ಕೃಷ್ಣ, ರಾಧೆ ಮತ್ತು ಸಾಮಾಜಿಕ ಪಾತ್ರಗಳ ಉಡುಪುಗಳನ್ನು ಧರಿಸಿ ಅಭಿನಯಿಸುವುದರಿಂದ ವಿದ್ಯಾರ್ಥಿಗಳಲ್ಲಿ ಸೃಜನಶೀಲತೆ, ಆತ್ಮವಿಶ್ವಾಸ ವೃದ್ಧಿಯಾಗಲಿದೆ. ಪೋಷಕರು ವಿದ್ಯಾರ್ಥಿಗಳ ಪ್ರತಿಭೆ ಪ್ರೋತ್ಸಾಹಿಸಿ ಅವರಿಗೆ ವೇದಿಕೆ ಕಲ್ಪಿಸಲು ಮುಂದಾಗಬೇಕು. ಕೇಶಲಂಕಾರ ಸ್ಪರ್ಧೆ ಮಹಿಳೆಯರಿಗೆ ತಮ್ಮ ಸೃಜನಶೀಲತೆ, ಕೌಶಲ್ಯಗಳನ್ನು ಪ್ರದರ್ಶಿಸಲು ಉತ್ತಮ ವೇದಿಕೆಯಾಗಿದೆ. ಆದ್ದರಿಂದ ವಿದ್ಯಾರ್ಥಿಗಳು ಮತ್ತು ಮಹಿಳೆಯರಿಗೆ ತಮ್ಮಲ್ಲಿರುವ ಪ್ರತಿಭೆ ಪ್ರದರ್ಶಿಸಲು ವೇದಿಕೆ ಕಲ್ಪಿಸಿ ಉತ್ತೇಜನ ನೀಡುವ ಸಲುವಾಗಿ ಶಾಸಕ ದರ್ಶನ್ ಧ್ರುವನಾರಾಯಣ್ ಅವರು ಇದೇ ಪ್ರಥಮ ಬಾರಿಗೆ ನಂಜನಗೂಡಿನಲ್ಲಿ 9 ದಿನಗಳ ಕಾಲ ಗರಳಪುರಿ ಉತ್ಸವ ಆಯೋಜಿಸಿದ್ದಾರೆ. ಜನರು ಸಹ ಎಲ್ಲಾ ಕಾರ್ಯಕ್ರಮಗಳಲ್ಲೂ ಅತ್ಯಂತ ಉತ್ಸಾಹದಿಂದ ಭಾಗಿಯಾಗುತ್ತಿದ್ದಾರೆ ಎಂದು ಹೇಳಿದರು.

ನಟಿ ವರ್ಷ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಎಲ್ಲರಲ್ಲೂ ಕಲೆ ಅಂತರ್ಗತವಾಗಿರುತ್ತದೆ. ಪ್ರತಿಭೆ ಪ್ರದರ್ಶಿಸಲು ಶಾಸಕ ದರ್ಶನ್ ಗರಳಪುರಿ ಉತ್ಸವದ ಮೂಲಕ ಎಲ್ಲರಿಗೂ ವೇದಿಕೆ ಕಲ್ಪಿಸಿ ಸಾರ್ವಜನಿಕರನ್ನು ಸಾಂಸ್ಕೃತಿಕವಾಗಿ ಒಂದುಗೂಡಿಸುವ ಪ್ರಯತ್ನ ನಡೆಸುತ್ತಿರುವುದು ಶ್ಲಾಘನೀಯ ಎಂದರು.

ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ವಿವಿಧ ವೇಷಧಾರಿಗಳಾಗಿ ಅಭಿನಯಿಸುವ ಮೂಲಕ ತಮ್ಮ ಪ್ರತಿಭೆ ಪ್ರದರ್ಶಿಸಿ ಮೆಚ್ಚುಗೆಗೆ ಪಾತ್ರರಾದರು. ಮಹಿಳೆಯರು ಅತ್ಯಂತ ಉತ್ಸಾಹದಿಂದ ಕೇಶ ವಿನ್ಯಾಸ ಸ್ಪರ್ಧೆಯಲ್ಲಿ ಭಾಗವಹಿಸಿ ಸಂತೋಷಪಟ್ಟರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶ್ರೀಕಂಠ ನಾಯಕ, ಜಿಪಂ ಮಾಜಿ ಸದಸ್ಯರಾದ ಲತಾ, ಶಶಿರೇಖಾ, ಮುಖಂಡರಾದ ಗುರುಮಲ್ಲಪ್ಪ, ಶ್ವೇತಲಕ್ಷ್ಮಿ, ಗಾಯತ್ರಿ, ರವಿ, ನಾಗರಾಜು, ಸೇರಿದಂತೆ ಇತರರು ಇದೇ ವೇಳೆ ಹಾಜರಿದ್ದರು.

ಮನೆ ಬಾಗಿಲಿಗೆ ಗ್ಯಾಸ್ ಸಿಲಿಂಡರ್ ಸರಬರಾಜು

ಗ್ರಾಹಕರು ಕಚೇರಿಗೆ ಆಗಮಿಸದಂತೆ ಮನವಿ

ತಿ.ನರಸೀಪುರ, ಮಾ.25– ಗ್ಯಾಸ್ ಸಿಲಿಂಡರ್ ಪಡೆಯಲು ಗ್ರಾಹಕರು ಕಚೇರಿಗೆ ಆಗಮಿಸಬಾರದು. ಗ್ರಾಹಕರ ಮನೆ ಬಾಗಿಲಿಗೆ ಸಿಲಿಂಡರ್ ತಲುಪಿಸುವ ವ್ಯವಸ್ಥೆ ಮಾಡುತ್ತೇವೆ ಎಂದು ಭಾರತ್ ಗ್ಯಾಸ್ ಮಾಲೀಕರಾದ ಶಹನಾಜ್ ರಿಯಾಜ್ ತಿಳಿಸಿದ್ದಾರೆ.

ಗ್ಯಾಸ್ ಸಿಲಿಂಡರ್ ಪಡೆಯಲು ನಿತ್ಯ ಗ್ಯಾಸ್ ಏಜೆನ್ಸಿ ಎದುರು ನೂರಾರು ಗ್ರಾಹಕರು ಜಮಾವಣೆಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಗ್ಯಾಸ್ ಸಿಲಿಂಡರ್ ಸರಬರಾಜಿನಲ್ಲಿ ಯಾವುದೇ ವ್ಯತ್ಯಯವಾಗಿಲ್ಲ. ಬದಲಿಗೆ ಹೆಚ್ಚಿನ ಪ್ರಮಾಣದಲ್ಲಿ ಸಿಲಿಂಡರ್ ಸರಬರಾಜಾಗುತ್ತಿದ್ದು, ಯಾರೂ ತಮಗೆ ಸಿಲಿಂಡರ್ ಸಿಗುವುದಿಲ್ಲ ಎಂಬ ಗೊಂದಲಕ್ಕೆ ಒಳಗಾಗದೇ ಮೊಬೈಲ್ ಮೂಲಕ ಸಿಲಿಂಡರ್ ಬುಕ್ ಮಾಡಿ ಮನೆಯಲ್ಲಿ ಆರಾಮವಾಗಿದ್ದಲ್ಲಿ ನಮ್ಮ ಏಜೆನ್ಸಿಯ ಹುಡುಗರು ನಿಮ್ಮ ಮನೆ ಬಾಗಿಲಿಗೆ ಸಿಲಿಂಡರ್ ತಲುಪಿಸುವ ಕೆಲಸ ಮಾಡುತ್ತಾರೆ. ಗ್ರಾಮೀಣ ಜನತೆ, ಕೆಲಸ ಕಾರ್ಯಗಳನ್ನು ಬಿಟ್ಟು ಏಜೆನ್ಸಿ ಎದುರು ಸಾಲಿನಲ್ಲಿ ನಿಲ್ಲುವುದರಿಂದ ಅನೇಕ ಸಮಸ್ಯೆ ಎದುರಾಗಲಿವೆ. ಈ ಸಂದರ್ಭ ಗ್ರಾಹಕರಿಗೆ ತೊಂದರೆಯಾದರೆ ಇನ್ಸೂರೆನ್ಸ್ ಕೂಡ ಕ್ಲೇಮ್ ಆಗುವುದಿಲ್ಲ. ಹಾಗಾಗಿ ಸಾಮಾಜಿಕ ಜಾಲತಾಣದಲ್ಲಿ ಬಿತ್ತರವಾಗುತ್ತಿರುವ ಸುದ್ದಿಗಳಿಗೆ ಪ್ರಾಮುಖ್ಯತೆ ನೀಡಬೇಡಿ. ಈ ಹಿಂದಿಗಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಗ್ಯಾಸ್ ಸಿಲಿಂಡರ್ ನಮ್ಮ ಏಜೆನ್ಸಿಗೆ ಸರಬರಾಜಾಗುತ್ತಿದ್ದು, ಯಾರೂ ಆತಂಕ ಪಡಬೇಕಿಲ್ಲ. ಈ ಹಿಂದೆ ಹೇಗೆ ಮನೆ ಬಾಗಿಲಿಗೆ ಸಿಲಿಂಡರ್ ಸರಬರಾಜಾಗುತ್ತಿತ್ತೋ ಅದೇ ರೀತಿ ಸರಬರಾಜು ಮಾಡಲಾಗುತ್ತದೆ. ಒಂದೆರಡು ದಿನ ತಡವಾಗಬಹುದು ಆದರೆ ಸಿಲಿಂಡರ್ ಸರಬರಾಜಿನಲ್ಲಿ ಯಾವುದೇ ಕೊರತೆ ಉಂಟಾಗಿಲ್ಲ ಎಂದರು.

ಕಾಳಸಂತೆಯಲ್ಲಿ ಸಿಲಿಂಡರ್ ಮಾರಾಟ: ಸಿಲಿಂಡರ್ ಸರಬರಾಜಿನಲ್ಲಿ ಯಾವುದೇ ಸಮಸ್ಯೆ ಎದುರಾಗದಿದ್ದರೂ, ಗ್ರಾಹಕರು ಈಗ ಸಿಲಿಂಡರ್ ಕೊಳ್ಳಲು ಮುಗಿ ಬೀಳುತ್ತಿರುವುದರಿಂದ ಕೃತಕ ಅಭಾವ ಸೃಷ್ಟಿಯಾಗಿದೆ. ಸಾಮಾಜಿಕ ಜಾಲತಾಣದಲ್ಲಿ ಸಿಲಿಂಡರ್ ಕೊರತೆ ಬಗ್ಗೆ ಮಾಹಿತಿ ಪಡೆದ ಗ್ರಾಹಕರು ಇದನ್ನೇ ಬಂಡವಾಳ ಮಾಡಿಕೊಂಡು ಸಿಲಿಂಡರ್ ಪಡೆದು ಹೆಚ್ಚಿನ ಹಣಕ್ಕೆ ಮಾರಾಟ ಮಾಡುತ್ತಿರುವುದು ಕಂಡು ಬಂದಿದೆ. ವರ್ಷಕ್ಕೆ ಒಂದೇ ಒಂದು ಸಿಲಿಂಡರ್ ಖರೀದಿ ಮಾಡದ ಗ್ರಾಹಕರು ಈಗ ಗ್ಯಾಸ್ ಏಜೆನ್ಸಿ ಮುಂದೆ ಕ್ಯೂ ನಿಲ್ಲುತ್ತಿರುವುದೇ ಕಾಳಸಂತೆಯಲ್ಲಿ ಸಿಲಿಂಡರ್ ಮಾರಾಟವಾಗುತ್ತಿದೆ ಎಂಬುದಕ್ಕೆ ಸಾಕ್ಷಿಯಾಗಿದೆ. ಗೃಹ ಬಳಕೆ ಸಿಲಿಂಡರ್ ಪಡೆ ಯುವ ಗ್ರಾಹಕರು 2000 ರೂ.ಗೆ ಹೋಟೆಲ್‌ಗಳಿಗೆ ಮಾರಾಟ ಮಾಡಿಕೊಳ್ಳುತ್ತಿರುವುದು ಕಂಡು ಬಂದಿದ್ದು, ಹೋಟೆಲ್ ಮತ್ತಿತರ ವಾಣಿಜ್ಯ ಉದ್ದೇಶಕ್ಕೆ ಬಳಸಲು ಗ್ರಾಹಕರಿಂದ ಪಡೆದು ಗ್ಯಾಸ್ ಅನ್ನು ವಾಣಿಜ್ಯ ಸಿಲಿಂಡರ್‌ಗೆ ತುಂಬಿಸಿಕೊಳ್ಳುತ್ತಿರುವ ಬಗ್ಗೆ ದೂರುಗಳು ಕೇಳಿ ಬಂದಿದ್ದು, ಈ ಬಗ್ಗೆ ಆಹಾರ ಮತ್ತು ವಾಣಿಜ್ಯ ಇಲಾಖೆ ಅಧಿಕಾರಿಗಳು ಪರಿಶೀಲಿಸಿ ಕಡಿವಾಣ ಹಾಕಬೇಕಾಗಿದೆ ಎಂದರು.

ಶುಕ್ರವಾರದಿಂದ ಏಜೆನ್ಸಿಯಲ್ಲಿ ಸಿಲಿಂಡರ್ ಕೊಡುವುದಿಲ್ಲ



ಅಮೆರಿಕಾ–ಇರಾನ್ ಯುದ್ದದಿಂದಾಗಿ ವಾಣಿಜ್ಯೋದ್ಯಮ ಗ್ಯಾಸ್ ಸಿಲಿಂಡರ್ ಕೊರತೆ ಉಂಟಾಗಿದೆ. ಆದರೆ ಗೃಹಬಳಕೆ ಸಿಲಿಂಡರ್ ಸರಬರಾಜಿಗೆ ಯಾವುದೇ ತೊಂದರೆ ಉಂಟಾಗಿಲ್ಲ. ಎಂದಿನಂತೆ ಮನೆ ಬಾಗಿಲಿಗೆ ಸಿಲಿಂಡರ್ ಸರಬರಾಜಾಗಲಿದ್ದು, ಶುಕ್ರವಾರದಿಂದ ಯಾವ ಗ್ರಾಹಕರೂ ಏಜೆನ್ಸಿ ಮುಂದೆ ಸಿಲಿಂಡರ್‌ಗಾಗಿ ಬರಬೇಡಿ. ಬಂದರೂ ಸಿಲಿಂಡರ್ ಸಿಗುವುದಿಲ್ಲ. ಬೇಕಾದರೆ ಸಿಲಿಂಡರ್ ಮನೆ ಬಾಗಿಲಿಗೆ ಬಂದು ತಲುಪಲಿದೆ.

– ಶಹನಾಜ್ ರಿಯಾಜ್, ಭಾರತ್ ಗ್ಯಾಸ್ ಮಾಲೀಕರು.

ದಾಸನಪುರ ಗ್ರಾಮಕ್ಕೆ ವರ್ಷ ಹರೀಶ್‌ಗೌಡ ಭೇಟಿ

ಹಾನಿಗೊಳಗಾದ ಮನೆಗಳಿಗೆ ಸೂಕ್ತ ಪರಿಹಾರ ನೀಡಲು ಅಗತ್ಯ ಕ್ರಮ



ದಾಸನಪುರಕ್ಕೆ ಶಾಸಕ ಜಿ.ಡಿ.ಹರೀಶ್‌ಗೌಡರ ಪತ್ನಿ ವರ್ಷ ಹರೀಶ್‌ಗೌಡ ಭೇಟಿ ನೀಡಿ ಪರಿಶೀಲಿಸಿದರು.

ಹುಣಸೂರು, ಮಾ.25– ಭಾರೀ ಗಾಳಿ ಮಳೆಯಿಂದ ಹಾನಿಗೊಳಗಾದ ಮನೆಗಳಿಗೆ ಸೂಕ್ತ ಪರಿಹಾರ ನೀಡಲು ಅಗತ್ಯ ಕ್ರಮ ಕೈಗೊಳ್ಳುವಂತೆ ಶಾಸಕರು ಸೂಚಿಸಿದ್ದಾರೆ ಎಂದು ಶಾಸಕ ಜಿ.ಡಿ.ಹರೀಶ್‌ಗೌಡರ ಪತ್ನಿ ವರ್ಷ ಹರೀಶ್‌ಗೌಡ ತಿಳಿಸಿದರು.

ತಾಲೂಕಿನ ದಾಸನಪುರ ಗ್ರಾಮಕ್ಕೆ ಭೇಟಿ ನೀಡಿ ಪರಿಶೀಲಿಸಿ, ನಿರಾಶ್ರಿತರಿಗೆ ವೈಯಕ್ತಿಕ ಪರಿಹಾರ ನೀಡಿ ಮಾತನಾಡಿದ ಅವರು, ಮಳೆ ಹಾನಿ ಹಾಗೂ ಪರಿಹಾರ ಕ್ರಮಗಳ ಕುರಿತು ಶಾಸಕ ಜಿ.ಡಿ.ಹರೀಶ್‌ಗೌಡರು ತಾಲೂಕು ಮಟ್ಟದ ಅಧಿಕಾರಿಗಳ ಸಭೆ ನಡೆಸಿದ್ದಾರೆ. ಹೀಗಾಗಿ ಅಧಿಕಾರಿಗಳು ಮನೆ ಹಾನಿಗೊಳಗಾದವರಿಗೆ ಪರಿಹಾರ ಹಾಗೂ ವಿವಿಧ ವಸತಿ ಯೋಜನೆಗಳಡಿ ಮನೆ ಒದಗಿಸಲು ಕ್ರಮ ಕೈಗೊಳ್ಳಬೇಕು. ಬೆಳೆ ಹಾನಿ ಬಗ್ಗೆ ಜಂಟಿ ಸಮೀಕ್ಷೆ ಕಾರ್ಯ ನಡೆಯುತ್ತಿದ್ದು, ಆದಷ್ಟು ಬೇಗ ಈ ಸಮೀಕ್ಷೆ ಪೂರ್ಣಗೊಳಿಸಬೇಕು ಎಂದರು.

ಮಳೆಗೆ ಸಂಬಂಧಿಸಿದಂತೆ ಇಲ್ಲಿವರೆಗೆ ಪರಿಹಾರ ವಿತರಿಸಲಾಗಿದ್ದು, ಒಟ್ಟು 22 ಮನೆಗಳನ್ನು ನೀಡಲಾಗಿದೆ. ಸಂಪೂರ್ಣ ಹಾನಿಯಾದ ಮನೆ ಹಾಗೂ ಭಾಗಶಃ ಹಾನಿಯಾದ ಮನೆಗಳಿಗೆ ಪರಿಹಾರ ನೀಡಲಾಗುವುದು ಎಂದರು.

ಈ ವೇಳೆ ಜೆಡಿಎಸ್ ತಾಲೂಕು ಅಧ್ಯಕ್ಷ ಎಂ.ಬಿ.ಸುರೇಂದ್ರ, ಎಪಿಎಂಸಿ ಮಾಜಿ ಅಧ್ಯಕ್ಷ ಸುಭಾಷ್, ಬಸವರಾಜ್, ಗ್ರಾಪಂ ಮಾಜಿ ಅಧ್ಯಕ್ಷ ದಾ.ರಾ.ಮಹೇಶ್, ಬೀರಪ್ಪ, ಗ್ರಾಮ ಲೆಕ್ಕಿಗ ಕುಮಾರ್, ಹರೀಶ್ ಸೇರಿದಂತೆ ಅನೇಕರಿದ್ದರು.

ವಿಶೇಷ ಗ್ರಾಮ ಸಭೆಗಳಿಂದ ಮಹಿಳೆಯರ ನೋವು, ನಲಿವಿಗೆ ಸ್ಪಂದನೆ

ಸಾಲಿಗ್ರಾಮ ತಾಪಂ ಇಓ ಎ.ಎನ್.ರವಿ



ಮಹಿಳಾ ಗ್ರಾಮಸಭೆಯಲ್ಲಿ ಸಾಧಕ ಮಹಿಳೆಯರನ್ನು ಅಭಿನಂದಿಸಲಾಯಿತು.

ಭೇರ್ಯ, ಮಾ.25– ಗ್ರಾಪಂ ಮಟ್ಟದಲ್ಲಿ ನಡೆಯುವ ಮಹಿಳಾ ವಿಶೇಷ ಗ್ರಾಮ ಸಭೆಗಳು ಮಹಿಳೆಯರ ನೋವು, ನಲಿವಿಗೆ ಸ್ಪಂದಿಸಲಿವೆ ಹಾಗೂ ಕಿಶೋರಿಯರು ತಮ್ಮ ಸಮಸ್ಯೆಗಳನ್ನು ಮನಸಾರೆ ಬಿಚ್ಚಿಟ್ಟು ಪರಿಹಾರ ಕಂಡುಕೊಳ್ಳಲು ಗ್ರಾಮ ಸಭೆಗಳು ವೇದಿಕೆಯಾಗಲಿವೆ ಎಂದು ಸಾಲಿಗ್ರಾಮ ತಾಪಂ ಇಓ ಎ.ಎನ್.ರವಿ ತಿಳಿಸಿದರು.

ಭೇರ್ಯ ಗ್ರಾಪಂ ವತಿಯಿಂದ ಕೆ.ಪಿ.ಕಲ್ಯಾಣ ಮಂಟಪದಲ್ಲಿ ಹಮ್ಮಿಕೊಂಡಿದ್ದ ಮಹಿಳಾ ಗ್ರಾಮಸಭೆ ಹಾಗೂ ಸಾಧಕ ಮಹಿಳೆಯರಿಗೆ ಅಭಿನಂದನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಗ್ರಾಪಂಗಳಲ್ಲಿ ನಡೆಸಲಾಗುತ್ತಿರುವ ಸಾಮಾನ್ಯ ಗ್ರಾಮ ಸಭೆಗಳ ಮಾದರಿ ಮಹಿಳೆಯರಿಗೆ ಪ್ರತ್ಯೇಕವಾಗಿ ವಿಶೇಷ ಗ್ರಾಮ ಸಭೆಗಳನ್ನು ನಡೆಸಲು ಯೋಜಿಸಲಾಗಿದೆ. ಸರ್ಕಾರದಿಂದ ಬಿಡುಗಡೆಯಾಗುವ ಸೌಲಭ್ಯಗಳನ್ನು ಮಹಿಳೆಯರಿಗೆ ತಲುಪಿಸಲು ಅಭಿವೃದ್ಧಿ ಇಲಾಖೆಗಳ ಯೋಜನೆಗಳಿಗೆ ಮಹಿಳಾ ಫಲಾನುಭವಿಗಳನ್ನು ಆಯ್ಕೆ ಮಾಡಲು ವಿಶೇಷ ಗ್ರಾಮ ಸಭೆಗಳನ್ನು ನಡೆಸುವಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಆದೇಶ ಹೊರಡಿಸಿದೆ. ಪ್ರಸಕ್ತ ವರ್ಷದಿಂದಲೇ ಈ ವಿಶೇಷ ಗ್ರಾಮ ಸಭೆಗಳನ್ನು ನಡೆಸಲು ಕ್ರಮ ಕೈಗೊಳ್ಳುವಂತೆ ಸೂಚಿಸಿದ ಹಿನ್ನೆಲೆಯಲ್ಲಿ ಮಹಿಳಾ ಗ್ರಾಮ ಸಭೆ ಆಯೋಜಿಸಲಾಗಿದೆ ಎಂದರು.

ಭೇರ್ಯ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ಸೌಜನ್ಯ ಮಾತನಾಡಿ, ಭ್ರೂಣ ಹತ್ಯೆ ತಡೆಗಟ್ಟಲು ಮಹಿಳೆಯರು ಸಹಕಾರ ನೀಡಬೇಕು. ಪ್ರಸ್ತುತ ಹೆಣ್ಣು ಮಗುವಿನ ಜನನ ಕಡಿಮೆಯಾಗುತ್ತಿರುವ ಹಿನ್ನೆಲೆಯಲ್ಲಿ ಆರೋಗ್ಯ ಇಲಾಖೆ ಸಮೀಕ್ಷೆ ನಡೆಸಿದಾಗ ಭ್ರೂಣ ಹತ್ಯೆ ಕಾರಣವಾಗಿದೆ ಎಂಬ ವರದಿ ಇದೆ. ಆದಷ್ಟು ಭ್ರೂಣ ಹತ್ಯೆ ಆಗದಂತೆ ಎಚ್ಚರಿಕೆ ವಹಿಸುವ ಜೊತೆಗೆ ಹೆಣ್ಣು ಮಗುವಿನ ಕೊರತೆ ಉಂಟಾಗದಂತೆ ಜವಾಬ್ದಾರಿಯುತವಾಗಿ ಕಾರ್ಯ ನಿರ್ವಹಿಸೋಣ ಎಂದರು.

ವಕೀಲೆ ಪೂರ್ಣಿಮಾ ಮಾತನಾಡಿದರು. ಪಿಡಿಓ ಮಮತಾ ಮತ್ತು ಲೆಕ್ಕ ಪರಿಶೋಧಕಿ ಅಶ್ವಿನಿ ಅವರು ಮಹಿಳಾ ದಿನಾಚರಣೆ ಅಂಗವಾಗಿ ಸಾಧಕ ಮಹಿಳೆಯರಾದ ಜಿಲ್ಲಾ ಪತ್ರಕರ್ತರ ಸಂಘದ ನಿರ್ದೇಶಕಿ ರೋಜಾ ಮಹೇಶ್, ದೈಹಿಕ ಶಿಕ್ಷಕಿ ಪುಷ್ಪಲತಾ, ಹಿರಿಯ ಆರೋಗ್ಯ ಶುಶ್ರೂಷಕಿ ಡಿಸೋಜ, ಅಂಗನವಾಡಿ ಕಾರ್ಯಕರ್ತೆ ಹಸೀನಾ ಬೇಗಂ, ಆಶಾ ಕಾರ್ಯಕರ್ತೆ ಆಶಾ ಅವರನ್ನು ಸನ್ಮಾನಿಸಿದರು.

ಈ ವೇಳೆ ಗ್ರಾಪಂ ಬಿಲ್ ಕಲೆಕ್ಟರ್ ಕುಮಾರ್, ಆರೋಗ್ಯ ಸಹಾಯಕಿ ಹೇಮಲತಾ, ಸಂಜೀವಿನಿ ಯೋಜನೆ ಮೇಲ್ವಿಚಾರಕಿ ರೇಷ್ಮಾ ಬೇಗಂ, ಡಿಇಓ ಜಯಂತ್, ಗ್ರಾಪಂ ಮಾಜಿ ಅಧ್ಯಕ್ಷೆ ಜಯಲಕ್ಷ್ಮಿ, ಮಾಜಿ ಉಪಾಧ್ಯಕ್ಷೆ ರೂಪ, ಸಿಬ್ಬಂದಿ ಯೋಗೇಶ್, ರಮೇಶ್, ಸ್ವಾಮೀಗೌಡ, ಚೆನ್ನರಾಜ್, ಮಹದೇವ, ಹರೀಶ, ಪೌರಕಾರ್ಮಿಕ ಚೆನ್ನ, ಸ್ವಚ್ಛತಾ ವಾಹನದ ಚಾಲಕಿ ದಿವ್ಯಾ ಸೇರಿದಂತೆ ನೂರಾರು ಮಹಿಳೆಯರು ಇದ್ದರು.

ಮಹಿಳೆಯರಿಗಾಗಿ ವೃತ್ತಿಪರ ಕೌಶಲ್ಯ ತರಬೇತಿ

ನಂಜನಗೂಡು, ಮಾ.25– ಮಹಿಳೆಯರನ್ನು ಆರ್ಥಿಕವಾಗಿ ಸಬಲೀಕರಣಗೊಳಿಸುವ ಸಲುವಾಗಿ ಕೇಂದ್ರ ಸರ್ಕಾರ ಮಹಿಳೆಯರಿಗೆ ವೃತ್ತಿಪರ ಕೌಶಲ್ಯ ತರಬೇತಿ ನೀಡಿ ಉಚಿತವಾಗಿ ಹೊಲಿಗೆ ಯಂತ್ರ ವಿತರಿಸುತ್ತಿದ್ದು, ಮಹಿಳೆಯರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ತಾಲೂಕು ನಾಯಕರ ಸಂಘದ ಅಧ್ಯಕ್ಷ ನಾಗರಾಜು ತಿಳಿಸಿದರು.

ನಗರದ ಗೌರಿಘಟ್ಟ ಬೀದಿಯಲ್ಲಿರುವ ತಾಲೂಕು ನಾಯಕರ ಸಮುದಾಯ ಭವನದಲ್ಲಿ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಮತ್ತು ಗಂಗಾ ಚಾರಿಟಬಲ್ ಟ್ರಸ್ಟ್ ವತಿಯಿಂದ ನಡೆದ ಉಚಿತ ಹೊಲಿಗೆ ತರಬೇತಿ ಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿ ಹೊಲಿಗೆ ಯಂತ್ರ ವಿತರಿಸಿ ಮಾತನಾಡಿದ ಅವರು, ಕೇಂದ್ರ ಸರ್ಕಾರ ಮಹಿಳಾ ಸಬಲೀಕರಣಕ್ಕಾಗಿ ವೃತ್ತಿಪರ ಕೌಶಲ್ಯ ತರಬೇತಿಗಳನ್ನು ನೀಡಿ, ಮಹಿಳೆಯರು ಮತ್ತು ಗ್ರಾಮೀಣ ಆರ್ಥಿಕತೆ ಸಶಕ್ತಗೊಳಿಸುವ ದೃಷ್ಟಿಕೋನದಿಂದ ಖಾದಿ ಮತ್ತು ಗ್ರಾಮೋದ್ಯೋಗ ಕೈಗಾರಿಕಾ ಮಂಡಳಿ ಮೂಲಕ ಉಚಿತವಾಗಿ ತರಬೇತಿಗಳನ್ನು ನೀಡುತ್ತಿದೆ. ಜೊತೆಗೆ ಗ್ರಾಮ ವಿಕಾಸ ಯೋಜನೆಯಡಿ ಹೊಲಿಗೆ ಯಂತ್ರಗಳನ್ನು ಉಚಿತವಾಗಿ ವಿತರಿಸಲಾಗುತ್ತಿದೆ ಎಂದರು.

ಗಂಗಾ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ರಾಜ್ ಕಾಮಯ್ಯ ಮಾತನಾಡಿ, 40 ಮಹಿಳೆಯರಿಗೆ ಉಚಿತ ಹೊಲಿಗೆ ತರಬೇತಿ ನೀಡಿ ಹೊಲಿಗೆ ಯಂತ್ರ ವಿತರಿಸಲಾಗಿದೆ ಎಂದರು.

ಈ ವೇಳೆ ಹನುಮಂತ ನಾಯಕ, ಶ್ರೀಮಲೆ ಮಹದೇಶ್ವರ ವಿಕಾಸ ಸಂಜೀವಿನಿ ಮಹಿಳಾ ಸ್ವ ಸಹಾಯ ಸಂಘದ ಅಧ್ಯಕ್ಷೆ ಭಾಗ್ಯಮ್ಮ, ನವ್ಯ ಇತರರಿದ್ದರು.



ಉಚಿತ ಹೊಲಿಗೆ ತರಬೇತಿ ಸಮಾರೋಪ ಸಮಾರಂಭ ನಡೆಯಿತು.

ಮುಂದಿನ ದಿನಗಳಲ್ಲಿ ಶಾಲೆ ಪ್ರಗತಿ ಸಾಧಿಸಲಿದೆ

ತಾಪಂ ಮಾಜಿ ಅಧ್ಯಕ್ಷ ಎಂ.ರಮೇಶ್



ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ತಾಪಂ ಮಾಜಿ ಅಧ್ಯಕ್ಷ ಎಂ.ರಮೇಶ್ ಮಾತನಾಡಿದರು.

ತಿ.ನರಸೀಪುರ, ಮಾ.25– ಕನಕ ಗ್ರಾಮೀಣ ಶಿಕ್ಷಣ ಸಂಸ್ಥೆ ಅಭಿವೃದ್ಧಿಗೊಳಿಸುವ ನಿಟ್ಟಿನಲ್ಲಿ ಸಂಸ್ಥೆಗೆ ಸೂಕ್ತ ಜಾಗ ನೀಡಿ ಅನುದಾನ ಕೊಡಿಸುವ ಭರವಸೆಯನ್ನು ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ನೀಡಿದ್ದು, ಮುಂದಿನ ದಿನಗಳಲ್ಲಿ ಈ ಶಾಲೆ ಪ್ರಗತಿ ಕಾಣುವ ವಿಶ್ವಾಸವಿದೆ ಎಂದು ತಾಪಂ ಮಾಜಿ ಅಧ್ಯಕ್ಷ ಎಂ.ರಮೇಶ್ ತಿಳಿಸಿದರು.

ಪಟ್ಟಣದ ಕನಕ ವಿದ್ಯಾಸಂಸ್ಥೆಯಲ್ಲಿ ನಡೆದ ವಾರ್ಷಿಕೋತ್ಸವದಲ್ಲಿ ಮಾತನಾಡಿದ ಅವರು, ತಾಲೂಕು ಕುರುಬರ ಸಂಘದಿಂದ ಕನಕ ಭವನ ನಿರ್ಮಾಣಕ್ಕೆ ಸಂಬಂಧಿಸಿದ ಚರ್ಚೆಗಳು ನಡೆಯುತ್ತಿದ್ದ ವೇಳೆ ಸಂಘ ಹಾಗೂ ಶಿಕ್ಷಣ ಸಂಸ್ಥೆ ನಡುವೆ ಗೊಂದಲ ಮೂಡಿತ್ತು. ಆ ವೇಳೆ ಡಾ.ಯತೀಂದ್ರ ಅವರು ಭರವಸೆ ನೀಡಿ ಶಿಕ್ಷಣ ಸಂಸ್ಥೆಗೆ ಬದಲಿ ಜಾಗ ನೀಡಿ ಅಲ್ಲಿ ಕಟ್ಟಡ ನಿರ್ಮಿಸುವುದಕ್ಕೂ ಸಹಾಯ ಮಾಡುತ್ತೇವೆ ಎಂದಿದ್ದರು. ನಾನು ಈ 2 ಸಂಸ್ಥೆಗೆ ಸೇತುವೆಯಾಗಿ ನಮ್ಮ ಕನಕ ವಿದ್ಯಾಸಂಸ್ಥೆ ಬಡವರಿಗೆ ಶಿಕ್ಷಣ ಕೊಡುವುದಕ್ಕೆ ಉದಯವಾಗಬೇಕು ಅನ್ನುವುದು ನಮ್ಮ ಅಭಿಲಾಷೆ. ಈ ಹಿನ್ನೆಲೆಯಲ್ಲಿ ನಮ್ಮ ನಾಯಕ ಡಾ.ಯತೀಂದ್ರ ಅವರು ಈ ಬಗ್ಗೆ ಹೆಚ್ಚಿನ ಗಮನಹರಿಸಿ ಸ್ಥಳ ಹಾಗೂ ಅನುದಾನ ದೊರಕಿಸಿದಲ್ಲಿ ಗುಣಮಟ್ಟದ ಶಿಕ್ಷಣ ನೀಡುವ ಶಾಲೆಯಾಗಿ ಅಭಿವೃದ್ಧಿ ಪಡಿಸಬಹುದು ಎಂದರು.

ಕನಕ ರೈಸ್‌ಮಿಲ್ ಮಾಲೀಕ ಬಿ.ಎನ್.ಸುರೇಶ್ ಕುಮಾರ್, ಸಂಘದ ಕಾರ್ಯದರ್ಶಿ ಲಿಂಗಪ್ಪ, ಭತ್ತದ ವ್ಯಾಪಾರಿ ಚೌಹಳ್ಳಿ ಗುರು ಮಲ್ಲೇಗೌಡ, ಬೆನಕನಹಳ್ಳಿ ಶಿವಸ್ವಾಮಿ, ವಿದ್ಯಾರ್ಥಿಗಳು ಶಾಲಾ ಶಿಕ್ಷಕರು ಪೋಷಕರು ಗ್ರಾಮೀಣ ಸಂಸ್ಥೆ ನಿರ್ದೇಶಕರು ಭಾಗವಹಿಸಿದ್ದರು.

'ಓಡೋಣ ಹುಣಸೂರಿಗಾಗಿ–ಒಂದಾಗೋಣ ಸ್ವಚ್ಛತೆಗಾಗಿ' ಮ್ಯಾರಥಾನ್

ಸ್ವಚ್ಛತೆಯ ಪಣತೊಟ್ಟ ನೂರಾರು ಯುವಕರು, ಸಾರ್ವಜನಿಕರು



ಮ್ಯಾರಥಾನ್ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ಹುಣಸೂರು, ಮಾ.25– ನಗರದಲ್ಲಿ ಸ್ವಚ್ಛ ಸರ್ವೇಕ್ಷಣ್ ಅಭಿಯಾನದಡಿ ನಗರಸಭೆ ಹಮ್ಮಿಕೊಂಡಿದ್ದ 'ಓಡೋಣ ಹುಣಸೂರಿಗಾಗಿ–ಒಂದಾಗೋಣ ಸ್ವಚ್ಛತೆಗಾಗಿ' ಮ್ಯಾರಥಾನ್‌ನಲ್ಲಿ ಶ್ವೇತವರ್ಣದ ಟೀ ಶರ್ಟ್, ಹಸಿರು ಕ್ಯಾಪ್ ಧರಿಸಿದ್ದ ನೂರಾರು ಯುವಜನರು ಮತ್ತು ಸಾರ್ವಜನಿಕರು ಭಾಗಿಯಾಗಿ ಸ್ವಚ್ಛತೆಯ ಪಣ ತೊಟ್ಟರು.

ನಗರಸಭೆಯು 2025–26ನೇ ಸಾಲಿನ ಸ್ವಚ್ಛ ಸರ್ವೇಕ್ಷಣ್ ಅಭಿಯಾನದಡಿ ವಿವಿಧ ಸಂಘ–ಸಂಸ್ಥೆಗಳ ಸಹಯೋಗದಲ್ಲಿ ಆಯೋಜಿಸಿದ್ದ ಮ್ಯಾರಥಾನ್‌ನಲ್ಲಿ ಸಾರ್ವಜನಿಕರು, ಕಾಲೇಜು ವಿದ್ಯಾರ್ಥಿಗಳು ಸೇರಿದಂತೆ 500ಕ್ಕೂ ಹೆಚ್ಚು ಮಂದಿ ಭಾಗಿಯಾಗಿದ್ದರು.

ನಗರದ ಸಂವಿಧಾನ ಸರ್ಕಲ್‌ನಲ್ಲಿ ಮ್ಯಾರಥಾನ್‌ಗೆ ಉಪವಿಭಾಗಾಧಿಕಾರಿ ಕೆ.ವಿ.ಕಾವ್ಯರಾಣಿ, ಡಿವೈಎಸ್ಪಿ ರವಿ, ನಗರಸಭೆ ಬ್ರಾಂಡ್ ಅಂಬಾಸಿಡರ್ ಡಾ.ಸರೋಜಿನಿ ವಿಕ್ರಂ, ಪೌರಾಯುಕ್ತೆ ಎಂ.ಮಾನಸ ಸೇರಿದಂತೆ ಅನೇಕ ಗಣ್ಯರು ಹಸಿರು ನಿಶಾನೆ ತೋರುವ ಮೂಲಕ ಚಾಲನೆ ನೀಡಿದರು.

ಸಂವಿಧಾನ ಸರ್ಕಲ್‌ನಿಂದ ಹೊರಟ ಮ್ಯಾರಥಾನ್ ಓಟ ಅಕ್ಷಯ ಭಂಡಾರ್, ಬಜಾರ್ ರಸ್ತೆ, ವಿಶ್ವೇಶ್ವರಯ್ಯ ವೃತ್ತ, ರತ್ನಪುರಿ ರಸ್ತೆ ಮೂಲಕ ಚಿಕ್ಕಹುಣಸೂರು ತಲುಪಿ ಅಲ್ಲಿಂದ ಹೆಚ್.ಡಿ.ಕೋಟೆ ರಸ್ತೆ, ಎಸ್.ಜೆ.ರಸ್ತೆ ಮೂಲಕ 4 ಕಿಮೀ ಸಾಗಿ ಸಂವಿಧಾನ ವೃತ್ತದಲ್ಲಿ ಅಂತ್ಯಗೊಂಡಿತು. ಈ ವೇಳೆ ಪ್ರತಿಯೊಬ್ಬ ಓಟಗಾರರು ಗುರಿ ಮುಟ್ಟುತ್ತಿದ್ದಂತೆ ನೆರೆದಿದ್ದ ನಾಗರಿಕರು ಪ್ರೋತ್ಸಾಹದ ಚಪ್ಪಾಳೆ ತಟ್ಟಿದರೆ, ಗಣ್ಯರು, ಅಧಿಕಾರಿಗಳು ಪದಕ ಹಾಕಿ, ಹಣ್ಣು ಜ್ಯೂಸ್ ನೀಡಿ ಶುಭ ಹಾರೈಸಿದರು.

ಮ್ಯಾರಥಾನ್ ವಿಜೇತರು: ಸರಗೂರು ತಾಲೂಕಿನ ಕಳಸೂರಿನ ಶ್ರೀಧರ್ 12.08 ನಿಮಿಷಕ್ಕೆ ಮ್ಯಾರಥಾನ್ ಪೂರ್ಣಗೊಳಿಸಿ ಪ್ರಥಮ ಸ್ಥಾನ ಪಡೆದರೆ, ಕುಶಾಲನಗರದ ನಿತಿನ್ ದ್ವಿತೀಯ 12.45 ನಿಮಿಷ, ಪಿರಿಯಾಪಟ್ಟಣದ ಪ್ರಸನ್ನ ಕುಮಾರ್ 13.10 ನಿಮಿಷದೊಂದಿಗೆ ತೃತೀಯ ಸ್ಥಾನಕ್ಕೆ ಭಾಜನರಾದರು.

ಮಹಿಳೆಯರ ವಿಭಾಗದಲ್ಲಿ ಪಿರಿಯಾಪಟ್ಟಣದ ರಾಮನಾಥತುಂಗದ ರಾಣಿ ಪ್ರಥಮ, ಹುಣಸೂರು ಸರ್ಕಾರಿ ಮಹಿಳಾ ಕಾಲೇಜಿನ ವಿದ್ಯಾರ್ಥಿನಿ ಅನಿತಾ ದ್ವಿತೀಯ, ಹುಣಸೂರಿನ ಅಂಕಿತಾ ಬಾಯಿ ತೃತೀಯ ಸ್ಥಾನ ಪಡೆದರು. ವಿಜೇತರಿಗೆ ನಗದು ಬಹುಮಾನದೊಂದಿಗೆ ಟ್ರೋಫಿ ವಿತರಿಸಲಾಯಿತು.

ನಗರಸಭೆ ಬ್ರಾಂಡ್ ಅಂಬಾಸಿಡರ್ ಡಾ.ಸರೋಜಿನಿ ವಿಕ್ರಂ ಮಾತನಾಡಿ, ರಸ್ತೆ, ಚರಂಡಿ ಸ್ವಚ್ಛಗೊಳಿಸಿದರೇ ಸಾಲದು. ಜೀವನದಿ ಲಕ್ಷ್ಮಣತೀರ್ಥ ಮಲೀನಗೊಂಡಿದೆ. ನದಿ ಸಂರಕ್ಷಣೆ ಮತ್ತು ಶುದ್ದೀಕರಣಕ್ಕೆ ಆದ್ಯತೆ ನೀಡಬೇಕು ಎಂದರು.

ಡಿವೈಎಸ್ಪಿ ರವಿ ಮಾತನಾಡಿ, ನಮ್ಮೂರಿನ ಸ್ವಚ್ಛತೆ ಮಾಡುವುದು ನಮ್ಮ ಸಂಸ್ಕಾರವಾಗಬೇಕು. ಮ್ಯಾರಥಾನ್ ಮೂಲಕ ಸ್ವಚ್ಛತೆಯ ಅರಿವು ಮೂಡಿಸುವ ಕಾರ್ಯ ಶ್ಲಾಘನೀಯ ಎಂದರು.

ಪೌರಾಯುಕ್ತೆ ಕೆ.ಮಾನಸ ಮಾತನಾಡಿ, ನಗರದ ಸ್ವಚ್ಛತೆಗೆ ನಾಗರಿಕರು, ಸಂಘ–ಸಂಸ್ಥೆಗಳ ಸಹಕಾರ ಅಗತ್ಯ. ಪೌರ ಕಾರ್ಮಿಕರು ಹುಣಸೂರನ್ನು ಸ್ವಚ್ಛಗೊಳಿಸಲು ಪ್ರತಿ ನಿತ್ಯವೂ ಬದ್ಧತೆಯಿಂದ ಕಾರ್ಯ ನಿರ್ವಹಿಸುತ್ತಿದ್ದಾರೆ ಎಂದರು.

ಇನ್ಸ್‌ಪೆಕ್ಟರ್ ಸಂತೋಷ್ ಕಶ್ಯಪ್, ನಗರಸಭೆ ಪರಿಸರ ಇಂಜಿನಿಯರ್ ಸೌಮ್ಯ, ಎಸ್‌ಐ ತಾಜುದ್ದೀನ್, ಖಾಸಗಿ ವಾಹಿನಿಯ ಸಚಿನ್ ಪ್ರಕಾಶ್ ಸೇರಿದಂತೆ ಅನೇಕರಿದ್ದರು.

ಮನೆಯಿಂದಲೇ ಸ್ವಚ್ಛತೆ ಆರಂಭವಾಗಲಿ

ಪಾರಂಪರಿಕ ನಗರ ಖ್ಯಾತಿಯ ಮೈಸೂರು ಸ್ವಚ್ಛ ನಗರಿಯಾಗಿದೆ. ಈ ಹಿಂದೆ ಹುಣಸೂರು ನಗರಸಭೆ ಸ್ವಚ್ಛ ಭಾರತ ಮಿಷನ್ ಕಾರ್ಯಕ್ರಮದಡಿ ಅನೇಕ ಪ್ರಶಸ್ತಿ ಗಿಟ್ಟಿಸಿದೆ. ಸ್ವಚ್ಛತೆ ಮೊದಲು ನಮ್ಮ ಮನೆಗಳಿಂದಲೇ ಆರಂಭವಾಗಬೇಕು. ಮನೆಯಲ್ಲೇ ಹಸಿ ಕಸ, ಒಣ ಕಸ ಪ್ರತ್ಯೇಕವಾಗಿಸಬೇಕು. ಪ್ರಶಸ್ತಿಗಾಗಿ ಸ್ವಚ್ಛತೆ ಎನ್ನದೆ ನಮ್ಮ ಉಳಿವಿಗಾಗಿ ಸ್ವಚ್ಛತೆ ಬೇಕು. ಇದಕ್ಕೆ ನಾಗರಿಕರ ಸಹಕಾರ ಅಗತ್ಯ. ನಗರದ ಸ್ವಚ್ಛತೆಗೆ ಶ್ರಮಿಸುವ ಪೌರಕಾರ್ಮಿಕರ ಸೇವೆಗೆ ಬೆಲೆ ಕಟ್ಟಲು ಸಾಧ್ಯವಿಲ್ಲ. ಪೌರಕಾರ್ಮಿಕರು ದೇಶದ ಹೆಮ್ಮೆ. ಮನೆ ಬಾಗಿಲಿಗೆ ಬರುವ ಕಸ ಸಂಗ್ರಹ ವಾಹನಕ್ಕೆ ಕಸ ನೀಡುವ ಔದಾರ್ಯ ತೋರೋಣ.

– ಕೆ.ವಿ.ಕಾವ್ಯರಾಣಿ, ಉಪವಿಭಾಗಾಧಿಕಾರಿ.

ಮೈಸೂರಿನ ಐಕಾನಿಕ್ ಆನೆ ವೃತ್ತಕ್ಕೆ ವಾಹನ ಡಿಕ್ಕಿ

ಮೈಸೂರು, ಮಾ.25(ಬಿಎಲ್‌ಯು)– ಮೈಸೂರಿನ ಬನ್ನಿಮಂಟಪದ ಮೌಲಾನ ಅಬ್ದುಲ್ ಕಲಾಂ ಆಜಾದ್ ವೃತ್ತ (ಹೈವೆ ಸರ್ಕಲ್) ದ ಐಕಾನಿಕ್ ಆನೆ ಪ್ರತಿಮೆಯ ವೃತ್ತಕ್ಕೆ ವಾಹನವೊಂದು ಡಿಕ್ಕಿ ಹೊಡೆದಿದೆ. ಚಾಲಕನ ಅಜಾಗರೂಕತೆಯಿಂದ ಈ ಅಪಘಾತ ಸಂಭವಿಸಿದ್ದು, ವೃತ್ತಕ್ಕೆ ಹಾನಿಯಾಗಿದ್ದು, ಅದೃಷ್ಟವಶಾತ್ ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ.

ಬನ್ನಿಮಂಟಪದ ಬಾಲಭವನದ ಕಡೆಯಿಂದ ನೆಲ್ಸನ್ ಮಂಡೇಲಾ ರಸ್ತೆಯಿಂದ ಬರುತ್ತಿದ್ದ ಸ್ವರಾಜ್ ಮಜ್ದಾ ವಾಹನ (ಕೆಎ– 09, ಸಿ 6906) ವೇಗವಾಗಿ ಬಂದು ಐಕಾನಿಕ್ ಆನೆ ಪ್ರತಿಮೆಯ ವೃತ್ತಕ್ಕೆ ಇಂದು ಬೆಳಿಗ್ಗೆ ಡಿಕ್ಕಿ ಹೊಡೆದಿದೆ. ಚಾಲಕ ವೇಗವಾಗಿ ಬಂದ ರಭಸಕ್ಕೆ ವೃತ್ತದ ಮಧ್ಯೆ ಇರುವ ಐಕಾನಿಕ್ ಆನೆಗೆ ಡಿಕ್ಕಿ ಹೊಡೆಯಬೇಕಿತ್ತು. ಆದರೆ ಸುತ್ತ ನಿರ್ಮಿಸಿದ್ದ ಕಬ್ಬಿಣದ ಗ್ರಿಲ್ ವಾಹನ ಮುಂದೆ ಹೋಗುವುದನ್ನು ತಡೆದಿದೆ.

ಆದರೆ ವಾಹನ ಡಿಕ್ಕಿ ಹೊಡೆದ ರಭಸಕ್ಕೆ ವೃತ್ತದ ಕಬ್ಬಿಣದ ಗ್ರಿಲ್ ಮುರಿದು ಬಿದ್ದಿದೆ. ಅಲ್ಲದೆ ವೃತ್ತದ ಸುತ್ತ ಅಳವಡಿಸಿದ್ದ ರೇಡಿಯಂ ಲೈಟ್ ಬಾಕ್ಸ್ ಕೂಡ ಒಡೆದು ಹೋಗಿವೆ. ಈ ಅಪಘಾತದಿಂದ ವಾಹನದ ಮುಂಭಾಗ ತೀವ್ರ ಜಖಂಗೊಂಡಿದೆ. ಈ ಅಪಘಾತದ ಸಂಬಂಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿಲ್ಲ.

ಈ ವೃತ್ತದ ಮಧ್ಯೆ ಐಕಾನಿಕ್ ಆನೆ ತಲೆಯ ಶಿರವನ್ನು ಬ್ರಿಗೇಡ್ ಗ್ರೂಪ್‌ನವರು ನಿರ್ಮಾಣ ಮಾಡಿ ಎರಡು ವರ್ಷದವರೆಗೆ ನಿರ್ವಹಣೆ ಮಾಡುತ್ತಿದ್ದರು. ತರುವಾಯ ನಿರ್ವಹಣೆಯ ಹೊಣೆ ಹೊತ್ತ ಮೈಸೂರು ನಗರ ಪಾಲಿಕೆ ಇದನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿದೆ. ಇದರಿಂದ ವೃತ್ತದಲ್ಲಿರುವ ಗಿಡಗಳು ಒಣಗಿವೆ, ಐಕಾನಿಕ್ ಆನೆ ಶಿರವು ಧೂಳು ಹಿಡಿಯುತ್ತಿದೆ.

ಅತ್ಯಾಕರ್ಷಕವಾದ ಈ ವೃತ್ತಕ್ಕೆ ಆಗಾಗೆ ಹಾನಿಯಾಗುತ್ತಲೆ ಇದೆ. ಕೆಲವು ತಿಂಗಳ ಹಿಂದೆ ಟ್ರಕ್‌ವೊಂದು ಇದೇ ರೀತಿ ವೃತ್ತಕ್ಕೆ ಡಿಕ್ಕಿ ಹೊಡೆದಿತ್ತು. ಇದರಿಂದ ವೃತ್ತದ ಕಬ್ಬಿಣದ ಗ್ರಿಲ್‌ಗಳು ಮುರಿದು ಬಿದ್ದಿದ್ದವು. ಆದರೆ ಅಂದು ಐಕಾನಿಕ್ ಆನೆ ಶಿರಕ್ಕೆ ಯಾವುದೇ ಹಾನಿಯಾಗಿರಲಿಲ್ಲ.

ಕಣ್ಮನ ಸೆಳೆಯುವ ಐಕಾನಿಕ್ ಆನೆ ಶಿರದ ಈ ವೃತ್ತದ ಅಂದವನ್ನು ಹಾಳು ಮಾಡುತ್ತಿದ್ದಾರೆ. ರಾಜಕೀಯ ಪಕ್ಷಗಳು ಹಾಗೂ ಖಾಸಗಿ ಸಂಸ್ಥೆಗಳು ಫ್ಲೆಕ್ಸ್, ಬಂಟಿಂಗ್ಸ್, ಬ್ಯಾನರ್ ಕಟ್ಟುತ್ತಿದ್ದು, ವೃತ್ತದಲ್ಲಿ ಧ್ವಜವನ್ನು ನೆಟ್ಟು ಸೌಂದರ್ಯಕ್ಕೆ ಧಕ್ಕೆ ತರುತ್ತಿದ್ದಾರೆ.

ಈ ವೃತ್ತದಲ್ಲಿ ಆರು ರಸ್ತೆಗಳು ಕೂಡಲಿದ್ದು, ವಾಹನ ದಟ್ಟಣೆ ಹೆಚ್ಚಾಗಿದೆ. ಈ ಹಿನ್ನೆಲೆಯಲ್ಲಿ ಟ್ರಾಫಿಕ್ ಸಿಗ್ನಲ್ ಲೈಟ್ ಅಳವಡಿಸಿದ್ದು, ಸಂಚಾರಿ ಪೊಲೀಸರು ಇದನ್ನು ಇನ್ನು ಚಾಲೂ ಮಾಡಿಲ್ಲ.

ಕಬ್ಬಿಣದ ಗ್ರಿಲ್, ರೇಡಿಯಂ ಲೈಟ್ ಬಾಕ್ಸ್‌ಗೆ ಹಾನಿ




ಮೈಸೂರಿನ ಬನ್ನಿಮಂಟಪದ ಮೌಲಾನ ಅಬ್ದುಲ್ ಕಲಾಂ ಆಜಾದ್ ವೃತ್ತ (ಹೈವೆ ಸರ್ಕಲ್) ದ ಐಕಾನಿಕ್ ಆನೆ ಪ್ರತಿಮೆಯ ವೃತ್ತಕ್ಕೆ ವಾಹನವೊಂದು ಡಿಕ್ಕಿ ಹೊಡೆದಿರುವ ದೃಶ್ಯ (ಎಡಚಿತ್ರ) ಅಪಘಾತದಿಂದ ವೃತ್ತದ ಕಬ್ಬಿಣದ ಗ್ರಿಲ್ ಹಾಗೂ ರೇಡಿಯಂ ಲೈಟ್ ಬಾಕ್ಸ್‌ಗೆ ಹಾನಿಯಾಗಿದೆ.

ನಗರ ಪಾಲಿಕೆ ಬಜೆಟ್ ಅಪ್ ಡೇಟ್

ಮೈಸೂರು ನಗರ ಪಾಲಿಕೆಯ ಆಡಳಿತಾಧಿಕಾರಿ ನಿತೇಶ್ ಪಾಟೀಲ್ ಅವರು ಸತ್ವವಿಲ್ಲದ ಬಜೆಟ್ ಮಂಡಿಸಿದ್ದಾರೆ. ಇವರು 10.20 ಕೋಟಿ ಉಳಿತಾಯ ಬಜೆಟ್ ಮಂಡಿಸಿದ್ದಾರೆ. ಆದರೆ 200 ಕೋಟಿ ರೂಪಾಯಿಯನ್ನು ಗುತ್ತಿಗೆದಾರರಿಗೆ ನೀಡದೆ ಸತಾಯಿಸುತ್ತಿದ್ದಾರೆ. ಇದರಿಂದ ಇದು ಕೊರತೆ ಬಜೆಟ್ ಆಗಿದೆಯೇ ಹೊರತು, ಉಳಿತಾಯ ಬಜೆಟ್ ಅಲ್ಲ. ಮೈಸೂರಿನ ಹಾಲಿ ಮಾರುಕಟ್ಟೆ ನವೀಕರಣ ಮಾಡಿ ಅಭಿವೃದ್ಧಿಗೊಳಿಸದೆ ಹೊಸ ಮಾರುಕಟ್ಟೆ ನಿರ್ಮಿಸಲು ಹೊರಟಿದ್ದಾರೆ. ಇವರು ಘೋಷಣೆ ಮಾಡಿರುವ ಯಾವ ಯೋಜನೆಯೂ ಅನುಷ್ಠಾನಗೊಳ್ಳುವುದಿಲ್ಲ.

ಶಿವಕುಮಾರ್, ಮಾಜಿ ಮೇಯರ್

ಆರ್.ರಾಮೇಗೌಡ ಮೈಸೂರು ಜಿಲ್ಲಾ ಎಂಪ್ಲಾಯಿಸ್ ಗೃಹ ನಿರ್ಮಾಣ ಸಂಘದ ಅಧ್ಯಕ್ಷ



ಮೈಸೂರು ಜಿಲ್ಲಾ ಎಂಪ್ಲಾಯಿಸ್ ಗೃಹ ನಿರ್ಮಾಣ ಸಂಘದ ಆಡಳಿತ ಮಂಡಳಿಗೆ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಸಂಘದ ನೂತನ ಅಧ್ಯಕ್ಷರಾಗಿ ಆರ್.ರಾಮೇಗೌಡ ಅವಿರೋಧ ಆಯ್ಕೆಯಾಗಿದ್ದಾರೆ. ಈ ವೇಳೆ ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ.ಕೆ.ನಾಗರಾಜು, ನಿರ್ದೇಶಕರುಗಳಾದ ಪುಟ್ಟರಾಜು, ಆರ್.ಎಲ್. ಶ್ರೀನಿವಾಸ್, ವೈ.ವಿ. ಸತೀಶ್‌ಶೆಟ್ಟಿ, ಸಿ.ಬಿ. ಶ್ರೀಶೈಲ, ವಿಕ್ಟರ್ ಮತ್ತು ಶ್ರೀಮತಿ ಸಾಕಮ್ಮ ಉಪಸ್ಥಿತರಿದ್ದರು.

ಸಾಮೂಹಿಕ ವಿವಾಹ



ಸುತ್ತೂರು ಶ್ರೀಮಠದಲ್ಲಿ ಜರುಗಿದ 131ನೇ ಮಾಸಿಕ ಸಾಮೂಹಿಕ ವಿವಾಹದಲ್ಲಿ ಒಂಭತ್ತು ಜೋಡಿಗಳು ಸತಿಪತಿಗಳಾದರು. ಚಿತ್ರದಲ್ಲಿ ಸಂಸ್ಥೆಯ ಆಡಳಿತಾಧಿಕಾರಿ ಎಸ್.ಪಿ.ಉದಯಶಂಕರ್, ಮುಖ್ಯಸ್ಥರು ಹಾಗೂ ಸಿಬ್ಬಂದಿ ವರ್ಗದವರಿದ್ದಾರೆ.

ಯಶಸ್ಸಿನ ಗುರಿ ತಲುಪಲು ಸ್ಪರ್ಧಾ ಮನೋಭಾವದ ಜೊತೆಗೆ ವೇದಿಕೆ ಅವಶ್ಯಕ

ಜೆಎಸ್‌ಎಸ್ ಮಹಾವಿದ್ಯಾಪೀಠದ ಗೌರವ ಕಾರ್ಯದರ್ಶಿ ಪ್ರೊ.ಎಸ್.ಪಿ.ಮಂಜುನಾಥ್ ಅಭಿಪ್ರಾಯ

ಮೈಸೂರು, ಮಾ.25– ಯಶಸ್ಸಿನ ಗುರಿ ತಲುಪಲು ಸ್ಪರ್ಧಾಮನೋಭಾವ ಮತ್ತು ವೇದಿಕೆ ಅವಶ್ಯಕವಾಗಿದೆ ಎಂದು ಜೆಎಸ್ ಎಸ್ ಮಹಾವಿದ್ಯಾಪೀಠದ ಗೌರವ ಕಾರ್ಯದರ್ಶಿ ಪ್ರೊ.ಎಸ್.ಪಿ. ಮಂಜುನಾಥ್ ಅಭಿಪ್ರಾಯಪಟ್ಟರು.

ಮೈಸೂರು ಸರಸ್ವತಿಪುರಂನ ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಕಲಾ ಸಂಭ್ರಮ 2026ರ ವತಿಯಿಂದ ರಾಜ್ಯ ಮಟ್ಟದ 'ವರ್ಧಿನಿ' ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಜ್ಯೋತಿ ಬೆಳಗುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಯಶಸ್ಸಿನ ಗುರಿ ತಲುಪಲು ಸ್ಪರ್ಧಾ ಮನೋಭಾವ ಮತ್ತು ವೇದಿಕೆ ಅವಶ್ಯಕವಾಗಿದೆ ಎಂದರು. ವಿದ್ಯಾರ್ಥಿಗಳು ಶೈಕ್ಷಣಿಕ ಚಟುವಟಿಕೆಗಳ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದರಿಂದ ವ್ಯಕ್ತಿತ್ವ ಬೆಳವಣಿಗೆ ಸಾಧ್ಯ ಎಂದರು.

ಸ್ಪರ್ಧೆಯಲ್ಲಿ ಸೋಲು ಗೆಲುವಿಗಿಂತ ಭಾಗವಹಿಸುವುದು ಬಹಳ ಮುಖ್ಯ ಎಂದರು.



ರಾಜ್ಯ ಮಟ್ಟದ 'ವರ್ಧಿನಿ' ಕಾರ್ಯಕ್ರಮವನ್ನು ಎಸ್.ಪಿ. ಮಂಜುನಾಥ್ ಉದ್ಘಾಟಿಸಿದರು

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ರಾಜ್ಯ ಪ್ರಶಸ್ತಿ ಪುರಸ್ಕೃತ ಚಲನಚಿತ್ರ ನಟಿ ಹಾಗೂ ಕಾಲೇಜಿನ ಹಿರಿಯ ವಿದ್ಯಾರ್ಥಿನಿ ಶ್ರೀಮತಿ ಅಕ್ಷತಾ ಪಾಂಡವಪುರ ಮಾತನಾಡಿ, ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದ ಆ ದಿನಗಳನ್ನು ನೆನಪು ಮಾಡಿಕೊಳ್ಳುವ ಮೂಲಕ ಕಾಲೇಜಿನ ವೇದಿಕೆಯನ್ನು ಸ್ಮರಿಸಿದರು. ವಿದ್ಯಾರ್ಥಿ ದೆಸೆಯಲ್ಲಿ ಕಲೆಯ ವಿವಿಧ ಪ್ರಕಾರಗಳಾದ ಸಾಹಿತ್ಯ, ಸಂಗೀತ, ನೃತ್ಯ ಹಾಗೂ ಕ್ರೀಡಾ ಮನೋಭಾವವನ್ನು ರೂಢಿಸಿಕೊಳ್ಳಬೇಕು ಎಂದರು. ವಿದ್ಯಾರ್ಥಿಗಳು ವೇದಿಕೆಗಳನ್ನು ಏರುವುದು ನಿಜವಾದ ಯಶಸ್ಸಿನ ಗೆಲುವು ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಮಹಾವಿದ್ಯಾಪೀಠದ ಕಾಲೇಜು ಶಿಕ್ಷಣ ವಿಭಾಗದ ನಿರ್ದೇಶಕ ಪ್ರೊ. ಮೊರಬದ ಮಲ್ಲಿಕಾರ್ಜುನ, ಸೃಜನಶೀಲ ಬರವಣಿಗೆಯನ್ನು ವಿದ್ಯಾರ್ಥಿಗಳು ರೂಢಿಸಿಕೊಳ್ಳಬೇಕು. ಹೆಣ್ಣು ಎಲ್ಲರನ್ನೂ ಒಳಗೊಂಡು ವಿಸ್ತರಿಸುವ ಜಗತ್ತನ್ನು ಸೃಷ್ಟಿಸುತ್ತಾರೆ ಎಂದು ತಿಳಿಸಿದರು.

ಎಲ್ಲರನ್ನೂ ಒಳಗೊಳ್ಳುವ ಗುಣವನ್ನು 'ವರ್ಧಿನಿ'ಯಂತಹ ವೇದಿಕೆಗಳು ನೀಡುತ್ತವೆ ಎಂದರು. ಪ್ರಾಂಶುಪಾಲರಾದ ಡಾ. ರೇಚಣ್ಣ, ಸಂಚಾಲಕ ಹೊನ್ನಶೆಟ್ಟಿ, ಕಾಲೇಜಿನ ಸಿಬ್ಬಂದಿವರ್ಗ ಮತ್ತು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಮೈಸೂರು ನಗರ, ಗ್ರಾಮಾಂತರ ಬಸ್ ನಿಲ್ದಾಣದಲ್ಲಿ ಸದ್ಯದಲ್ಲೇ ನಮ್ಮ ಕ್ಲಿನಿಕ್ ಆರಂಭ

- ಈಗಾಗಲೇ ಮೈಸೂರು ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿವೆ 21 'ನಮ್ಮ ಕ್ಲಿನಿಕ್'ಗಳು
- 10 ಸಾವಿರ ಜನಸಂಖ್ಯೆಗೆ ಒಂದರಂತೆ ಈ ಆರೋಗ್ಯ ಕೇಂದ್ರ ಸ್ಥಾಪನೆ

ಮೈಸೂರು,ಮಾ.25(ಎಂಟಿವೈ)– ಎಲ್ಲರಿಗೂ ಸಮರ್ಪಕ ಆರೋಗ್ಯ ಸೇವೆ ಒದಗಿಸುವ ನಿಟ್ಟಿನಲ್ಲಿ ಮೈಸೂರು ಜಿಲ್ಲೆಗೆ ಹೊಸದಾಗಿ ಮಂಜೂರಾದ 14 ನಮ್ಮ ಕ್ಲಿನಿಕ್ ಸೇರಿದಂತೆ ಒಟ್ಟು 21 ಕ್ಲಿನಿಕ್ ಕಾರ್ಯನಿರ್ವಹಿಸುತ್ತಿದ್ದು, ಶೀಘ್ರದಲ್ಲಿಯೇ ಮೈಸೂರು ನಗರ ಮತ್ತು ಗ್ರಾಮಾಂತರ ಬಸ್‌ನಿಲ್ದಾಣದಲ್ಲೂ ನಮ್ಮ ಕ್ಲಿನಿಕ್ ಸೇವೆ ಆರಂಭಿಸಲಿದೆ.

ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಸಮುದಾಯ ಆರೋಗ್ಯ ಕೇಂದ್ರದ ಸೇವೆ ಪಡೆಯಲು ತೊಂದರೆಯಾಗಿರುವ ಬಡಾವಣೆಗಳನ್ನು ಗುರಿಯಾಗಿಸಿಕೊಂಡು 10 ಸಾವಿರ ಜನಸಂಖ್ಯೆಯುಳ್ಳ ಪ್ರದೇಶ ವ್ಯಾಪ್ತಿಯಲ್ಲಿ ಸರ್ಕಾರ ನಮ್ಮ ಕ್ಲಿನಿಕ್ ಸ್ಥಾಪಿಸಿದ್ದು, 2022–23ನೇ ಸಾಲಿನಲ್ಲಿ ಮೈಸೂರಿಗೆ ಮಂಜೂರಾದ 9 ನಮ್ಮ ಕ್ಲಿನಿಕ್ ಅತ್ಯುತ್ತಮವಾಗಿ ಆರೋಗ್ಯ ಸೇವೆ ಒದಗಿಸುತ್ತಾ ಬಂದಿದೆ. ಪ್ರತಿದಿನ ಸರಾಸರಿ 100 ಮಂದಿಗೆ ನಮ್ಮ ಕ್ಲಿನಿಕ್‌ನಲ್ಲಿ ಆರೋಗ್ಯ ತಪಾಸಣೆ ಸೇರಿದಂತೆ ವೈದ್ಯಕೀಯ ಸೇವೆ ಒದಗಿಸುತ್ತಿದ್ದು, ಜನಮನ್ನಣೆ ಗಳಿಸಿದೆ. ಸಾರ್ವಜನಿಕ ವಲಯದಲ್ಲಿ ಪ್ರಶಂಸೆಗೆ ಪಾತ್ರವಾದ ಹಿನ್ನೆಲೆಯಲ್ಲಿ ಜನರಿಂದ ಬೇಡಿಕೆ ವ್ಯಕ್ತವಾದ ಹಿನ್ನೆಲೆಯಲ್ಲಿ ಕಳೆದ ಸಾಲಿನಲ್ಲಿ ಹೊಸದಾಗಿ ಮಂಜೂರಾದ 14 ನಮ್ಮ ಕ್ಲಿನಿಕ್‌ನಲ್ಲಿ ಈಗಾಗಲೇ 12 ನಮ್ಮ ಕ್ಲಿನಿಕ್ ಕಾರ್ಯಾರಂಭ ಮಾಡಿದ್ದು, ಉಳಿದ ಎರಡು ಹೊಸ ನಮ್ಮ ಕ್ಲಿನಿಕ್‌ಗಳು ಶೀಘ್ರದಲ್ಲಿಯೇ ಆರೋಗ್ಯ ಸೇವೆ ಆರಂಭಿಸಲಿವೆ.

ನಮ್ಮ ಕ್ಲಿನಿಕ್‌ನಲ್ಲಿನ ಸೇವೆ: 50 ಸಾವಿರ ಜನಸಂಖ್ಯೆಗೆ ಅನುಗುಣವಾಗಿ ಪ್ರಾಥಮಿಕ ಆರೋಗ್ಯ ಕೇಂದ್ರ ಸ್ಥಾಪಿತವಾಗಿದ್ದರೆ, 10 ಸಾವಿರ ಜನಸಂಖ್ಯೆಗೆ ಅನುಗುಣವಾಗಿ ನಮ್ಮ ಕ್ಲಿನಿಕ್ ಸ್ಥಾಪಿಸಲಾಗಿದೆ. ಓರ್ವ ವೈದ್ಯರು, ಸ್ಟಾಫ್ ನರ್ಸ್, ಸಹಾಯಕರು, ಲ್ಯಾಬ್ ಟೆಕ್ನಿಷಿಯನ್ ಹಾಗೂ ಓರ್ವ ಆರೋಗ್ಯ ಪರಿವೀಕ್ಷಕರು ಕಾರ್ಯನಿರ್ವಹಿಸಲಿದ್ದಾರೆ. ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳನ್ನೇ ನಮ್ಮ ಕ್ಲಿನಿಕ್‌ಗೆ ಆಡಳಿತಾಧಿಕಾರಿಯಾಗಿ ನಿಯೋಜಿಸಿದ್ದು, ನಮ್ಮ ಕ್ಲಿನಿಕ್‌ಗೆ ಬೇಕಾದ ಔಷಧಿ ಸರಬರಾಜು ಮಾಡಲು ಕ್ರಮ ಕೈಗೊಳ್ಳಲಿದ್ದಾರೆ. ಕೆಮ್ಮು, ಜ್ವರ, ನೆಗಡಿ ಸೇರಿದಂತೆ ಇನ್ನಿತರ ಆರೋಗ್ಯ ಸಮಸ್ಯೆಗಳಿಗೆ ತಪಾಸಣೆಯೊಂದಿಗೆ ಚಿಕಿತ್ಸೆಯನ್ನು ನೀಡಲಾಗುತ್ತಿದೆ.

ಹಳೆಯ 9 ನಮ್ಮ ಕ್ಲಿನಿಕ್‌ಗಳಲ್ಲಿ ಈಗಾಗಲೇ 38000 ಪುರುಷರು, 42482 ಮಹಿಳೆಯರು, 7 ಮಂದಿ ತೃತೀಯ ಲಿಂಗಿಗಳು ಸೇರಿದಂತೆ 80,489 ಮಂದಿ ಆರೋಗ್ಯ ಸೇವೆ ಪಡೆದುಕೊಂಡಿದ್ದಾರೆ. 70,503 ಮಂದಿಗೆ ಔಷಧಿ ವಿತರಿಸಲಾಗಿದೆ. 18,285 ಮಂದಿಗೆ ಡಯಾಗ್ನಾಸ್ಟಿಕ್ ಪರೀಕ್ಷೆ, 20 ಮಂದಿಗೆ ಟೆಲಿ ಕೌನ್ಸಿಲಿಂಗ್, 1670 ಮಂದಿಗೆ ವೆಲ್‌ನೆಸ್ ಸೆಷನ್ ನಡೆಸಿಕೊಡಲಾಗಿದೆ.

ಪ್ರಸಕ್ತ ಸಾಲಿನ ಫೆಬ್ರವರಿವರೆಗೆ 21 ನಮ್ಮ ಕ್ಲಿನಿಕ್‌ನಲ್ಲಿ 9216 ಪುರುಷರು, 11,287 ಮಹಿಳೆಯರು, 8 ಮಂದಿ ತೃತೀಯ ಲಿಂಗಿಗಳು ಒಳಗೊಂಡಂತೆ 19,953 ಮಂದಿಗೆ ಚಿಕಿತ್ಸಾ ಸೌಲಭ್ಯ ನೀಡಲಾಗಿದೆ. 18,363 ಮಂದಿಗೆ ವಿವಿಧ ಬಗೆಯ ಔಷಧಿ ವಿತರಿಸಲಾಗಿದೆ. 5820 ಮಂದಿಗೆ ಡಯಾಗ್ನಾಸ್ಟಿಕ್ ಟೆಸ್ಟ್, 75 ಮಂದಿಗೆ ವೆಲ್ನೆಸ್ ಸೆಷನ್, 15 ಮಂದಿಗೆ ಔಟ್‌ರಿಚ್ ಸೇವೆ ಒದಗಿಸಲಾಗಿದೆ.



ವಿವಿಧೆಡೆ ಇರುವ ನಮ್ಮ ಕ್ಲಿನಿಕ್‌ನಲ್ಲಿ ಚಿಕಿತ್ಸೆ ಪಡೆಯುತ್ತಿರುವ ರೋಗಿಗಳು.



ನಮ್ಮ ಕ್ಲಿನಿಕ್‌ಗೆ ಡಿಹೆಚ್‌ಓ ಡಾ.ಕುಮಾರಸ್ವಾಮಿ ಭೇಟಿ ನೀಡಿ ಪರಿಶೀಲಿಸುತ್ತಿರುವುದು.

ಶೀಘ್ರವೇ ಬಸ್ ನಿಲ್ದಾಣದಲ್ಲೂ ನಮ್ಮ ಕ್ಲಿನಿಕ್

ಮೈಸೂರಿನ ನಗರ ಹಾಗೂ ಗ್ರಾಮಾಂತರ ಬಸ್ ನಿಲ್ದಾಣದಲ್ಲೂ ನಮ್ಮ ಕ್ಲಿನಿಕ್ ಸೇವೆ ಆರಂಭಿಸಲು ಸರ್ಕಾರ ಅನುಮೋದನೆ ನೀಡಿದ್ದು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಾರಿಗೆ ಅಧಿಕಾರಿಗಳೊಂದಿಗೆ ಮಾತುಕತೆ ನಡೆಸಿದ್ದಾರೆ. ಈಗಾಗಲೇ ಸಾರಿಗೆ ಸಂಸ್ಥೆಯೂ ಬಸ್ ನಿಲ್ದಾಣದಲ್ಲಿ ನಮ್ಮ ಕ್ಲಿನಿಕ್ ಸೇವೆ ಆರಂಭಿಸಲು ಸ್ಥಳ ನೀಡಲು ಸಮ್ಮತಿಸಿದೆ. ಇಲಾಖಾವಾರು ಒಡಂಬಡಿಕೆಯಾಗಿದ್ದು, ಶೀಘ್ರದಲ್ಲಿಯೇ ಮೈಸೂರು ನಗರ ಮತ್ತು ಗ್ರಾಮಾಂತರ ಬಸ್ ನಿಲ್ದಾಣದಲ್ಲಿ ನಮ್ಮ ಕ್ಲಿನಿಕ್ ಸೇವೆ ಆರಂಭವಾಗಲಿದೆ. ಇದರಿಂದ ಪ್ರಯಾಣಿಕರಿಗೆ ಬಸ್ ನಿಲ್ದಾಣದಲ್ಲಿ ತುರ್ತು ಆರೋಗ್ಯ ಸೇವೆ ಬೇಕಾದರೆ ನಮ್ಮ ಕ್ಲಿನಿಕ್‌ನಲ್ಲಿ ಚಿಕಿತ್ಸೆ ಪಡೆದುಕೊಳ್ಳಬಹುದಾಗಿದೆ.

ಉತ್ತಮ ಆರೋಗ್ಯ ಸೇವೆ ಒದಗಿಸಲಾಗುತ್ತಿದೆ

ಮೈಸೂರಿನ ರಿಂಗ್ ರಸ್ತೆಗೆ ಹೊಂದಿಕೊಂಡಂತೆ ಇರುವ ಬಡಾವಣೆ ಸೇರಿದಂತೆ ಜಿಲ್ಲೆಯಲ್ಲಿ ಇದುವರೆಗೆ 21 ನಮ್ಮ ಕ್ಲಿನಿಕ್ ಕಾರ್ಯನಿರ್ವಹಿಸುತ್ತಿವೆ. ಎಲ್ಲಾ ಕ್ಲಿನಿಕ್‌ಗಳು ಜನರಿಗೆ ಉತ್ತಮ ಆರೋಗ್ಯ ಸೇವೆ ಒದಗಿಸುತ್ತಿವೆ. ರೋಗಿಗಳಿಗೆ ಬೇಕಾದ ಔಷಧಿಗಳನ್ನು ಸಮರ್ಪಕವಾಗಿ ಪೂರೈಸಲಾಗುತ್ತಿದೆ. ಕಾಲ ಕಾಲಕ್ಕೆ ನಮ್ಮ ಕ್ಲಿನಿಕ್‌ಗೆ ಭೇಟಿ ನೀಡಿ ಪರಿಶೀಲಿಸಲಾಗುತ್ತಿದೆ. ಶೀಘ್ರದಲ್ಲಿಯೇ ನಗರ ಹಾಗೂ ಗ್ರಾಮಾಂತರ ಬಸ್ ನಿಲ್ದಾಣದಲ್ಲೂ ನಮ್ಮ ಕ್ಲಿನಿಕ್ ಆರಂಭವಾಗಲಿದೆ. – **ಡಾ.ಪಿ.ಸಿ.ಕುಮಾರಸ್ವಾಮಿ, ಜಿಲ್ಲಾ ಆರೋಗ್ಯಾಧಿಕಾರಿ.**

ಎಲ್ಲೆಲ್ಲಿವೆ ನಮ್ಮ ಕ್ಲಿನಿಕ್

ಮೈಸೂರಿನ ದಟ್ಟಗಳ್ಳಿ, ರಾಜೀವ್‌ನಗರ, ಎಸ್‌ವಿಪಿ ನಗರ, ಚಾಮುಂಡಿಬೆಟ್ಟ, ವಿಜಯನಗರ 1ನೇ ಹಂತ, ವಿಜಯನಗರ 3ನೇ ಹಂತ, ಹಳೆ ಕೆಸರೆ, ಕೆ.ಆರ್.ನಗರ–2, ಭಾರತ್‌ನಗರ, ಬನ್ನೂರು, ಏಕಲವ್ಯನಗರ, ವಿಜಯನಗರ 4ನೇ ಹಂತದಲ್ಲಿ ಹೊಸ ಕ್ಲಿನಿಕ್ ಆರಂಭವಾಗಿದ್ದು, ಈ ಹಿಂದೆ ಸ್ಥಾಪಿಸಿದ್ದ ನಮ್ಮ ಕ್ಲಿನಿಕ್‌ಗಳು ಯರಗನಹಳ್ಳಿ, ತಿ.ನರಸೀಪುರ, ಶ್ರೀರಾಂಪುರ, ಕೆ.ಆರ್.ನಗರ, ಹೆಚ್.ಡಿ.ಕೋಟೆ, ಹೂಟಗಳ್ಳಿ, ಬೋಗಾದಿ, ಹೊಸಹುಂಡಿ, ಪಿರಿಯಾಪಟ್ಟಣದಲ್ಲಿ ಕಾರ್ಯನಿರ್ವಹಿಸುತ್ತಿವೆ.

ಭಾರತೀತೀರ್ಥ ಸ್ವಾಮೀಜಿಯವರ ವರ್ಧಂತಿ



ಮೈಸೂರು. ಮಾ.25– ಶಂಕರ ತತ್ವ ಪ್ರಸಾರ ಅಭಿಯಾನ ಮೈಸೂರು ಜಿಲ್ಲಾ ಘಟಕದ ವತಿಯಿಂದ ಮೈಸೂರಿನ ಅಗ್ರಹಾರದಲ್ಲಿರುವ ಶಂಕರಮಠದಲ್ಲಿ, ಜಗದ್ಗುರು ಭಾರತೀತೀರ್ಥ ಮಹಾಸ್ವಾಮೀಜಿಯವರ 76ನೇ ವರ್ಧಂತಿ ಮಹೋತ್ಸವ ಕಾರ್ಯಕ್ರಮ ನಡೆಯಿತು.

ಶ್ರೀ ಭಾರತೀತೀರ್ಥ ಗುರುಗಳ ಕುರಿತು ವಿದ್ವಾನ್ ಕಾರ್ತಿಕ್.ಎಸ್ ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ ಹೊಯ್ಸಳ ಕರ್ನಾಟಕ ಸಂಘದ ಅಧ್ಯಕ್ಷ ಕೆ.ಆರ್ ಸತ್ಯನಾರಾಯಣ, ಹರೀಶ್, ನಟರಾಜ್, ಎಂ.ಆರ್ ಬಾಲಕೃಷ್ಣ, ಗೋಪಾಲರಾವ್, ಶೇಷಾದ್ರಿ ಭಟ್, ಜ್ಯೋತಿ, ಸತ್ಯವತಿ, ಸುಲೋಚನ, ರಶ್ಮಿ, ನಾಗಲಕ್ಷ್ಮಿ, ಶಶಿಕಲಾ ಇನ್ನಿತರರು ಉಪಸ್ಥಿತರಿದ್ದರು.

ವ್ಯಕ್ತಿ ನಾಪತ್ತೆ

ಮೈಸೂರು: ರಾಮೇಗೌಡ ಎಂಬ ವ್ಯಕ್ತಿ ವರಕೋಡು ಗ್ರಾಮದಿಂದ ಕಾಣೆಯಾಗಿದ್ದು, ವರುಣಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ವಯಸ್ಸು ಸುಮಾರು 70 ವರ್ಷ, 4.6 ಅಡಿ ಎತ್ತರ, ಎಣ್ಣೆಗೆಂಪು ಮೈಬಣ್ಣ, ಸಾಧಾರಣ ಮೈಕಟ್ಟು, ಕಪ್ಪು ಮಿಶ್ರಿತ ಬಿಳಿ ತಲೆಕೂದಲು, ಬಿಳಿ ಮೀಸೆ ಇರುತ್ತದೆ. ಮನೆಯಿಂದ ಹೋಗುವಾಗ ಲೈಟ್‌ಪಿಂಕ್ ಕಲರ್ ತುಂಬು ತೋಳಿನ ಶರ್ಟ್ ಮತ್ತು ಕಪ್ಪು ಬಣ್ಣದ ಪ್ಯಾಂಟ್ ಧರಿಸಿರುತ್ತಾರೆ. ವ್ಯಕ್ತಿಯ ಬಗ್ಗೆ ಮಾಹಿತಿ ಕಂಡುಬಂದಲ್ಲಿ ದೂ.ಸಂ.: 0821–2520040, 2444800, ವರುಣಾ ಠಾಣೆ : 0821–2594411 ನ್ನು ಸಂಪರ್ಕಿಸುವುದು ಎಂದು ವರುಣಾ ಠಾಣೆ ಠಾಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎಲೆಕ್ಟ್ರೀಷಿಯನ್‌ಗಳು ಬೇಕಾಗಿದ್ದಾರೆ

ಮೈಸೂರಿನ ಪ್ರತಿಷ್ಠಿತ "ಶ್ರೀ ಮಹಾಲಕ್ಷ್ಮಿ ಸ್ವೀಟ್ಸ್" ಸಂಸ್ಥೆಯಲ್ಲಿ ಕೆಲಸ ಮಾಡಲು 2–3 ವರ್ಷ ಅನುಭವವಿರುವ ಎಲೆಕ್ಟ್ರಿಷಿಯನ್‌ಗಳು ತಕ್ಷಣ ಬೇಕಾಗಿದ್ದಾರೆ

ಅರ್ಹತೆ: ಐಟಿಐ (ITI) ಎಲೆಕ್ಟ್ರಿಕಲ್ ಮತ್ತು ಡಿಪ್ಲೊಮಾ ಪೂರ್ಣಗೊಳಿಸಿರಬೇಕು.

ಆಕರ್ಷಕ ವೇತನ ನೀಡಲಾಗುವುದು.

ಸ್ಥಳ: ಮೈಸೂರು, ಬೆಂಗಳೂರು

9008030657
9686600588

WANTED

1) Site Engineer Electrical - 2Post
2) Electrical Design Engineer- 3 Post

Fresher or Experienced Male/ Female. Diploma /BE In EEE

Mob: 6366006603

Email: epowerele@gmail.com
www.epowerelectricals.com

RENT / LEASE

8000sq ft

Yelawala Hunsur Main road, Main road attached

M: 9916722563



ಶ್ರೀಮತಿ ರತ್ನಮ್ಮ, ನೀಲಮ್ಮ
H.M ಸೋಮೇಗೌಡ್ರು ರವರಿಗೆ
49ನೇ ವರ್ಷದ ವಿವಾಹ ವಾರ್ಷಿಕೋತ್ಸವದ ಶುಭಾಶಯಗಳು
ಶುಭ ಕೋರುವವರು: ಮಕ್ಕಳು ಹಾಗು ಕುಟುಂಬವರ್ಗ ಹೆಬ್ಬಾಳ್ ಬಡಾವಣೆ K.R ನಗರ ತಾ॥

THE BEST QUALITY WATER PROOF Plywood

₹69/-* PER SQFT.
15 YEARS CERTIFIED WARRANTY
Neem® BOND PLATINUM
Neem™ AKSHAYAGOLD

9148991267 | 9901291267



ಹಸಿರು ನಮ್ಮ ಉಸಿರು

ಕಾಲುಗಳಲ್ಲಿ ನೋವು, ಸೆಳತ, ತುರಿಕೆ, ಊತ, ಚರ್ಮದ ಬಣ್ಣ ಕಪ್ಪಾಗುವುದು ಕಾಲಿನ ಗಾಯಗಳು


MEGAVIN Vascular Care

10,000 ಕ್ಕಿಂತ ಹೆಚ್ಚು ರೋಗಿಗಳ ವಿಶ್ವಾಸ

ನಿಮ್ಮ ವೆರಿಕೋಸ್ ವೇನ್‌ಗಳಿಗಾಗಿ
ನಮ್ಮ ಬಳಿ ಸುರಕ್ಷಿತ ಮತ್ತು ವಿಶ್ವಾಸಾರ್ಹ ಚಿಕಿತ್ಸೆ!

ಸಂದರ್ಶನ ಪ್ರತಿ ಶುಕ್ರವಾರ

27ನೇ ಮಾರ್ಚ್
3ನೇ, 10ನೇ , 17ನೇ ,
ಹಾಗು 24ನೇ ಏಪ್ರಿಲ್ 2026



ಡಾ. ವಿನಯ್ ನ್ಯಾಪತಿ
ಕ್ಲಿನಿಕಲ್ & ವ್ಯಾಸ್ಕುಲಾರ್ ಇಂಟರ್‌ವೆನ್ಷನಲ್ ರೇಡಿಯಾಲಜಿಸ್ಟ್



ಮಿನಿಮಲ್ ಇನ್ ವೇಸಿವ್ (ಓಪನ್ ಸಜರಿ ಇಲ್ಲ)

ರಾಮಕೃಷ್ಣ ಆಸ್ಪತ್ರೆ
ವಿದ್ಯಾರಣ್ಯಪುರಂ, ಮೈಸೂರು
ಬೆಳಿಗ್ಗೆ 10 ರಿಂದ ಮಧ್ಯಾಹ್ನ 2ರ ವರಗೆ

ಮಾನಸ ಅರ್ಥೋಪೆಡಿಕ್ ಆಸ್ಪತ್ರೆ
ಟಿ.ಕೆ. ಬಡಾವಣೆ , ಮೈ ಸೂರು
ಸಂಜೆ 3 ರ ನಂತರ

9035223471 - 9880462229

G9 projects — Vee2 Developers

Designing your Dreams

POORVA SHELTERS
PHASE - I, II & III
Behind Marvel PU College

PRICE STARTS FROM ₹ 2,299/-SQ.FT

8088-707-707



ಗೌರಮ್ಮ ಮತ್ತು ಮರಿದೊಳ್ಳಯ್ಯ ರವರಿಗೆ
50ನೇ ವರ್ಷದ ವಿವಾಹ ವಾರ್ಷಿಕೋತ್ಸವ ಶುಭಾಶಯಗಳು
ಶುಭ ಕೋರುವವರು: ಮಕ್ಕಳು, ಅಳಿಯಂದಿರು, ಸೊಸೆಯಂದಿರು ಮತ್ತು ಮೊಮ್ಮಕ್ಕಳು.

ಮೈಸೂರು ಮಿತ್ರ — ವಾರ್ಷಿಕೋತ್ಸವ ವಿಶೇಷ ಸಂಚಿಕೆ

ಓದುಗರು ಹಾಗೂ ಜಾಹೀರಾತುದಾರರ ಸೇವೆಯಲ್ಲಿ "ಮೈಸೂರು ಮಿತ್ರ", ಏಪ್ರಿಲ್ 16, 2026ಕ್ಕೆ 46 ವರ್ಷಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ, 47ನೇ ವರ್ಷಕ್ಕೆ ಕಾಲಿಡುತ್ತಿರುವ ಈ ಸುಸಂದರ್ಭದಲ್ಲಿ ವರ್ಣರಂಜಿತ ವಿಶೇಷಾಂಕವನ್ನು ಹೊರತರಲಾಗುತ್ತಿದೆ. ಜಾಹೀರಾತುದಾರರಿಗೆ ಇದೊಂದು ಸುಸಮಯ. ಮುದ್ರಣದ ದೃಷ್ಟಿಯಿಂದ ತಮ್ಮ ಜಾಹೀರಾತುಗಳನ್ನು ಏಪ್ರಿಲ್ 10, 2026 ರೊಳಗೆ ನಮಗೆ ತಲುಪುವಂತೆ ಕಳುಹಿಸಬೇಕಾಗಿ ಕಳಕಳಿಯ ಮನವಿ.

ಪ್ರಧಾನ ಕಛೇರಿ

0821-2496522, 2496523, 0821-2496520 (5 ಲೈನುಗಳು)
ಮರಿಯ ಫರ್ನಾಂಡಿಸ್, ಜಾಹೀರಾತು ವ್ಯವಸ್ಥಾಪಕರು:
9448525060 / 8073030835
ಜಾಯ್ ಅಂಥೋಣಿ ರೂಬನ್: 8951668960, ಪ್ರೇಮ: 9880549879
ಕೆ.ಆರ್. ಸರ್ಕಲ್ ಕಛೇರಿ: 0821-2431774
ದೇವರಾಜ ಅರಸ್ ರಸ್ತೆ ಕಛೇರಿ: 0821-2428695

ಕೊಡಗು ಪ್ರಸಾದ್, ಸೂಜಾ ಆರ್ಕೆಡ್, ಜೂನಿಯರ್ ಕಾಲೇಜು ರಸ್ತೆ, ಮಡಿಕೇರಿ 9731469871	**ಮಂಡ್ಯ** ಕೆ. ಮೋಹನ್‌ರಾಜ್ 8762960325	**ಶ್ರೀರಂಗಪಟ್ಟಣ** ವಿನಯ್ ಕಾರೇಕುರ, ಶ್ರೀರಂಗಪಟ್ಟಣ 9686893234
ಹುಣಸೂರು ಕೆ. ಕೃಷ್ಣ (ಕೆ.ಕೆ.) EWS 204. KHB ಕಾಲೋನಿ, ಹುಣಸೂರು. 9448720626	**ಚಾಮರಾಜನಗರ** ಸಿದ್ಧಲಿಂಗಸ್ವಾಮಿ, ಸಿ.ಹೆಚ್.ಆರ್. ಕಾಂಪ್ಲೆಕ್ಸ್, ಸರ್ಕಾರಿ ಆಸ್ಪತ್ರೆ ಎದುರು, ಚಾಮರಾಜನಗರ 9242265667	**ಟಿ. ನರಸೀಪುರ** ಕುಮಾರ್, ಸಾರ್ವಜನಿಕ ಆಸ್ಪತ್ರೆ ರಸ್ತೆ, ಆರ್ಯ ಮಹಲ್ ಛತ್ರದ ಎದುರು, ಟಿ. ನರಸೀಪುರ. 9986719590
ಗುಂಡ್ಲುಪೇಟೆ ಸೋಮಶೇಖರ್, ದ.ರಾ. ಬೇಂದ್ರೆ ನಗರ, ಅಶ್ವಿನಿ ಲೇಔಟ್, ಗುಂಡ್ಲುಪೇಟೆ. 9845995426	**ಕೆ.ಆರ್. ನಗರ** ಮಂಜುನಾಥ, ವಾರ್ಡ್ ನಂ.17, ಕನಕನಗರ Extn. ಮುಳ್ಳೂರು ರಸ್ತೆ, ಕೆ.ಆರ್.ಟೌನ್ 9483084345	**ಮಳವಳ್ಳಿ** ಸರಸ್ವತಿ. ವಿ, ನಂ.47, 1ನೇ ಕ್ರಾಸ್, ಎನ್.ಇ.ಎಸ್ ಮಳವಳ್ಳಿ ಟೌನ್–571430 9632407806
ಹಾಸನ ಆರ್.ಎನ್.ಸೋಮೇಶ್‌ಗೌಡ, ಹೋಲಿ ಚಿಲ್ಡ್ರನ್ ಶಾಲೆ ಹತ್ತಿರ, ಜಯನಗರ, 1ನೇ ಹಂತ, 2ನೇ ಕ್ರಾಸ್, ಹಾಸನ. 7019311936	**ಕುಶಾಲನಗರ** ರಘು, ಮೈಸೂರು ಮಿತ್ರ ರಿಪೋರ್ಟರ್ ಮನು ಶಾಪ್, ಐ.ಬಿ.ರಸ್ತೆ, ಕುಶಾಲನಗರ 9845698401	**ಜಯಪುರ** ಬಿಳಿಗಿರಿ, ಜಯಪುರ 9945479288
ಪಿರಿಯಾಪಟ್ಟಣ ವಿರೇಶ್, ಪಿರಿಯಾಪಟ್ಟಣ 8660057128	**ವಿರಾಜಪೇಟೆ** ಮಂಜುನಾಥ, ವಿರಾಜಪೇಟೆ 9900949353	**ಯಳಂದೂರು** ವಿ.ನಾಗರಾಜು, ಮೈತ್ರಿ ಮೆಡಿಕಲ್ಸ್, ಬಳೆಪೇಟೆ, ಯಳಂದೂರು 9844349191
ಕೆ.ಆರ್.ಪೇಟೆ (ಶ್ರೀನಿವಾಸ) ಅಗ್ರಹಾರ ಬಾಚಹಳ್ಳಿ, ಕೆ.ಆರ್.ಪೇಟೆ 9449326847, 7022757438	**ಹೆಚ್.ಡಿ.ಕೋಟೆ** ಮುಜುನಾಥ ಎಸ್., ಹೆಚ್.ಡಿ.ಕೋಟೆ 9483574452	**ಕೆ.ಎಂ.ದೊಡ್ಡಿ** ಪತೀಶ್ ಎ.ಎಲ್, ಕೆ.ಎಂ.ದೊಡ್ಡಿ 9242120338
ಹುಣಸೂರು ರಘು, ರಘು ಫೋಟೋ ವರ್ಲ್ಡ್ ಹುಣಸೂರು 9845590889	**ನಂಜನಗೂಡು** ರಂಗಸ್ವಾಮಿ, ನಂ.4565, ಚುನಿ ಕಾಲೋನಿ ಹಿಂಭಾಗ, ನೀಲಕಂಠ ನಗರ, ನಂಜನಗೂಡು ಟೌನ್–571301 9901602226	**ಕೊಳ್ಳೇಗಾಲ** ನಾಗೇಂದ್ರ ಸ್ವಾಮಿ, ನಂ.7ಎ, 684, 14 ನೇ ಕ್ರಾಸ್, ಬಸವೇಶ್ವರ ನಗರ, ಕೊಳ್ಳೇಗಾಲ 9448576247, 7899849868

OWN A PLOT IN MYSORE'S PRIME GROWTH CORRIDOR

Premium Plots Near Mysore Airport
On NH-766 Highway – Easy City Connectivity

MUDA & RERA APPROVED

- 500 m from Toll Plaza
- High-Growth Location
- Ready-to-Build Residential Plots
- Wide Roads & Green Surroundings

Plot Sizes: 30 × 40 | 30 × 50 | 40 × 60

Special Launch Offer - Limited Plots

Call now: **63604 44278 / 63663 84517**

ಮೈಸೂರು ಮಿತ್ರ — ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವು ಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸ ಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

NEW 4 BHK HOUSE FOR SALE

Vijaynagar 4th Stage
30×40 MUDA Allotted Site
West Facing

G+2 Floors	Private Lift
Ground Floor – Parking	Premium Quality Construction
1st Floor – 2 BHK	High Rental Demand
2nd Floor – 2 BHK	Ready for Registration

Call: **77900 88900**

MAHATHMA GANDHI B.ED COLLEGE

KSRTC Bus Depot, Sathagalli, Mysuru

Academic Year: 2025-2026
ADMISSION FOR B.Ed (Last Few Seats Left)

Contact No: 0821-2513349 • 93438 28203

Office: Mahathma Gandhi Trust, (Inside Geethanjali International Global School) #CA-7, BEML Layout, 2nd Stage, Srirampura, Mysore. Email: mahatmagandhitrust@gmail.com

ಸಾರ್ವಜನಿಕ ತಿಳುವಳಿಕೆ ಪತ್ರ

ದಿ:17.03.2026 ರಲ್ಲಿ ಪ್ರಕಟವಾದ ಸಾರ್ವಜನಿಕ ತಿಳುವಳಿಕೆ ಪತ್ರಕ್ಕೆ ಪ್ರತ್ಯುತ್ತರ. ವಕೀಲರವರಾದ ಶ್ರೀ.ಮೋಹನ ಸಿ, ನಂ.390/ಇ, ಮೊದಲನೇ ಮಹಡಿ, 4ನೇ ಮೇನ್, ಮಾರುತಿ ಟೆಂಪಲ್ ರಸ್ತೆ, ಕುವೆಂಪುನಗರ, ಮೈಸೂರು–570023 ರವರ ಮುಖಾಂತರ ಪ್ರಕಟ ಗೊಳಿಸಿರುವ ಸಾರ್ವಜನಿಕ ತಿಳುವಳಿಕೆ ಪತ್ರಕ್ಕೆ ಈ ಮೂಲಕ ಸಾರ್ವಜನಿಕರ ತಿಳುವಳಿಕೆಗೋಸ್ಕರ ದಿನಾಂಕ: 17.03.2026 ರಂದು ಮೈಸೂರು ಮಿತ್ರ ದಿನ ಪತ್ರಿಕೆಯಲ್ಲಿ ಪ್ರಕಟಗೊಂಡಿರುವ ತಿಳುವಳಿಕೆ ಪತ್ರಕ್ಕೆ ಉತ್ತರದ ರೂಪದಲ್ಲಿ ತಿಳಿಯಪಡಿಸುವುದೇನೆಂದರೆ, ಸದರಿ ಸಾರ್ವಜನಿಕ ತಿಳುವಳಿಕೆ ಪತ್ರದ ಅನುಸೂಚಿ ಐಟಂ ನಂ–1 ಮತ್ತು ಐಟಂ ನಂ–2ಕ್ಕೆ ಸಂಬಂಧಿಸಿದಂತೆ ಮೈಸೂರಿನ 4ನೇ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ 701/2022ಕ್ಕೆ ಸಂಬಂಧಿಸಿದ್ದು ಆ ದಾವೆಯಲ್ಲಿನ ಪಕ್ಷಕಾರರಾದ ಶ್ರೀಮತಿ.ಕೃಷ್ಣವೇಣಮ್ಮ ಶ್ರೀ.ಕೆ.ವಿ.ವೆಂಕಟ ಕೃಷ್ಣಪ್ಪ ಶ್ರೀಮತಿ.ನಾಗರತ್ನ, ಶ್ರೀಮತಿ.ವಸಂತಲಕ್ಷ್ಮಿ, ಶ್ರೀ.ಶ್ರೀನಿವಾಸ್‌ಮೂರ್ತಿ, ಶ್ರೀಮತಿ.ಪ್ರೇಮ, ಶ್ರೀ.ಕೆ.–ಜಯರಾಮ್ ಶ್ರೀ.ವಸಂತ.ಡಿ ಶ್ರೀ.ಪ್ರಕಾಶ, ಶ್ರೀ.ರವಿಶಂಕರ ಶ್ರೀ.ಲಕ್ಷ್ಮಣ್ ಸ್ವಾಮಿ, ಶ್ರೀಮತಿ.ರಾಧಾಮಣಿ, ಶ್ರೀ.ಕಿರಣ್ ಕುಮಾರ್ ಶ್ರೀ.ಕೆ.ಎನ್ ಪ್ರಭಾಕರ ಶ್ರೀ.ಕೆ.ಎನ್ ಸತ್ಯ ನಾರಾಯಣ, ಶ್ರೀ.ವೆಂಕಟರಾಮು, ಶ್ರೀಮತಿ.ಸರಸ್ವತಿ ಕೆ. ಶ್ರೀಮತಿ.ಲೀಲಾವತಿ, ಶ್ರೀ.ಗಿರೀಶ್ ಜಿ, ಶ್ರೀ.ಕೆ ಚಂದ್ರಕಾಂತ್ ಮತ್ತು ಶ್ರೀಮತಿ.ಪದ್ಮಾವತಮ್ಮ ಮತ್ತು ಶ್ರೀ.ಶ್ರೀನಿವಾಸ ವಿ. ರವರುಗಳು ಭಾಗಾಂಶವನ್ನು ಕೋರಿದ್ದು ಸದರಿ ದಾವೆಯಲ್ಲಿ 2ನೇ ಪ್ರತಿವಾದಿ ವಿ. ಶ್ರೀನಿವಾಸ ರವರ ಅಪ್ರಾಪ್ತ ವಯಸ್ಸಿನ ಮೊಮ್ಮಗ ಶ್ರೇಯಸ್.ಎಸ್ ರವರಿಗೂ ಆಸ್ತಿಯಲ್ಲಿ ಹಕ್ಕು ಮತ್ತು ಭಾಗಾಂಶ ಇರುತ್ತದೆ. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಸದರಿ ದಾವೆಯು ನ್ಯಾಯಾಲಯದಲ್ಲಿ ಇನ್ನು ವಿಚಾರಣಾ ಹಂತದಲ್ಲಿ ಇರುತ್ತದೆ. ಹಾಗಾಗಿ ದಾವೆಯ ಷಡ್ಯೂಲ್ ಸ್ವತ್ತು ಮತ್ತು ಪತ್ರಿಕಾ ಪ್ರಕಟಣೆಯಲ್ಲಿ ನಮೂದಾಗಿರುವ ಸ್ವತ್ತು ಒಂದೇ ಆಗಿದ್ದು ಸಾರ್ವಜನಿಕರಾರು ಯಾವುದೇ ರೀತಿಯ ವ್ಯವಹಾರವನ್ನು ಮಾಡುವಂತಿಲ್ಲ ಈ ತಿಳುವಳಿಕೆ ಪತ್ರ ಪ್ರಕಟಿಸಿದ ಮೇಲೂ ಯಾರಾದರೂ ಷೆಡ್ಯೂಲ್ ಸ್ವತ್ತಿನ ಬಗ್ಗೆ ವ್ಯವಹರಿಸಿದರೆ ಅದು ನನ್ನ ಕಕ್ಷಿದಾರರಿಗೆ ಬದ್ಧಪಡಿಸುವುದಿಲ್ಲ ಮತ್ತು ಸ್ವತ್ತಿನ ಸಂಬಂಧ ಕ್ರಯದ ಕ್ರಯ ಪತ್ರವನ್ನು ನೋಂದಾಯಿಸಿಕೊಳ್ಳುವ ಪ್ರಕ್ರಿಯೆಯು ನನ್ನ ಕಕ್ಷಿದಾರರಿಗೆ ಬದ್ಧಪಡಿಸುವುದಿಲ್ಲ ಎಂದು ತಿಳಿಯತಕ್ಕದ್ದು.

ಷೆಡ್ಯೂಲ್ ಸ್ವತ್ತಿನ ವಿವರ

ಐಟಂ ನಂ: 1 ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಕರಕನಹಳ್ಳಿ ಗ್ರಾಮದ ಸರ್ವೆ ನಂ 175/2 ರಲ್ಲಿನ ವಿಸ್ತೀರ್ಣ 4 ಎಕರೆ 36 ಗುಂಟೆ ಖುಷ್ಕಿ ಜಮೀನಿಗೆ ಚೆಕ್ಕುಬಂದಿ: ಪೂರ್ವಕ್ಕೆ : ರಸ್ತೆ, ಪಶ್ಚಿಮಕ್ಕೆ 144 ರ ಸರ್ವೆ ನಂಬರಿನ ಜಮೀನು, ಉತ್ತರಕ್ಕೆ : 174 ರ ಸರ್ವೆ ನಂಬರಿನ ಜಮೀನು, ದಕ್ಷಿಣಕ್ಕೆ : ರಸ್ತೆ.

ಐಟಂ ನಂ: 2 ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಕರಕನಹಳ್ಳಿ ಗ್ರಾಮದ ಸರ್ವೆ ನಂ 128 ರಲ್ಲಿನ ವಿಸ್ತೀರ್ಣ 1 ಎಕರೆ 37 ಗುಂಟೆ ಖುಷ್ಕಿ ಜಮೀನಿಗೆ ಚೆಕ್ಕುಬಂಧಿ: ಪೂರ್ವಕ್ಕೆ : 129 ರ ಸರ್ವೆ ನಂಬರಿನ ಜಮೀನು, ಪಶ್ಚಿಮಕ್ಕೆ 127 ರ ಸರ್ವೆ ನಂಬರಿನ ಜಮೀನು, ಉತ್ತರಕ್ಕೆ : 127 ರ ಸರ್ವೆ ನಂಬರಿನ ಜಮೀನು, ದಕ್ಷಿಣಕ್ಕೆ 139 ರ ಸರ್ವೆ ನಂಬರಿನ ಜಮೀನು

Sd/- Jayasheelamma BAL, LL.B.,
Sd/- Kalpana U.M, BAL, LL.B.,
Advocates, Vikalpa Legal Solutions
No: 2796, 1st Floor, 2nd Main B/W 3rd &4th Cross Opp, Ramamandira Temple Jayanagara, Mysuru. Mob: 9980611629
ಸಹಿ/– ಪೂಜಾ ಎಂ ಡಿ, ಕಕ್ಷಿದಾರರು
Place: Mysuru, Date:25-03-2026

POLICE PUBLIC SCHOOL

(Run by the Karnataka State Police Welfare and Education Trust, Mysore)

INVITES APPLICATIONS FROM PROFESSIONALS FOR THE ACADEMIC YEAR 2026-27

Primary Teachers Post - Social Science, English, Art & Craft	Qualification: B.A., B.Ed., Diploma in Art & Craft by any recognized institute
Middle School Teachers Post - Social Science & Hindi	Qualification: B.A., B.Ed.,

Excellent Knowledge in subjects, vision, creativity and originality of approach are necessary along with Excellent Communication Skills. Experience in similar positions in reputed Schools will be an added advantage.
Send in your application with detailed resume **within 04 days** of Publication of this advertisement to

POLICE PUBLIC SCHOOL
Mahadevapura Main Road, Jalapuri, Mysuru-570 019
Ph: 0821-2459900 Email: policepublicschoolresumes@gmail.com
Sd/- Secretary, KSPW & E Trust, Mysore

CNM EDUCATIONAL INSTITUTIONS

MAHADEVAPURA & JAYAPURA

WANTED

Teacher's requirement	Qualification
Primary and High School Section (Kannada, English, Mathematics, Social, Science, Hindi	Degree with B.Ed Primary School Section)
Computer Science, Spoken English) (Female teachers only)	Master degree with B.Ed High School Section)
P E (For both High school & Primary Section) (Male teachers only)	C P.Ed & BP.Ed

Address: #No.710, Mahadevapura Judge quarters, Srirampura village, Mysuru.
Date :27/3/2026 & 28/3/2026
Timings :10:00 AM to 1:00PM

Dr. Sathya Ranna's™ ಶ್ರೇಯಾ ಹಿಯರಿಂಗ್ ಕ್ಲಿನಿಕ್

ನಿಮ್ಮ ಜೀವನವನ್ನು ಪುನಃ ಅಪ್ಪಿಕೊಳ್ಳಿ



UPTO 25% OFF
New Branch in HSR Layout 080 25522200 / 9686449423

HOME VISIT 9945633115

ಪ್ರೀಮಿಯಂ ಮಾದರಿಗಳಲ್ಲಿ ಮಾತ್ರ
*ಮಾರ್ಚ್ 26 ರಿಂದ 28 ರವರೆಗೆ ಉಚಿತ ಶ್ರವಣ ಪರೀಕ್ಷೆ

BOOK FREE APPOINTENT ON WhatsApp +91 9945633113
(Scan This QR to Book Free Trail & Test)

ನಂ.72, ದೇವರಾಜ್ ಅರಸ್ ರಸ್ತೆ, ಮೊದಲ ಮಹಡಿ, ಬೋಜಯ್ಯ ಸಿಲ್ಕ್ಸ್ ಮೇಲೆ, ಮೈಸೂರು - 570 001
Tel: 0821 - 2422543 / 44 Mob: 9686445138
Centers at Hyderabad, Mangaluru & Bangalore
Email -sathya@shreyahearingclinic.com


ರಾಮನವಮಿಯ ಶುಭಾಶಯಗಳು — ಯಶಸ್ವಿ 2ನೇ ವಾರ

ಗಾಯತ್ರಿ ಟಾಕೀಸ್

ನೀವು ನಿಮ್ಮ ದೇಶ ಭಾರತ ಅಂದರೆ ಇಂಡಿಯವನು ಪ್ರೀತಿಸುವ್ವರಾಧರೆ. ನೀವು ದೇಶಭಕ್ತರಾಗಿದ್ದರೆ ಮತ್ತು ನಮ್ಮ ದೇಶದ ಗುಪ್ತಚರ (ಇಂಟೆಲಿಜೆನ್ಸ್) ಮತ್ತು ರಕ್ಷಣಾ ಪಡೆಗಳು (ಡಿಫೆನ್ಸ್ ಫೋರ್ಸ್) ನಮ್ಮನ್ನು ರಕ್ಷಿಸಲು ಹೇಗೆ ಕೆಲಸ ಮಾಡುತ್ತವೆ, ಕಾರ್ಯನಿರ್ವಹಿಸುತ್ತವೆ ಎಂಬುದನ್ನು ತಿಳಿದುಕೊಳ್ಳಲು

"ಧುರಂಧರ- ಧೀ ರಿವೆಂಜ್"

ಚಲನಚಿತ್ರ ನೋಡಿ,
ವೀಕ್ಷಿಸಿ #dhurandhartherevenge



ಮೈಸೂರು ಗಾಯತ್ರಿ–(ಕನ್ನಡ) 3 ಆಟಗಳು	ಹಾಸನ ಸಹ್ಯಾದ್ರಿ–(ಕನ್ನಡ) 3 ಆಟಗಳು	ಕೆ.ಆರ್ ನಗರ ವೆಂಕಟೇಶ್ವರ (ಕನ್ನಡ)–3 ಆಟಗಳು
ಮೈಸೂರು ಸಂಗಮ್–(ಹಿಂದಿ) 3 ಆಟಗಳು	ನಂಜನಗೂಡು ಭಾರ್ಗವಿ–(ಕನ್ನಡ) 3ಆಟಗಳು	ಗುಂಡ್ಲುಪೇಟೆ ವೆಂಕಟೇಶ್ವರ–(ಕನ್ನಡ) 3 ಆಟಗಳು



ಕರ್ನಾಟಕ ಸರ್ಕಾರ – (ಧಾರ್ಮಿಕ ದತ್ತಿ ಇಲಾಖೆ)

ಶ್ರೀ ಶ್ರೀಕಂಠೇಶ್ವರಸ್ವಾಮಿ, ದೇವಾಲಯ, ನಂಜನಗೂಡು

ದೊಡ್ಡಜಾತ್ರಾ ಮಹೋತ್ಸವ – 2026

ಸ್ವಸ್ತಿಶ್ರೀ ವಿಜಾಯಾಭ್ಯುದಯ ಶಾಲಿವಾಹನ ಶಕ ವರ್ಷಂಗಳು 1948ಕ್ಕೆ ಸಲ್ಲುವ ಶ್ರೀ ಪರಾಭವನಾಮ ಸಂವತ್ಸವರದ 2026ನೇ ಸಾಲಿನ ಶ್ರೀ ಗೌತಮ ಪಂಚಮಹಾರಥೋತ್ಸವ ಮತ್ತು ತೆಪ್ಪೋತ್ಸವದ ವಿವರ

1	ದಿ: 27–03–2026 ಶುಕ್ರವಾರ	ಸಂಜೆ: 7.00 ಗಂಟೆಗೆ	"ಶ್ರೀಕಂಠಮುಡಿ ಉತ್ಸವ"
2	ದಿ: 30–03–2026 ಸೋಮವಾರ	ಬೆಳಗ್ಗೆ: 5–50 ರಿಂದ 6–30 ಗಂಟೆಯೊಳಗೆ	"ಶ್ರೀ ಮನ್ಮಹಾಗೌತಮ ರಥಾರೋಹಣ"
3	ದಿ: 01–04–2026 ಬುಧವಾರ	ರಾತ್ರಿ: 7–00 ಗಂಟೆಗೆ	"ಕಪಿಲಾ ನದಿಯಲ್ಲಿ ತೆಪ್ಪೋತ್ಸವ"

ಭಕ್ತ ಮಹಾಶಯರುಗಳಾದ ತಾವುಗಳು ಸಪರಿವಾರ ಸಮೇತ ಸದರಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಶ್ರೀ ಪಾರ್ವತಿ ಸಮೇತ ಶ್ರೀ ಶ್ರೀಕಂಠೇಶ್ವರಸ್ವಾಮಿಯವರ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿಸಿದೆ.

ಸಹಿ/– ಸಿ.ಜಿ.ಕೃಷ್ಣ, ಕಾರ್ಯನಿರ್ವಾಹಕ ಅಧಿಕಾರಿ, ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಾಲಯ, ನಂಜನಗೂಡು

ಸಹಿ/– ಡಾ.ಪಿ.ಶಿವರಾಜು ಕ.ಆ.ಸೇ ಆಡಳಿತಾಧಿಕಾರಿ ಹಾಗೂ ಅಪರ ಜಿಲ್ಲಾಧಿಕಾರಿ, ಮೈಸೂರು ಜಿಲ್ಲೆ, ಮೈಸೂರು.

ಸರ್ವರಿಗೂ ಆದರದ ಸುಸ್ವಾಗತ

ಸಹಿ/– ಲಕ್ಷ್ಮೀಕಾಂತರೆಡ್ಡಿ, ಜಿಲ್ಲಾಧಿಕಾರಿ, ಮೈಸೂರು ಜಿಲ್ಲೆ, ಮೈಸೂರು.

ಸಹಿ/– ಶರತ್ ಬಿ. ಭಾ.ಆ.ಸೇ. ಆಯುಕ್ತರು, ಹಿಂದೂ ಧಾರ್ಮಿಕ ದತ್ತಿಗಳ ಸಂಸ್ಥೆಗಳು, ಮತ್ತು ಧರ್ಮದಾಯ ದತ್ತಿಗಳ ಇಲಾಖೆ,